SAPTHAGIRI(KANNADA)
SPIRITUAL ILLUSTRATED MONTHLY
Volume:02, Issue:9, Pages:56
April - 2023, Price Rs.20/-

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

ಏಪ್ರಿಲ್ 2023
ಬೆಲೆ ರೂ. 20/-



## ಒಂಟಿಮಿಟ್ಟ
## ಶ್ರೀಕೋದಂಡ ರಾಮಸ್ವಾಮಿಯವರ ಕಲ್ಯಾಣೋತ್ಸವ
## 05.04.2023

## 2023 ಫೆಬ್ರವರಿ 11 ರಿಂದ 19 ರ ವರೆಗೆ ನಡೆದ ಶ್ರೀ ಕಲ್ಯಾಣವೆಂಕಟೇಶ್ವರ ಸ್ವಾಮಿಯವರ ಶ್ರೀನಿವಾಸಮಂಗಾಪುರಂ ಬ್ರಹ್ಮೋತ್ಸವಗಳ ದೃಶ್ಯಗಳು









## 2023 ಫೆಬ್ರವರಿ 11 ರಿಂದ 20 ರ ವರೆಗೆ ನಡೆದ ಶ್ರೀ ಕಪಿಲೇಶ್ವರಸ್ವಾಮಿಯವರ ತಿರುಪತಿ ಬ್ರಹ್ಮೋತ್ಸವಗಳ ದೃಶ್ಯಗಳು



# ಭಗವದ್ಗೀತೆ

**ಕುತಸ್ತ್ವಾ ಕಶ್ಮಲಮಿದಂ ವಿಷಮೇ ಸಮುಪಸ್ಥಿತಮ್।**
**ಅನಾರ್ಯಜುಷ್ಟಮಸ್ವರ್ಗ್ಯ ಮಕೀರ್ತಿಕರಮರ್ಜುನ॥**

(ಶ್ರೀಮದ್ಭಗವದ್ಗೀತೆ ಅಧ್ಯಾಯ - 2, ಶ್ಲೋಕ -2)



**ಶ್ರೀಕೃಷ್ಣಾ :**

**ಅರ್ಜುನ, ಬಲ್ಲವರು ಮೆಚ್ಚದ, ಸ್ವರ್ಗಕ್ಕೆ ಒಯ್ಯದ ಮತ್ತು ಕೆಟ್ಟ ಹೆಸರನ್ನು ತರುವ ಈ ದೌರ್ಬಲ್ಯ ನಿನಗೆ ಬರಬಾರದ ಕಡೆ ಹೇಗೆ ಬಂತು?**



ಹದಿನಾಲ್ಕು ಲೋಕವನಾಳುವ ತಂದೆಗೆ
ಮುದದಿಂದ ನಾನೊಬ್ಬ ಭಾರವಾದೆನೆ


ಸುರಗಿರಿಯು ಶರಧಿಯೊಳು ಕಡೆವಾಗ ಮುಣುಗಲು
ಭರದಿಂದ ಪೋಗಿ ಬೆನ್ನಾಂತು ಪೊತ್ತೆ
ಧರಣಿಯು ಮೊರೆಯಿಡಲು ತೆರಳಲ್ಲಿ ಬಂದು
ಭೂತರುಣಿಯನು ಸೆರೆಬಿಡಿಸಿ ಉಳುಹಿಕೊಳ್ಳಲಿಲ್ಲವೆ

ಸುರಪತಿ ಮುನಿದೇಳು ಹಗಲಿರುಳು ಮಳೆಗರೆಯೆ
ಬೆರಳಲ್ಲಿ ಧರಿಸಿ ತುರುಗಳ ಕಾಯ್ದೆ
ವರಮುನಿ ಅಶನವನು ಬೇಡಲು ಬೆದರಿ ನರ
ನರಸಿ ನಿನ್ನ ಕರೆಯೆ ಕರುಣದಲಿ ಪಾಲಿಸಿದೆ

ಜಲಜಾಕ್ಷ ಬೆಟ್ಟವನು ಪೊತ್ತು ಬಳಲಿದಾಗ
ಸಲಹಬೇಕೆಂದು ಬೇಸರಿಸಲಿಲ್ಲಾ
ಸುಲಭದಲಿ ಶೇಷಾಚಲವಾಸನಾಗಿಪ್ಪ
ಒಲಿದೆನ್ನ ರಕ್ಷಿಸೋ ವಿಜಯವಿಠಲನೆ

- ಶ್ರೀ ವಿಜಯದಾಸರು

# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

ತ್ವದುಪಸದನಾದದ್ಯ ಶ್ವೋ ವಾ ಮಹಾಪ್ರಲಯೇಽಪಿ ವಾ ವಿತರತಿ  ನಿಜಂ ಪಾದಾಂಭೋಜಂ ವೃಷಾಚಲಶೇಖರಃ।
ತದಿಹ ಕರುಣೇ ತತ್ತತ್ಕ್ರೀಡಾತರಂಗಪರಂಪರಾ ತರತಮತಯಾ ಜುಷ್ಟಾಯಾಸ್ತೇ  ದುರತ್ಯಯತಾಂ ವಿದುಃ॥79॥

ಹಿಂದಿನ ಪದ್ಯದಲ್ಲಿ ಪ್ರಸಂಗದಿಂದ ಬಂದ ವಿಷಯವು ತಿಳಿಸಲ್ಪಟ್ಟಿತು. ಈ ಪದ್ಯದಲ್ಲಿ ದಯಾದೇವಿಯಲ್ಲಿ ಪ್ರಪತ್ತಿ ಮಾಡಿದವನಿಗೆ ಎಂದಾದರೊಂದು ದಿನ ಮೋಕ್ಷವೆಂಬ ಉತ್ತಮವಾದ ಫಲವು ದೊರೆಯುವುದು ನಿಶ್ಚಯವೆಂದು ಘೋಷಿಸಿ, ಪ್ರಪನ್ನ ಪ್ರಕರಣವನ್ನು ಮುಗಿಸುತ್ತಾರೆ.

ದಯಾದೇವಿಯು ಒಂದು ದೊಡ್ಡ ನದಿಯಂತೆ, ಅದರಲ್ಲಿ ಚೇತನರನ್ನು ವಿಷಯಿಕರಿಸುವುದೆಂಬ ಲೀಲೆಗಳೇ ಅಲೆಗಳು. ಅವು ಚಿಕ್ಕ ವಾಗಿಯೂ ದೊಡ್ಡವಾಗಿಯೂ ಇರುವುವು.  ಅಂದರೆ, ಚೇತನರ ಕರ್ಮಗಳ ತಾರತಮ್ಯವನ್ನು ಅನುಸರಿಸಿ, ದಯಾದೇವಿಯ ಅಲೆಗಳಲ್ಲಿಯೂ ತಾರತಮ್ಯವುಂಟು. ಕೆಲವರಿಗೆ ಶೀಘ್ರುದಲ್ಲಿಯೇ ಫಲವುಂಟಾಗಬೇಕೆಂಬ ಇಚ್ಛೆಯುಂಟಾಗಿ ಅದಕ್ಕೆ ಸರಿಯಾದ ರೀತಿಯಲ್ಲಿ ಉಪಾಯಗಳನ್ನು ಅನುಷ್ಠಿಸಿದರೆ ಆ ದಯಾದೇವಿಯ ಪ್ರವಾಹವೂ, ಅದಕ್ಕೆ ಸರಿಯಾದ ರೀತಿಯಲ್ಲಿ ಪ್ರವಹಿಸುವುದು. ದೊಡ್ಡ ಅಲೆಗಳುಂಟಾಗಿ  ಶೀಘ್ರುದಲ್ಲಿಯೇ ಫಲವು ದೊರಕುವುದು ಹಾಗಿಲ್ಲದೆ  ಮೋಕ್ಷವೇ ಮೊದಲಾದ ಫಲಗಳಲ್ಲಿ ಉತ್ಕಟವಾದ ಇಚ್ಛೆಯಿಲ್ಲದೆ  ನಿಧಾನವಾಗಿ ಫಲವುಂಟಾದರೂ ಬಾಧಕವಿಲ್ಲವೆಂಬ ಅಭಿಪ್ರಾಯದಿಂದ ಉಪಾಯಗಳನ್ನು ಅನುಷ್ಠಿಸಿದರೆ ಅದಕ್ಕೆ ತಕ್ಕಂತೆಯೇ ದಯಾದೇವಿಯ ಪ್ರವಾಹವು ಏರ್ಪಡುವುದು ಚಿಕ್ಕ ಅಲೆಗಳುಂಟಾಗುವುವು.

ಈ ರೀತಿಯಾಗಿ ಚೇತನನು ತನ್ನ ಕರ್ಮಾಕ್ಕನುಗುಣವಾಗಿ ದಯಾದೇವಿಯಲ್ಲಿ  ಯಾವುದರೊಂದು ರೀತಿಯಲ್ಲಿ ಯಾವುದೋ ಒಂದು ಫಲವನ್ನು ಉದ್ದೇಶಿಸಿ  ಪ್ರಪತ್ತಿ ಮಾಡಿದರೂ ಅವರ ಇಷ್ಟದಂತೆ ಇಂದೋ ನಾಳೆಯೋ ಮಹಾಪ್ರಳಯದಲ್ಲಿಯೋ ಎಂದಾದರೂ ಶ್ರೀನಿವಾಸನು ತನ್ನ ತಿರುವಡಿಗಳನ್ನು ಅನುಗ್ರಹಿಸಿಯೇ ತೀರುವನು. ಅಂದರೆ, ಅವನ ತಿರುವಡಿಗಳಲ್ಲಿ ನಿತ್ಯವಾದ ಕೈಂಕರ್ಯವನ್ನು ಮಾಡುವಿಕೆ ಎಂಬ ಮೋಕ್ಷವನ್ನು ಕೊಡುವನು. ಇದರಲ್ಲಿ ಸಂದೇಹವೇ ಇಲ್ಲ ಬೇರೆ ಫಲಗಳನ್ನು ಬಯಸದೆ ಇರುವುದೂ ಶೀಘ್ರುದಲ್ಲಿಯೇ ಮೋಕ್ಷವನ್ನು ಬಯಸುವುದೂ ಹೆಚ್ಚು ಪುಣ್ಯವುಳ್ಳವರಿಗೆ ಮಾತ್ರ ಲಭಿಸುವುದು. ಹಾಗಿಲ್ಲದೆ ಬೇರೆ ಫಲಗಳನ್ನು ಗುರಿಯಾಗಿಟ್ಟುಕೊಂಡೊ ವಿಳಂಬವಾಗಿಯೋ  ಫಲವನ್ನು ಬಯಸಿದರೂ ಕೂಡ ಶ್ರೀನಿವಾಸನ ದಯೆಯನ್ನು ಆಶ್ರಯಿಸಿದವರೇ ಆದರೆ ಅವರಿಗೂ ಕೂಡ ಕಾಲಕ್ರಮದಲ್ಲಿ ಮೋಕ್ಷ ಪರ್ಯಂತವಾದ ಫಲವು ದೂರಕಿಯೇ ದೊರಕುವುದೆಂಬುದೇ ಇಲ್ಲಿನ ಮುಖ್ಯವಾದ ಅಭಿಪ್ರಾಯ ಮಹಾ ಪ್ರಳಯೇಽಪಿ ವಾ ಎನ್ನುವುದು ಚತುರ್ಮುಖ ಬ್ರಹ್ಮಪಟ್ಟಕ್ಕೆ ಸೇರಿದವರಿಗೆ ಪ್ರಾಯಶಃ ಮತ್ತೆ ಸಂಸಾರದಲ್ಲಿ ಪ್ರವೇಶವಿಲ್ಲದಂತೆ ಮಹಾ ಪ್ರಳಯದಲ್ಲಿ ಮೋಕ್ಷವು ದೊರಕುವುದೆಂಬುದನ್ನು ಉದ್ದೇಶಿಸಿಯೇ  ಹೇಳಿರುವ ಮಾತೆಂದು ತಿಳಿಯಬಹುದು.

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸ ಪತ್ರಿಕೆ

ಶ್ರೀ ಶೋಭಕೃತ್
ನಾಮಸಂವತ್ಸರ
ಚೈತ್ರ- ವೈಶಾಖ
ಮಾಸ ಸಂಚಿಕೆ

ಸಂಪುಟ : 02 ಏಪ್ರಿಲ್ - 2023 ಸಂಚಿಕೆ : 09



ವೆಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವ್ರೋ ನ ಭೂತೋ ನ ಭವಿಷ್ಯತಿ

**ಗೌರವ ಸಂಪಾದಕರು**
ಎ.ವಿ. ಧರ್ಮಾರೆಡ್ಡಿ , ಐ.ಡಿ.ಇ.ಎಸ್.
ಕಾರ್ಯನಿರ್ವಹಣಾಧಿಕಾರಿ,.(ಎಫ್.ಎ.ಸಿ.)
ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಡಾ॥ಕೆ.ರಾಧಾರಮಣ, ಎಮ್.ಎ.ಎಮ್.ಫಿಲ್.ಪಿಎಚ್.ಡಿ.

**ಸಂಪಾದಕರು**
ಡಾ॥ ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ .ಪಿ. ರಾಮರಾಜು , ಎಮ್.ಎ.
ವಿಶೇಷಾಧಿಕಾರಿ,
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಗ್ರಹಣ**
ಶ್ರೀ ಪಿ.ಎನ್.ಶೇಖರ್,
ಸಹಾಯ ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.

ಲೇಖನ / ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ - 517 507

**ಇತರ ವಿವರಗಳಿಗೆ**

| | |
|---|---|
| ಕಾರ್ಯಾಲಯ | : 0877 - 2264543 |
| | : 0877 - 2264359 |
| ಸಂಪಾದಕರು | : 0877 - 2264360 |

## ವಿಷಯಸೂಚಿಕೆ

| | | |
|---|---|---|
| ಸಂಪಾದಕೀಯ | | 06 |
| ದೇವನದಿ ಗಂಗಾ ಪುಷ್ಕರ | -ಶ್ರೀಮತಿ .ಪಾರಿಜಾತ ಬಿ.ಎಸ್ | 07 |
| ಶ್ರೀ ಭಗವದ್ ರಾಮಾನುಜರು | - ಪಿ.ಜೆ.ಶ್ರೀನಿವಾಸನ್ | 10 |
| ಅಕ್ಷಯ ಫಲನೀಡುವ ಅಕ್ಷತೃತೀಯ | -ಶ್ರೀಮತಿ ಗಿರಿಜಾ ಎಸ್. ದೇಶಪಾಂಡೆ | 13 |
| ಹಾರಗದ್ದೆ ಶ್ರೀಚನ್ನಕೇಶವ ದೇವಾಲಯ | -ಕೆಂಗೇರಿ ಚಕ್ರಪಾಣಿ | 14 |
| ಹರಿದಾಸಿ ಯದುಗಿರಿಯಮ್ಮನವರ ಶ್ರೀಮದ್ರಾಮಾಯಣ ಕೃತಿಗಳು | - ಡಾ॥ ಸುಮನ ಬ್ರದರೀನಾಥ್ | 15 |
| ವೇಶ್ಯಾವೃತ್ತಿಯನ್ನು ತೊರೆದು ಶರಣೆಯಾದಳುಸಂಕವ್ವ | -ದೀಪಶ್ರೀ ಎಸ್. ಕೂಡ್ಲಗಿ | 17 |
| ಆದಿ ಶಂಕರಾಚಾರ್ಯರು | -ಡಾ॥ ಎಸ್.ನಂಜುಂಡ ಸ್ವಾಮಿ | 18 |
| ಕೊಡ್ಯಡ್ಕ ಅನ್ನಪೂರ್ಣೇಶ್ವರೀ ಕ್ಷೇತ್ರ | - ಬಿ. ಆರ್. ಶ್ರೀಕಂಠಯ್ಯ | 22 |
| ಯಾಜ್ಞಸೇನಿ | - ಡಾ॥ ವಾಣಿಶ್ರೀ ಬಿ.ಎಮ್ | 26 |
| ಹರಿದಾಸ ಶಿರೋಮಣಿ ಶ್ರೀಮೊದಲಕಲ್ಲು ಶೇಷದಾಸರು | -ಶ್ರೀಧರ ರಾಯಸಂ | 31 |
| ವೆಂಕಟಾಚಲ ಮಹಾತ್ಮೆ ವಚನ ರೂಪ | -ಶ್ರೀಮತಿ .ಪಾರ್ವತಿ . ಎನ್ | 32 |
| ಉಪನಿಷದ್ ಸಂದೇಶ | - ಪ್ರೊ॥ ಪದ್ಮನಾಭರಾವ್ | 34 |
| ಸೂರ್ಯಘಾತ ಸನಾತನ ವೈದ್ಯ | - ಶ್ರೀಮತಿ | 36 |
| ಜೋಗಿಯ ಕಂಡೆ ಪರಮ ಯೋಗಿಯ ಕಂಡೆ | -ಡಾ॥ ಸುಭಾಸ ಕಾಖಂಡಕಿ | 38 |
| 108 ವೈಷ್ಣವ ದಿವ್ಯದೇಶಗಳು ತಿರುವಾದನೂರ್ | - ಸೂರ್ಯವಂಶಿ | 39 |
| ಭಾಗವತ ಪ್ರಿಯ ಶ್ರೀವಿಜಯಧ್ವಜ ತೀರ್ಥರು | - ಓಂ ಪ್ರಕಾಶ್‌ಭಟ್ | 41 |
| ಚಿತ್ರಾಪೂರ್ಣಿಮೆ ಕರಗದ ಆಚರಣೆ | -ಡಾ॥ ಗುರುರಾಜ ಪೊಶೆಟ್ಟಿಹಳ್ಳಿ | 43 |
| ರಾಶಿ ಫಲಗಳು | - ಬ್ರಹ್ಮಶ್ರೀ ಟಿ.ವಿ.ಕೆ.ಪೂರ್ಣ ಪ್ರಸಾದ್ ಸಿದ್ಧಾಂತಿ | 45 |
| ಕನ್ಯಾಕಾಪರಮೇಶ್ವರಿ ಆದಿಶಕ್ತಿ ಅವತಾರ | - ಡಾ॥ ಎಸ್. ಕಿರಣ್‌ಕುಮಾರ್ ಶಾಸ್ತ್ರೀ | 46 |
| ಸಂಸ್ಕೃತ ಕಲಿಯೋಣ | - ಮಹಾಮಹೋಪಾಧ್ಯಾಯ ಸಮುದ್ರಾಲ ಲಕ್ಷ್ಮಣಯ್ಯ | 47 |
| ನೀತಿ ಕಥೆ - ನಾವು ನಿತ್ಯವೂ ವಿಶಾಲರಾಗೋಣ | -ಎ. ಆರ್. ರಘುರಾಮ್ | 48 |
| ರಸಪ್ರಶ್ನೆಗಳು | | 50 |
| ಚಿತ್ರ ಕಥೆ - ಭಗೀರಥ ಪ್ರಯತ್ನ | - ಡಾ॥ ಕೆ. ರವಿಚಂದ್ರನ್ | 52 |

ಮುಖಚಿತ್ರ -ಶ್ರೀ ಸೀತಾ ಸಮೇತ ಶ್ರೀಕೋದಂಡರಾಮಸ್ವಾಮಿ, ಒಂಟಿಮಿಟ್ಟ
ಹಿಂಬದಿಚಿತ್ರ - ಗಂಗಾ ಆರತಿ, ಚಿತ್ರಕಲೆ


24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಲಹೆ/ದೂರುಗಳಿಗೆ ಟೋಲ್ ಫ್ರೀ ಸಂಖ್ಯೆ :
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org

ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org
ಮೂಲಕ ಓದಬಹುದು.

| | |
|---|---|
| ಬಿಡಿ ಪ್ರತಿ | ರೂ. 20/- |
| ವಾರ್ಷಿಕ ಚಂದಾ | ರೂ. 240/- |
| ಆಜೀವ ಚಂದಾ (12 ವರ್ಷಗಳು) | ರೂ. 2400/- |
| ವಿದೇಶಿ ವಾರ್ಷಿಕ ಚಂದಾ | ರೂ. 1030/- |

ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

## ಸಂಪಾದಕೀಯ



# ಜಲದೇವತೆಗೆ ಪಾದಾಭಿವಂದನೆ

ಮಾನವನ ಜೀವನವೆಲ್ಲಾ ನದಿಯೊಂದಿಗೆ ಬೆಸದುಕೊಂಡಿದೆ. ಒಂದು ಪ್ರಾಂತದಲ್ಲಿನ ಪ್ರಜೆಗಳ ಸಂಸ್ಕೃತಿ, ಆಚಾರ ವ್ಯವಹಾರಗಳು, ಆರ್ಥಿಕ ಸ್ಥಿತಿ ಗತಿಗಳು, ಅಭಿವೃದ್ಧಿ ಇವೆಲ್ಲವೂ ಅಲ್ಲಿರುವ ನದಿಗಳ ಮೇಲೇ ಆಧಾರಗೊಂಡಿರುತ್ತವೆ. ಅದಕ್ಕೇ ಮಾನವರು ತಮ್ಮ ಜೀವನಕ್ಕೆ ಆಸರೆಯಾಗಿರುವ, ಆಧಾರವಾಗಿರುವ ನದಿಗಳನ್ನು, ನೀರಿನ ಸಂಪತ್ತನ್ನು ಪ್ರಕೃತಿದೇವತೆ ಎಂದು ಆರಾಧಿಸುತ್ತಾರೆ, ಪೂಜಿಸುತ್ತಾರೆ. ನಮ್ಮ ಸನಾತನ ಧರ್ಮದಲ್ಲಿ ನದಿಗಳಿಗೆ ವಿಶೇಷವಾದ ಮತ್ತು ಪವಿತ್ರವಾದ ಸ್ಥಾನಗಳನ್ನು ನೀಡಲಾಗಿದೆ.

ನಮ್ಮ ದೇಶದಲ್ಲಿ ಹಲವಾರು ನದಿಗಳು ಇದ್ದರೂ ಪ್ರಮುಖವಾಗಿ ನಾವು ಸ್ಮರಿಸುವುದು, ನಮಸ್ಕರಿಸುವುದು ಗಂಗಾನದಿಯನ್ನು ಮಾತ್ರಾ! ಜೀವನದಲ್ಲಿ ಒಮ್ಮೆಯಾದರೂ ಗಂಗೆಯಲ್ಲಿ ಮಿಂದು ಪವಿತ್ರರಾಗಬೇಕೆಂದು ಪ್ರತಿಯೊಬ್ಬರೂ ಬಯಸುತ್ತಾರೆ. ಈ ನದಿಯನ್ನು "ಅಮ್ಮ" ಎಂಬ ಹೆಸರನ್ನು ಸೇರಿಸದೇ ಸಂಬೋಧನೆಯನ್ನೇ ಮಾಡುವುದಿಲ್ಲ. ಗಂಗಮ್ಮ ಎಂದೇ ಆ ನದಿಯನ್ನು ಕರೆಯುತ್ತೇವೆ. ಅಮ್ಮ ಎಂಬ ಪದದಿಂದಾಗಿ ಗಂಗಾ ಮಾತೆ ಮಾನವರೊಂದಿಗೆ ಬಲವಾದ ಅನುಬಂಧವನ್ನು ಬೆಳಸಿಕೊಂಡಿದೆ. ಭಾರತೀಯರ ಜೀವನದಲ್ಲಿ ಹಾಸುಹೊಕ್ಕಾಗಿ ಹೋಗಿದೆ. ಸನಾತನ ಧರ್ಮಕ್ಕೆ ಮೂಲ ಕಾರಣವಾಗಿರುವ ಗಂಗಾ ನದಿಯಿಂದಾಗಿಯೇ ಭಾರತ ದೇಶಕ್ಕೆ ಇಷ್ಟು ಹೆಸರು ಪ್ರಖ್ಯಾತಿ ಬಂದಿದೆ. ವರ್ಷಕ್ಕೆ ಒಮ್ಮೆ ಎರಡು ಕೋಟಿ ಜನಕ್ಕಿಂತಲೂ ಹೆಚ್ಚಾಗಿ ಸಂದರ್ಶಿಸುವ ಗಂಗಾ ನದಿಯನ್ನು ಭಾರತೀಯರ ಆತ್ಮವೆಂದು ಭಾರತದ ಪ್ರಪ್ರಥಮ ಪ್ರಧಾನಮಂತ್ರಿಗಳಾಗಿದ್ದ ಪಂಡಿತ್ ಜವಹರ್ ಲಾಲ್ ನೆಹರೂ ಅವರು ಬಣ್ಣಿಸಿದ್ದಾರೆ. ನಾವು ಎಲ್ಲಿ ಹೋದರೂ ಗಂಗಾನದಿ ಎಂಬ ಹೆಸರು ಹೇಳಿದಾಗ ಎರಡೂ ಕೈ ಎತ್ತಿ ನಮಸ್ಕರಿಸದವರು ಇರುವುದಿಲ್ಲ. ಗಂಗಾ ಸ್ನಾನವೆಂದರೆ ಪರವಶಿಸುತ್ತಾರೆ. ಉಳಿದ ನದೀಜಲಗಳು ಮನೆಯಲ್ಲಿ ಇರುತ್ತವೋ ಇಲ್ಲವೋ ಆದರೆ ಯಾರಾದರೂ ಕಾಶಿ ಯಾತ್ರೆಗೆ ಹೋಗಿ ಬಂದರೆ ಗಂಗಾನದಿ ಜಲವನ್ನು ತುಂಬಿರುವ ಒಂದು ಚಿಕ್ಕ ಕಲಶವನ್ನಾದರೂ ತೆಗೆದುಕೊಂಡು ಬಂದಿರುತ್ತಾರೆ. ಆ ರೀತಿ ಮಾಡುವುದು ಪವಿತ್ರವೆಂದೂ ಆ ನದೀ ಜಲವನ್ನು ಪೂಜಮಂದಿರದಲ್ಲಿ ಇರಿಸಿಕೊಂಡು ಪ್ರತಿನಿತ್ಯವೂ ನಮಸ್ಕಾರ ಮಾಡುವುದು ವಾಡಿಕೆ. ಪರಮ ಪವಿತ್ರವಾದ ವಸ್ತುವಿನ ಬಗೆಗೆ ಹೇಳಬೇಕೆಂದರೆ ಗಂಗೆಯನ್ನು ಪವಿತ್ರ ಎನ್ನುತ್ತೇವೆ. ಗಂಗಾ ಸಂಬಂಧ ಸ್ಪರ್ಶವಿಲ್ಲದೇ ಯಾವ ಪುರಾಣ, ಕಾವ್ಯಗಳು ಕಂಡು ಬರುವುದಿಲ್ಲ. ಗಂಗಾಸ್ನಾನ, ಸಂಪ್ರೋಕ್ಷಣೆ, ದರ್ಶನ, ಗಂಗಾನಾಮ, ಸ್ಮರಣೆ ಅಷ್ಟು ಉತ್ಕೃಷ್ಟವಾಗಿ ಕೀರ್ತಿಸಲ್ಪಟ್ಟಿವೆ. ಶಂಕರಭಗವತ್ಪಾದರು ತಮ್ಮ ಭಜಗೋವಿಂದ ಕೃತಿಯಲ್ಲಿ,

ಭಗವದ್ಗೀತಾ ಕಿಂಚಿದಧೀತಾ ಗಂಗಾಜಲ ಲವಕಣಿಕಾಪೀತಾ।
ಸಕೃದಪಿ ಯೇನ ಮುರಾರಿ ಸಮರ್ಚಾಕ್ರಿಯತೇ ತಸ್ಯ ಯಮೇನ ನ ಚರ್ಚಾ॥

ಸ್ವಲ್ಪವಾದರೂ ಭಗವದ್ಗೀತೆಯನ್ನು ಒಂದು ಬಿಂದುವನ್ನಾದರೂ ಗಂಗಾನದೀ ಜಲವನ್ನು ಕುಡಿದು ಒಮ್ಮೆಯಾದರೂ ಮುರಾರಿಯನ್ನು ಪೂಜಿಸಿದವರಿಗೆ ಯಮನೊಂದಿಗೆ ಕಾದಾಟ ಇರುವುದಿಲ್ಲ ಎಂದು ಮೇಲಿನ ಶ್ಲೋಕದ ತಾತ್ಪರ್ಯ. ಇಷ್ಟು ಪವಿತ್ರವಾದ ಮಹಿಮೆಯುಳ್ಳ ಗಂಗಾನದಿಯಲ್ಲಿ ಪುಷ್ಕರವು ಈ ತಿಂಗಳ 22 ರಿಂದ ಪ್ರಾರಂಭವಾಗುತ್ತವೆ. ಪುಷ್ಕರಗಳು ಎಂದರೆ ಸ್ನಾನಗಳು, ದಾನಗಳು ಎಂದರ್ಥ ಪ್ರಕೃತಿಯ ಆರಾಧನೆಯಲ್ಲಿ ಇದೂ ಒಂದು ಭಾಗ. ಆಕಾಶದಷ್ಟು ಗಂಗಾನದಿ ಅನಂತವಾಗಿದೆ. ಭೂದೇವತೆ ಗಂಗಾದೇವಿ, ಕಣ್ಣ ತುಂಬಾ ಗಂಗಾಮಾತೆ ಹೃದಯದ ತುಂಬಾ ಗಂಗಾ, ಗುಡಿಯ ದೀಪದಂತೆ ಗಂಗಾಮಾತೆ ಬೆಳಗುತ್ತಲೇ ಇದ್ದಾಳೆ. ಒಮ್ಮೆ ಗಂಗಾ ನದಿಯನ್ನು ದರ್ಶಿಸಿದರೆ ಭಕ್ತರು ತನ್ಮಯತೆಗೆ ಒಳಗಾಗುತ್ತಾರೆ. ಪುಷ್ಕರಗಳ ಸಮಯದಲ್ಲಿ ಗಂಗಾನದಿಯನ್ನು ಅತ್ಯಂತ ಅಂದವಾಗಿ ಸಿದ್ಧಗೊಳಿಸುತ್ತಾರೆ. ಕಾಶೀಕ್ಷೇತ್ರದಲ್ಲಿನ ಘಾಟ್ ಎಲ್ಲವನ್ನೂ ದೀಪಗಳಿಂದ ಅಲಂಕರಿಸಿರುತ್ತಾರೆ. ಹಾಡುಗಳೊಂದಿಗೆ ಪರವಶಗೊಳ್ಳುವಂತಿರುತ್ತದೆ. ಶಂಖ ಧ್ವನಿ ಎಲ್ಲೆಲ್ಲೂ ಮೊಳಗುತ್ತಿರುತ್ತವೆ. ಢಮರುಗ ನಾದ ಮೈಝುಮ್ಮೆನಿಸುವಂತಿರುತ್ತದೆ. ಗಂಟಾನಾದ ಗಂಗೆಯ ತರಂಗಗಳಂತೆ ಗಲಗಲ ಎನ್ನುತ್ತಿರುತ್ತವೆ. ಭಕ್ತರಲ್ಲಿ ತಿಳಿಯದ ತನ್ಮಯತೆ, ಹೇಳಲಾರದಷ್ಟು ಸಂತೋಷ ತುಂಬಿರುತ್ತದೆ ಎಲ್ಲಿ ನೋಡಿದರೂ ರೇಷ್ಮೆ ಪಂಚೆಗಳು, ರೇಷ್ಮೆ ಶಲ್ಯಗಳು, ಕೆಂಪು ಬಣ್ಣದ ವಸ್ತ್ರಗಳು, ಕೈಯಲ್ಲಿ ಆರತಿಯ ದೀಪಗಳು, ಕಣ್ಣುಗಳಲ್ಲಿ ಭಕ್ತಿ ಶ್ರದ್ಧೆ, ನೋಡುಗರಿಗೆ ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತಿರುತ್ತವೆ. ಆರತಿಗಳು, ತಂಪಾದ ಗಾಳಿಯನ್ನು ಹೃದಯದಲ್ಲಿ ತುಂಬಿಕೊಂಡ ಗಂಗಾಮಾತೆ ತನ್ನಲ್ಲಿ ಮಿಂದವರನ್ನು ಪವಿತ್ರರನ್ನಾಗಿಸಿ ಅವರನ್ನು ಹರಸಿ ಗಂಭೀರವಾಗಿ ಮುಂದಕ್ಕೆ ಸಾಗುತ್ತಿರುತ್ತಾಳೆ. ನಿತ್ಯ ಅಗತ್ಯವಾದ ನೀರಿನ ದೇವತೆಗೆ ಪುಷ್ಕರದ ಸಂದರ್ಭದಲ್ಲಿ ಪೂಜೆಗಳನ್ನು ಆಚರಿಸುವುದು, ಧೂಪ,ದೀಪ, ನೈವೇದ್ಯಗಳನ್ನು ಸಮರ್ಪಿಸುವುದು ನಮ್ಮ ಸಂಸ್ಕಾರ.

ಇದರಲ್ಲಿನ ಭಾಗವಾಗಿ ಪವಿತ್ರ ಗಂಗಾಮಾತೆ ಪುಷ್ಕರಗಳನ್ನು ಪುರಸ್ಕರಿಸಿಕೊಂಡು ಈ ಮಾಸದ ಸಪ್ತಗಿರಿ ಪತ್ರಿಕೆಗಳನ್ನು ಗಂಗಾ ಪುಷ್ಕರಗಳ ಪ್ರತ್ಯೇಕ ಸಂಚಿಕೆಯಾಗಿ ಪ್ರಕಟಿಸುತ್ತಿದ್ದೇವೆ. ಭಕ್ತರು, ಪಾಠಕರು ಈ ಪ್ರತ್ಯೇಕ ಸಂಚಿಕೆಯನ್ನು ಆದರಿಸಿ ಗಂಗಾಮಾತೆಯ ಕೃಪೆಗೆ ಪಾತ್ರರಾಗಬೇಕೆಂದು ಆಶಿಸುತ್ತಿದ್ದೇವೆ. ಹಾಗೆಯೇ ಭಕ್ತರೆಲ್ಲರೂ ಗಂಗಾ ಪುಷ್ಕರ ಯಾತ್ರೆಯನ್ನು ಮಾಡಿ, ಮುಕ್ತಿಯನ್ನು ಮನೋಲ್ಲಾಸವನ್ನು ಪಡೆಯಬೇಕೆಂದು ಹಾಗೇ ಗಂಗಾಮಾತೆಯ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಆಶಿಸುತ್ತಿದ್ದೇವೆ.



ದೇವಿ। ಸುರೇಶ್ವರಿ! ಭಗವತಿ! ಗಂಗೆ ತ್ರಿಭುವನತಾರಿಣೆ ತರಳ ತರಂಗೇ।
ಶಂಕರಮೌಳಿ ವಿಹಾರಿಣೆ ! ವಿಮಲೇ! ಮಮ ಮತಿ ರಾಸ್ತಾಂ ತವ ಪದಕಮಲೇ



# ದೇವನದಿ ಗಂಗಾ ಪುಷ್ಕರ

- ಶ್ರೀಮತಿ. ಪಾರಿಜಾತ ಬಿ. ಎಸ್.
90083 35689

ಗಂಗಾ ಗಂಗೇತಿ ಯೋ ಬ್ರೂಯಾತ್ ಯೋಜನಾನಾಂ ಶತೈರಪಿ।
ಮುಚ್ಯತೇ ಸರ್ವಪಾಪೇಭ್ಯೋ ವಿಷ್ಣುಲೋಕಂ ಸಗಚ್ಛತಿ।
ತೀರ್ಥರಾಜಾಯ ನಮಃ

(ಸ್ಕಂದ ಪುರಾಣ ಖಂಡ 3 ಧರ್ಮಾರಣ್ಯ ಖಂಡ)

"ಸಾವಿರಾರು ಮೈಲಿ ದೂರದಿಂದ ಗಂಗಾ ಗಂಗಾ ಎಂದು ಯಾರು ಗಂಗೆಯ ಸ್ಮರಣೆ ಮಾಡುವರೋ ಅವರು ಸಕಲ ಪಾಪಗಳಿಂದ ಮುಕ್ತರಾಗಿ ವಿಷ್ಣುಲೋಕ ತಲುಪುತ್ತಾರೆ. "

ಪ್ರಕೃತಿ ಮಾತೆಯ ಮಡಿಲಲ್ಲಿ ಆಶ್ರಯ ಪಡೆದಿರುವ ನಾವು. ಪ್ರತೀಕ್ಷಣವೂ ಆಕೆಯ ಅವಲಂಬಿಗಳು ಇಂತಹ ಪ್ರಕೃತಿಯ ಇಡೀ ಭಾಗ ವನ್ನು ಆವರಿಸಿಕೊಂಡು,ಯಾವುದರಿಂದ ಹೇಗೆ ಅನುಕೂಲ ಪಡೆಯ ಬಹುದೆಂದು ಪ್ರತೀಕ್ಷಣವೂ ಲೆಕ್ಕಾಚಾರ ಮಾಡುತ್ತಿರುತ್ತೇವೆ. ಇಂತಹ ಪ್ರಕೃತಿಯ ಅತ್ಯಂತ ಪ್ರಮುಖವಾದ ಸಂಪನ್ಮೂಲಗಳಲ್ಲಿ ಜಲಸಂಪತ್ತು ಮಹತ್ವದ ಸ್ಥಾನ ಪಡೆಯುತ್ತದೆ. ಇದರಲ್ಲಿ ಸಾಗರ ಸಮುದ್ರಗಳು, ನದಿಗಳು ಹೆಚ್ಚಿನ ಪಾತ್ರವಹಿಸುತ್ತದೆ. ನದಿಯೆಂದರೆ ಕೇವಲ ನೀರಷ್ಟೇ ಅಲ್ಲ ಅದೊಂದು ಜೀವಂತ ಶಕ್ತಿ. ಪ್ರಾಣಿ, ಪಕ್ಷಿ, ಜಲಚರ, ಸಸ್ಯಗಳು ಹಾಗೂ ಹೆಚ್ಚಾಗಿ ಮಾನವ ಪ್ರಪಂಚಕ್ಕೆ ಆಧಾರವಾಗಿದೆ. ಅನಾದಿ ಕಾಲದಿಂದಲೂ ನಮ್ಮ ಭವ್ಯ ಸಂಸ್ಕೃತಿಯನ್ನು ಬೆಳೆಸಿ ಉಳಿಸಿರುವ ತೊಟ್ಟಿಲುಗಳಾಗಿವೆ. ಅಂತೆಯೇ ನಮ್ಮ ದೇಶದ ಪ್ರತೀ ನದಿಗೂ ಸ್ವಾರಸ್ಯಕರ ಹಿನ್ನೆಲೆಗಳಿವೆ.


ಪ್ರಪಂಚದ ದೇಶಗಳ ಸಾಲಿನಲ್ಲಿ ನಮ್ಮ ಭಾರತ ವಿಶಿಷ್ಠತೆಯನ್ನು, ವೈವಿಧ್ಯತೆಯನ್ನು ಹೊಂದಿದ ದೇಶವಾಗಿದೆಯೆಂಬುದು ಶ್ಲಾಘನೀಯ ವಾಗಿದೆ. ಭೂಮಿಯ ಪ್ರಾಕೃತಿಕ ಸಂಪತ್ತಿನಲ್ಲಿ ಹೆಚ್ಚಿನ ಭಾಗವನ್ನು ಆವರಿಸಿ ರುವ ಜಲಸಂಪತ್ತಿನಲ್ಲಿ ಭಾರತದ ಅನೇಕ ನದಿಗಳ ಪಾತ್ರವು ಮಹತ್ವ ದಾಗಿದೆ. ಭಾರತದ ದೊಡ್ಡ ನದಿಯೆನಿಸಿರುವ ಗಂಗಾ ನದಿಯು ಪಾವಿತ್ರ್ಯ ತೆಯ ದರ್ಪಣವಾಗಿದೆ. ಮಳೆಗಾಲದ ಮಳೆ ನೀರಿನಿಂದ, ಬೇಸಿಗೆಯಲ್ಲಿ ಹಿಮಕರಗಿದ ನೀರಿನಿಂದ ಸದಾ ತುಂಬಿ ಹರಿವ "ಜೀವನದಿ"ಯಾಗಿದೆ. ಗಂಗೆಯನ್ನು ಜಾಹ್ನವಿ, ವಿಷ್ಣುಪಾದಿ ಹರಶೇಖರಾ, ಭಾಗೀರಥಿ, ಮಂದಾ ಕಿನೀ, ತ್ರಿಪಥಗಾ, ಹೀಗೆ ವಿವಿಧ ಹೆಸರುಗಳಿಂದ ಕರೆಯಲಾಗುತ್ತದೆ.

ಸಕಲ ಜೀವಸಂಕುಲದ ಜೀವ ಹಾಗೂ ಜೀವನಕ್ಕೆ ಆಧಾರವಾಗಿರುವ ನದಿಗಳು ಕೇವಲ ನೀರಿನ ನೆಲೆಯಾಗಿರದೆ, ಧನಾತ್ಮಕ ಶಕ್ತಿಯ ಪವಿತ್ರ ತೀರ್ಥ ಕ್ಷೇತ್ರಗಳ ನಿರ್ಮಾಣಕ್ಕೂ ಕಾರಣವಾಗಿವೆ. ಇಂತಹ ನದಿಗಳನ್ನು ತಾಯಿ ಯಾಗಿ ಪೂಜಿಸುವ ಅನೇಕ ಧಾರ್ಮಿಕ ಆಚರಣೆಗಳು ನಮ್ಮಲ್ಲಿವೆ. ಮಹಾ ಕಾವ್ಯ ಹಾಗೂ ಪುರಾಣಗಳಲ್ಲಿ "ದೇವನದಿ"ಯೆಂದು ವರ್ಣಿಸಲಾಗಿದೆ. "ಗಂಗಾ ಸ್ನಾನ- ತುಂಗಾ ಪಾನ" ಎಂಬಂತೆ ಗಂಗೆಯಲ್ಲಿ ಮಿಂದೆದ್ದು ತಮ್ಮ ತನುಮನವನ್ನು ಪವಿತ್ರಗೊಳಿಸಿಕೊಳ್ಳುವ ಆಚರಣೆ ಬಹು ಹಿಂದಿನಿಂದಲೂ ರೂಢಿಯಲ್ಲಿದೆ. ಇದರಂತೆ ವೈಶಾಖ ಸಪ್ತಮಿಯನ್ನು ಗಂಗಾ ಸಪ್ತಮಿಯೆಂದು ಕರೆಯುತ್ತಾರೆ. ಗಂಗಾ ತೀರದ ಮರಣ ಬಹು ಪುಣ್ಯವೆಂದು ಹೇಳಲಾಗುತ್ತದೆ.

## ಪುಷ್ಕರ

'ಪುಷ್ಕರ' ವೆಂದರೆ ನದಿಗಳನ್ನು ಪೂಜಿಸುವ ಹಬ್ಬವಾಗಿದೆ. ಪುಷ್ಕರ, ಪುಷ್ಕರಂ, ಪುಷ್ಕರಾಲು, ಪುಷ್ಕರ್ ಹೀಗೆ ವಿವಿಧ ಹೆಸರುಗಳಿಂದ ಕರೆಯುವ ಈ ಹಬ್ಬವನ್ನು ಪವಿತ್ರ ನದಿಗಳ ಪೂಜಾರಾಧನೆ, ದೀಪಾರಾಧನೆ, ನದಿ ದಡ ದಲ್ಲಿರುವ ಪವಿತ್ರ ಯಾತ್ರಾ ಸ್ಥಳಗಳಲ್ಲಿ, ದೇವಾಲಯಗಳಲ್ಲಿ ವಿಶೇಷ ಪೂಜೆ, ಆಧ್ಯಾತ್ಮಿಕ,ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಜಲ ಮೂಲಗಳಿಗೆ ಹಾಗೂ ಜಲದೇವತೆಗೆ ಸಲ್ಲಿಸುವ ಕೃತಜ್ಞತೆಯಾಗಿದೆ. ಗುರು ಗ್ರಹವು ನಿರ್ದಿಷ್ಟ ರಾಶಿಯನ್ನು ಪ್ರವೇಶಿಸಿದಾಗ ನದಿಗಳು ದೈವೀಶಕ್ತಿಯನ್ನು ಪಡೆಯುತ್ತವೆಂದು ನಂಬಲಾಗಿದೆ ಇಂತಹ ಸಮಯದಲ್ಲಿ ನದಿ ಸ್ನಾನ ಮಾಡು ವುದರಿಂದ ಅನಂತ ಪುಣ್ಯಫಲ ಪ್ರಾಪ್ತಿಯಾಗುತ್ತದೆಯೆಂಬ ನಂಬಿಕೆಯಿದೆ. ಅದರಂತೆ ಪವಿತ್ರ "ಪುಷ್ಕರ" ನಡೆಯುತ್ತದೆ. ಭಾರತದ 12 ಪ್ರಮುಖ ನದಿಗಳ

ದಡದಲ್ಲಿರುವ ದೇವಾಲಯಗಳು ಹಾಗೂ ಪ್ರತೀ ನದಿಯ ಉದ್ದಕ್ಕೂ 12 ವರ್ಷಗಳಿಗೊಮ್ಮೆ ಈ ಪುಷ್ಕರ ನಡೆಯುತ್ತದೆ. ರಾಶಿಚಕ್ರದ ಚಿಹ್ನೆಯೊಂದಿಗೆ ಪ್ರತೀ ನದಿಯ ಸಂಬಂಧವನ್ನು ಆಧರಿಸಿ ನದಿಯ ಹಬ್ಬಕ್ಕೆ ಗುರು ಯಾವ ರಾಶಿಯಲ್ಲಿದ್ದಾನೆಂಬುದನ್ನು ಲೆಕ್ಕಾಚಾರ ಮಾಡಿ ಆಚರಿಸಲಾಗುತ್ತದೆ. ಬಹು ಹಿಂದೆ ಈ ಕುರಿತು ಯಾವುದೇ ಹಿಂದೂ ಗ್ರಂಥಗಳಲ್ಲಿ ಹೆಚ್ಚಿನ ಮಾಹಿತಿಯಿಲ್ಲದ್ದಿದ್ದರೂ ಮಧ್ಯಕಾಲಿನ ಹಿಂದೂ ಜೋತಿಷ್ಯ ಸಿದ್ಧಾಂತದ ಪ್ರಕಾರ ಸಂಪ್ರದಾಯ ಆಚರಣೆಗಳು ಪ್ರಚಲಿತದಲ್ಲಿವೆ. ಮೇಷರಾಶಿಯಲ್ಲಿದ್ದಾಗ ಗಂಗಾ, ವೃಷಭ- ನರ್ಮದಾ, ಕರ್ಕಾಟಕ-ಯಮುನಾ, ಸಿಂಹ-ಗೋದಾವರಿ ತುಲಾ-ಕಾವೇರಿ, ವೃಶ್ಚಿಕ-ಭೀಮಾ,ತಾಮ್ರಪರ್ಣಿ, ಧನಸ್ಸು- ಬ್ರಹ್ಮಪುತ್ರ, ಮಕರ-ತುಂಗಭದ್ರ, ಹೀಗೆ ವಿವಿಧ ನದಿಗಳ ಪುಷ್ಕರವನ್ನು ಆಯಾ ಸಮಯದಲ್ಲಿ ಆಚರಿಸುವ ಸಂಪ್ರದಾಯ ಭಾರತದಲ್ಲಿದೆ. ಗುರುವು ರಾಶಿಚಕ್ರ ಚಿಹ್ನೆಯನ್ನು ಪ್ರವೇಶಿಸುವ ಮುನ್ನ 12 ದಿನಗಳನ್ನು 'ಆದಿಪುಷ್ಕರ' ವೆಂದೂ ನಂತರದ ಕೊನೆಯ 12 ದಿನಗಳನ್ನು 'ಅಂತ್ಯ ಪುಷ್ಕರ'ವೆಂದು ಆಚರಿಸಲಾಗುತ್ತದೆ.



## ಗಂಗಾ ಪುಷ್ಕರ


ಭಾರತದ ಪ್ರಸಿದ್ಧ ಗಂಗಾ ನದಿಯನ್ನು ಪೂಜಿಸುವ ಹಬ್ಬವಾಗಿದೆ. ಗುರುವು ಅಶ್ವಿನಿ ನಕ್ಷತ್ರ, ಮೇಷರಾಶಿಗೆ ಪ್ರವೇಶಿಸಿದ ಶುಭ ಸಮಯದಲ್ಲಿ ಆಚರಿಸುವ ಧಾರ್ಮಿಕ ಕಾರ್ಯಕ್ರಮವಾಗಿದೆ. ಈ ಆಚರಣೆಯನ್ನು 12 ವರ್ಷಗಳಿಗೊಮ್ಮೆ ಆಚರಿಸಲಾಗುತ್ತದೆ. ಗುರುವು ಮೇಷರಾಶಿ ಪ್ರವೇಶಿಸಿದ 12 ದಿನಗಳು ಈ ಆಚರಣೆ ವಿಜೃಂಭಣೆಯಿಂದ ನೆರವೇರುತ್ತದೆ. ಗಂಗಾ ಕ್ರಮಿಸುವ ಮಾರ್ಗದ ಉದ್ದಕ್ಕೂ ಗಂಗೋತ್ರಿ, ಗಂಗಾಸಾಗರ, ಹರಿದ್ವಾರ, ಬದರೀ, ಕೇದಾರ, ವಾರಣಾಸಿ, ಪ್ರಯಾಗ ಮುಂತಾದ ಪವಿತ್ರ ಕ್ಷೇತ್ರಗಳಲ್ಲಿ ಈ ಧಾರ್ಮಿಕ ಕಾರ್ಯದ ಸಂಭ್ರಮಾಚರಣೆ ನೆರವೇರುತ್ತದೆ. ಈ ದಿನಗಳಲ್ಲಿ ಗಂಗಾ ನದಿಗೆ ವಿಶೇಷ ಪೂಜೆ, ಗಂಗಾಸ್ನಾನ, ಗಂಗಾ ನದಿಯು ಹಿಮಾಲಯದ ಗಂಗೋತ್ರಿಯಲ್ಲಿ ಹುಟ್ಟಿ, ಸುಮಾರು 1558 ಕಿ.ಮೀ. ಕ್ರಮಿಸಿ ಬಂಗಾಳಕೊಲ್ಲಿಯನ್ನು ಸೇರುತ್ತದೆ. ಈ ಮಧ್ಯೆ ತಾನು ಹರಿವ ಮಾರ್ಗದುದ್ದಕ್ಕೂ,ಸಾವಿರಾರು ಜನರ ಜೀವನಾಡಿಯಾಗಿದೆ. ಮೌರ್ಯ ಸಾಮ್ರಾಜ್ಯದಿಂದ ಮೊಘಲ್ ಸಾಮ್ರಾಜ್ಯದವರೆಗಿನ ಇತಿಹಾಸವನ್ನು ಮಡಿಲಿಗೆ ತುಂಬಿಕೊಂಡಿರುವ ಐತಿಹಾಸಿಕ ಆಧಾರವಾಗಿದೆ ಹಾಗೂ ನಾಗರೀಕತೆಯ ತೊಟ್ಟಿಲಾಗಿದೆ. ದಕ್ಷಿಣ ಭಾರತದ ಅನೇಕ ಸಾಮ್ರಾಟರು ಈ ಗಂಗಾ ತಟದವರೆಗೂ ತಮ್ಮ ಹೋರಾಟವನ್ನು ನಡೆಸಿ ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಿ ಇತಿಹಾಸ ಪುಟಗಳಲ್ಲಿ ಹೆಸರುಳಿಸಿಕೊಂಡಿದ್ದಾರೆ. ಅಲಕಾನಂದ ಹಾಗೂ ಭಾಗೀರಥಿ ನದಿಗಳು ದೇವಪ್ರಯಾಗದಲ್ಲಿ ಸಂಗಮಗೊಂಡು "ಗಂಗಾ" ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ.

## ಐತಿಹಾಸಿಕ ಹಾಗೂ ಪೌರಾಣಿಕ ಹಿನ್ನೆಲೆ

ಆರ್ಯರ ಕಾಲದ ಕೆಲವು ಪ್ರದೇಶಗಳು, ಮಹಾಭಾರತ ಕಾಲದ ಹಲವು ಪ್ರದೇಶಗಳು, ಮಗಧ, ಗುಪ್ತರು ಸಾಮ್ರಾಜ್ಯದ ಪ್ರದೇಶಗಳು ಈ ನದಿ ದಂಡೆಯಲ್ಲಿ ವಿಶೇಷ ಮಹತ್ವ ಪಡೆದಿದ್ದವು. ಹಿಮವತ್ ಮಹಾರಾಜ ಮತ್ತು ಮೀನಾದೇವಿಯ ಪುತ್ರಿಯಾಗಿ ಜನಿಸಿದ ಗಂಗಾ, ಮುಂದೆ ಶಂತನು ಮಹಾರಾಜನ ಸತಿಯಾದಳು ನಂತರ ಭೀಷ್ಮನನ್ನು ಮಗನಾಗಿ ಪಡೆದಳು. ವಿಶೇಷ ಕಾರಣದಿಂದಾಗಿ ಕಾರ್ತಿಕೇಯನ ತಾಯಿಯಾಗಿ "ಕುಮಾರಸೂ" ಎನಿಸಿದಳು. ಗಂಗೆಯ ಮಗನಾಗಿ ಭೀಷ್ಮನು "ಗಾಂಗೇಯ"ನಾದನು.

ಗಂಗಾ ನದಿಯು ಭೂಮಿಗೆ ಬಂದ ಬಗೆಯನ್ನು ತಿಳಿಸುವ ಪೌರಾಣಿಕ ಕತೆಯೊಂದು ಸಾಕ್ಷಿಯಾಗಿದೆ. ಕೋಸಲ ದೊರೆಯ ಅಶ್ವಮೇಧಯಾಗದ ಕುದುರೆಯನ್ನು ಅಪಹರಣ ಮಾಡಿದ ವಿಚಾರ ತಿಳಿದು ಅದನ್ನು ಹುಡುಕಿ ಹೊರಟ ರಾಜಕುಮಾರರು ಪಾತಾಳಲೋಕದ ಕಪಿಲಮುನಿಯ ಆಶ್ರಮದಲ್ಲಿ ಕುದುರೆಯನ್ನು ಕಂಡರು. ಮುನಿಯು ತಪಸ್ಸು ಮಾಡುವಂತೆ ನಾಟಕ ಮಾಡುತ್ತಿದ್ದಾನೆಂದು ತಿಳಿದರು. ಅದನ್ನು ಭಂಗ ಪಡಿಸಲು ಪ್ರಯತ್ನಿಸಿ, ಮುನಿಯ ಕೋಪಕ್ಕೆ ತುತ್ತಾಗಿ ಭಸ್ಮವಾದರು. ಇವರನ್ನು ಹುಡುಕಿ ಬಂದ ಅಂಶುಮಂತನು ಬೂದಿರಾಶಿ ನೋಡಿ ದೇವಗಂಗೆಯಿಂದ ಇವರಿಗೆ ಸದ್ಗತಿಯೆಂದು ತಿಳಿದನು. ಆದರೆ ಪ್ರಯತ್ನ ಫಲಿಸಲಿಲ್ಲ ಮುಂದೆ ಆಡಳಿತಕ್ಕೆ ಬಂದ ಭಾಗೀರಥನ ಕಾಲ

ದಲ್ಲಿ ದೇವಗಂಗೆಯನ್ನು ಭೂಲೋಕಕ್ಕೆ ಕಳುಹಿಸುವಂತೆ ಬ್ರಹ್ಮದೇವನಲ್ಲಿ ಬೇಡಲಾಯಿತು. ಆದರೆ ಆಕೆಯ ರಭಸದಿಂದಾಗುವ ನಷ್ಟ ತಿಳಿದು, ಇದರ ಪರಿಹಾರಕ್ಕೆ ಪರಶಿವನ ಮೊರೆ ಹೋಗಲು, ರಭಸದಿಂದ ಬಂದ ಗಂಗೆಯನ್ನು ಶಿವನು ತನ್ನ ಮುಡಿಯಲ್ಲಿ ಕಟ್ಟಿದನು. ಶಾಂತಳಾದ ಗಂಗೆ ಭಗೀರಥನನ್ನು ಹಿಂಬಾಲಿಸಿ ಭೂಲೋಕಕ್ಕೆ ಬಂದಳು.



### ಗಂಗಾ ಪುಷ್ಕರ ಸ್ನಾನದ ಆಚರಣೆ ಹಾಗೂ ನಂಬಿಕೆಗಳು

2023 ರ ಏಪ್ರಿಲ್ 22 ರಿಂದ ಮೇ 3 ರವರೆಗೂ ಗಂಗಾ ಪುಷ್ಕರ ನಡೆಯುತ್ತದೆ. ಈ ಸಮಯದಲ್ಲಿ ಗಂಗಾ ನದಿಯಲ್ಲಿ ಸ್ನಾನ ಮಾಡುವುದರಿಂದ ಸಕಲ ಪಾಪಗಳಿಂದ ಮುಕ್ತಿ ದೊರೆತು, ಪುಣ್ಯಫಲ ಪ್ರಾಪ್ತಿಯಾಗುತ್ತದೆ. ಪೂರ್ವ ಅಥವಾ ಉತ್ತರಕ್ಕೆ ಮುಖ ಮಾಡಿ ಸ್ನಾನ ಮಾಡುವುದು ಶ್ರೇಯಸ್ಕರ. ಈ ಸಮಯದಲ್ಲಿ ಪಿತೃ ದೇವತೆಗಳಿಗೆ ತೃಪ್ತಿಗೊಳಿಸುವ ಕಾರ್ಯ ನದೀ ದಡದಲ್ಲಿ ಕೈಗೊಳ್ಳುವುದು, ಪೂಜೆ, ಜಪತಪ, ಯಥಾಶಕ್ತಿ ದಾನಧರ್ಮ ಇತ್ಯಾದಿಗಳು ಉತ್ತಮ ಫಲ ಕೊಡುತ್ತದೆ.

## ಒಂಟ್ಟಿಮಿಟ್ಟ ಕೋದಂಡರಾಮ ಸ್ವಾಮಿಯವರ ಬ್ರಹ್ಮೋತ್ಸವಗಳು

## 31-03-2023 ರಿಂದ 08-04-2023 ರ ವರೆಗೆ



**31.03.2023**
ಶುಕ್ರವಾರ ಹಗಲು- ಧ್ವಜಾರೋಹಣ
ರಾತ್ರಿ- ಶೇಷವಾಹನ

**01.04.2023**
ಶನಿವಾರ ಹಗಲು-
ವೇಣುಗಾನಾಲಂಕಾರ
ರಾತ್ರಿ- ಹಂಸವಾಹನ

**02.04.2023**
ಭಾನುವಾರ ಹಗಲು-ವಟಪಾತ್ರಶಾಯಿ
ಅಲಂಕಾರ
ರಾತ್ರಿ-ಸಿಂಹವಾಹನ

**03.04.2023**
ಸೋಮವಾರ- ನವನೀತಕೃಷ್ಣಾಲಂಕಾರ
ರಾತ್ರಿ- ಹನುಮತ್ಸೇವೆ

**04.04.2023**
ಮಂಗಳವಾರ ಹಗಲು-ಮೋಹಿನಿ ಸೇವೆ
ರಾತ್ರಿ-ಗರುಡ ಸೇವೆ

**05.04.2023**
ಬುಧವಾರ ಹಗಲು-
ಶಿವಧನುರ್ಬ್ಯಾಣಾಲಂಕಾರ
ರಾತ್ರಿ-ಎದುರ್ಕೊಲು,ಕಲ್ಯಾಣೋತ್ಸವ,
ಗಜವಾಹನ

**06.04.2023**
ಗುರುವಾರ ಹಗಲು-
ರಥೋತ್ಸವ

**07.04.2023**
ಶುಕ್ರವಾರ ಹಗಲು-
ಕಾಳೀಯಮರ್ಧನಾಲಂಕಾರ
ರಾತ್ರಿ-ಅಶ್ವವಾಹನ

**08.04.2023**
ಶನಿವಾರ ಹಗಲು-
ಚಕ್ರಸ್ನಾನ
ರಾತ್ರಿ- ಧ್ವಜಾರೋಹಣ



# ಶ್ರೀ ಭಗವದ್ ರಾಮಾನುಜರು

ಪಿ.ಜಿ. ಶ್ರೀನಿವಾಸನ್
98453 66813

ಶ್ರೀ ಪೆರುಂಬುದೂರಿನಲ್ಲಿ ಅಸೂರಿ ಕೇಶವರು ಮತ್ತು ಕಾಂತಿಮತಿಗೆ ಪುತ್ರರಾಗಿ ಆದಿಶೇಶನ ಅವತಾರದಲ್ಲಿ ಕ್ರಿ.ಶ. 1017 ರಲ್ಲಿ ಚೈತ್ರ ಶುದ್ಧ ಪಂಚಮಿಯ,ಆರಿದ್ರಾನಕ್ಷತ್ರದಲ್ಲಿ ಶ್ರೀರಾಮಾನುಜರು ಜನಿಸಿದರು. ಇದನ್ನು ಕೇಳಿ ಸಂತೋಷಗೊಂಡ ಯಾಮುನರ ಶಿಷ್ಯ ತಿರುಮಲೈನಂಬಿ (ಶ್ರೀಶೈಲಪೂರ್ಣರು)ತಿರುಪತಿಯಿಂದ ಬಂದು ರಾಮಾನುಜ ಎಂದು ನಾಮಕರಣ ಮಾಡಿದರು. ಶ್ರೀಶೈಲಪೂರ್ಣರು ಕಿರಿಯ ಸಹೋದರಿ ಮಹಾದೇವಿ ಹಾಗೂ ಕಮಲನಯನ ಭಟ್ಟರಿಗೆ ಹುಟ್ಟಿದ ಮಗನಿಗೆ ಗೋವಿಂದನೆಂದು ನಾಮಕರಣ ಮಾಡಿದರು. ರಾಮಾನುಜರು 16 ನೇ ವಯಸ್ಸಿಗೆ ಸಕಲ ವಿದ್ಯಾ ಪಾರಂಗತರಾಗಲು ರಕ್ಷಾಂಬಾಳ್ ಎಂಬ ಕನ್ಯೆಯೊಡನೆ ಮದುವೆ ಮಾಡಿ, ಸ್ವಲ್ಪ ಕಾಲದಲ್ಲೇ ಕೇಶವರು ದೇವರ ಪಾದಾರವಿಂದ ಸೇರಿದರು.

ನಂತರ ರಾಮಾನುಜರು ಅದ್ವೈತಿಗಳಾದ ಯಾದವ ಪ್ರಕಾಶರ ಬಳಿ ವಿದ್ಯೆ ಕಲಿಯಲಾರಂಭಿಸಿದರು. ಒಂದು ಬಾರಿ ಯಾದವ ಪ್ರಕಾಶರು ಭಗವಂತನ ಕಣ್ಣುಗಳು ಕಪಿಯ ಪೃಷ್ಠಭಾಗದಂತಿದೆ ಎಂದು "ಕಪ್ಯಾಸಂ ಪುಂಡರೀಕಮೇವಅಕ್ಷಿಣೀ'' ಎಂಬ ಛಾಂದೋಗ್ಯ ಉಪನಿಷತ್ತಿಗೆ ಹೀಗೆ ಹೀನವಾದ ಉಪಮಾನ ಕೊಟ್ಟು ಅರ್ಥೈಸಿದಾಗ ರಾಮಾನುಜರು ದುಃಖದಿಂದ ಕಣ್ಣೀರು ಸುರಿಸಿದರು. ಇದಕ್ಕೆ ಯಾದವಪ್ರಕಾಶರು ಕಾರಣ ಕೇಳಲು "ಪರಮಾತ್ಮನ ಕಣ್ಣುಗಳು ಸೂರ್ಯನನ್ನು ಕಂಡು ಆಗ ತಾನೇ ಅರಳಿದ ಕಮಲ ಪುಷ್ಪದಂತೆ ಸುಂದರವಾಗಿದೆ ಎಂದು ಅರ್ಥೈಸಬೇಕಾದ್ದಕ್ಕೆ ತಮಗೆ ದುಃಖವಾಯಿತೆಂದರು.

ತನ್ನನ್ನು ಮೀರಿ ಶಿಷ್ಯನು ಮಾತಾಡುವುದು, ಮುಂದುವರೆಯುವುದು ಯಾದವಪ್ರಕಾಶರಿಗೆ ಹಿಡಿಸದೆ ರಾಮಾನುಜರನ್ನು ಉತ್ತರದ ಕಡೆ ಕರೆದು ಕೊಂಡು ಹೋಗಿ,ನೀರಿನಲ್ಲಿ ಮುಳುಗಿಸಬೇಕೆಂದು ಹೊಂಚು ಹಾಕಿದ್ದು, ಗೋವಿಂದನಿಗೆ ಗೊತ್ತಾಗಿ ರಾಮಾನುಜರನ್ನು ದೂರ ಕಳುಹಿಸಿದ ನಂತರ ರಾಮಾನುಜರು ಕಾಡಿನಲ್ಲಿ ಮರೆಯಾಗಿ ಬೇಡ ದಂಪತಿಗೆ ಸಿಕ್ಕಿ, ಅವರಿಗೆ ಬಾಯಾರಿಕೆಯಾಗಿ ನೀರು ಒದಗಿಸಲು ಹೋಗಿ, ಬರುವಷ್ಟರಲ್ಲಿ ಮಾಯವಾಗಿದ್ದು, ಸುಸ್ತಾಗಿ ಮಲಗಿರಲು, ಬೆಳಗೆದ್ದು ನೋಡಲು ತಾವು ಕಾಂಚೀಪುರದಲ್ಲಿ ಇರುವುದಾಗಿ ತಿಳಿದು, ಮನೆ ಸೇರಿದರು. ಯಾದವಪ್ರಕಾಶರು ಹಿಂತಿರುಗಿ ಬಂದು ರಾಮಾನುಜರನ್ನು ನೋಡಿ, ಆಶ್ಚರ್ಯಪಟ್ಟರಾದರೂ,ಮತ್ತೆ ಅವರಲ್ಲೇ ಶಿಷ್ಯವೃತ್ತಿ ಮುಂದುವರೆಸಿದರು. ಗೋವಿಂದ ನೀರಿನಲ್ಲಿ ಸಿಕ್ಕ ಶಿಲಾ ವಿಗ್ರಹದ ಜೊತೆ ಕಾಳಹಸ್ತಿಗೆ ಹೋಗಿ ಶಿವಭಕ್ತರಾದರು.

ಒಂದು ಬಾರಿ ಕಂಚಿ ರಾಜನ ಮಗಳಿಗೆ ಪಿಶಾಚಿ ಹಿಡಿದಿದೆಯೆಂದು ಯಾದವಪ್ರಕಾಶರನ್ನು ಸಹಾಯ ಕೇಳಿದಾಗ, ಅವರಿಂದ ಪರಿಹಾರವಾಗಲಿಲ್ಲ. ರಾಮಾನುಜರು ಅವಳ ತಲೆ ಮೇಲೆ ಕಾಲಿಟ್ಟು, ಪಿಶಾಚಿಯನ್ನು ಓಡಿಸಿದ ಮೇಲೆ ಯಾದವಪ್ರಕಾಶರಿಗೆ ಸಹಿಸಲಾರದೆ ರಾಮಾನುಜರನ್ನು ತಮ್ಮಿಂದ ಹೊರದೂಡಿದರು.ನಂತರ ರಾಮಾನುಜರು ಕಂಚಿ ಪೂರ್ಣರನ್ನು (ತಿರುಕ್ಕಚ್ಚಿನಂಬಿ) ಗುರುಗಳಾಗಿ,ಸ್ವೀಕರಿಸಲು ಯತ್ನಿಸಿದರು. ಒಂದು ದಿನ ಅವರನ್ನು ಊಟಕ್ಕೆ ಕರೆದಾಗ, ರಾಮಾನುಜರ ಹೆಂಡತಿಯು ಇವರು ಅನ್ಯಜಾತಿಯವರೆಂದು ಅವಮಾನಿಸಿದ್ದನ್ನು ಕಂಡು, ಅವರಿಂದ ಸಹಿಸಲಾಗಲಿಲ್ಲ. ಈ ಮಧ್ಯೆ ಯಾಮುನಾಚಾರ್ಯರಿಗೆ ವಯಸ್ಸಾಗುತ್ತಿದ್ದುದರಿಂದಲೂ, ಹಾಗೂ ವಿಶಿಷ್ಟಾದ್ವೈತ ಸಿದ್ದಾಂತಕ್ಕೆ ದರ್ಶನ ಸ್ಥಾಪಕರ ಹುಡುಕುವಿಕೆಯಲ್ಲಿ ಮಗ್ನರಾಗಿದ್ದ ಅವರಿಗೆ ರಾಮಾನುಜರ ಬಗ್ಗೆ ಒಳ್ಳೆಯ ಅಭಿಪ್ರಾಯಗಳು ಬರಲಾರಂಭಿಸಿದಾಗ, ಕಂಚಿ ವರದನಲ್ಲಿ ರಾಮಾನುಜರ ಬಗ್ಗೆ ಮೊರೆಯಿಟ್ಟರು ಹಾಗೂ ಪೆರಿಯನಂಬಿಗಳಿಗೆ ರಾಮಾನುಜರನ್ನು ಕರೆತರಲು ಹೇಳಿದರು. ಆದರೆ ಅವರು ಬರುವಷ್ಟರಲ್ಲಿ ಪರಮಪದಗೈದಿದ್ದರು. ಆದರೆ ರಾಮಾನುಜರು ಅವರ ಪರಮ



ವಿಗ್ರಹವನ್ನು ಪರಿಶೀಲಿಸುತ್ತಿರಲು ಅವರ ಬಲಗೈನ ಮೂರು ಬೆರಳುಗಳು ಮಡಿಸಿಕೊಂಡಿದ್ದು, ಅಲ್ಲಿ ನೆರೆದಿದ್ದ ಭಕ್ತರನ್ನು ಕೇಳಲಾಗಿ, ಅವರಿಗೆ ಮೂರು ಆಸೆಗಳಿದ್ದುವೆಂತಲೂ,ಅವು 1) ವ್ಯಾಸರ ಬ್ರಹ್ಮಸೂತ್ರಗಳಿಗೆ ಭಾಷ್ಯ ಬರೆಯಬೇಕು. 2) ನಮ್ಮಾಳ್ವಾರರ ತಿರುವಾಯ್ಮೊಳಿಗೆ ವ್ಯಾಖ್ಯಾನ. 3) ವ್ಯಾಸ ಹಾಗೂ ಪರಾಶರಮುನಿಗಳ ಜ್ಞಾಪಕವಾಗಿ ಒಂದು ಉತ್ತಮ ಕೆಲಸ ಮಾಡುವುದು. ರಾಮಾನುಜರು ಯಾಮುನರ ಮೂರೂ ಆಸೆಗಳನ್ನೂ ಈಡೇರಿಸುವ ಪ್ರತಿಜ್ಞೆ ಮಾಡಿದಾಗ, ಯಾಮುನಾಚಾರ್ಯರ ಮಡಿಸಿಕೊಂಡಿದ್ದ ಮೂರು ಬೆರಳುಗಳೂ ಬಿಚ್ಚಿಕೊಂಡಿದ್ದನ್ನು ನೋಡಿ,ನೆರೆದಿದ್ದವರಿಗೆ ಸಂತೋಷವಾಯಿತು ಹಾಗೂ ರಾಮಾನುಜರ ಬಗ್ಗೆ ಗೌರವ ಹೆಚ್ಚಿತು.

ರಾಮಾನುಜರು ಮಹಾಪೂರ್ಣರನ್ನು ಗುರುಗಳಾಗಿ ಸ್ವೀಕರಿಸಲು ನಿರ್ಧರಿಸಿ, ಕಂಚಿ ಬಿಟ್ಟು ಶ್ರೀರಂಗಕ್ಕೆ ಹೊರಟಾಗ ಮಾರ್ಗ ಮಧ್ಯೆ ಆಶ್ಚರ್ಯಕರವಾಗಿ ಮಧುರಾಂತಕದಲ್ಲಿ ಮಹಾಪೂರ್ಣರ ದರ್ಶನವಾಗಿ ಅವರಲ್ಲಿ ತಮ್ಮನ್ನು ಶಿಷ್ಯನನ್ನಾಗಿ ಸ್ವೀಕರಿಸಲು ಪ್ರಾರ್ಥಿಸಿದಾಗ ಅವರು ಒಪ್ಪಿ ಅಲ್ಲೇ ರಾಮಾನುಜರಿಗೆ ಪಂಚಸಂಸ್ಕಾರಗಳನ್ನು ಮಾಡಿದಾಗ, ರಾಮಾನುಜರ ಇಷ್ಟದಂತೆ ಮಹಾಪೂರ್ಣರು ರಾಮಾನುಜರ ಗೃಹದಲ್ಲೇ ಪತ್ನೀ ಸಮೇತ ಇರಲಾರಂಭಿಸಿದರು.ಆದರೆ ಕೆಲವು ವಿಷಯಗಳಲ್ಲಿ ಹೆಂಗಸರ ಮಧ್ಯೆ ಹೊಂದಾಣಿಕೆಯಾಗದೆ ಮಹಾಪೂರ್ಣರು ಶ್ರೀರಂಗಕ್ಕೆ ಹಿಂತಿರುಗಿದಾಗ, ರಾಮಾನುಜರಿಗೆ ತುಂಬ ಬೇಸರವಾಗಿ ಪತ್ನಿಯನ್ನು ತೊರೆದು, ಸನ್ಯಾಸವನ್ನು ತಮ್ಮ 32 ನೇ ವಯಸ್ಸಿನಲ್ಲೇ ಸ್ವೀಕರಿಸಿದರು.

ಕಾಂಚೀಪುರದಲ್ಲಿರುವ ಕೂರಂ ಎಂಬಲ್ಲಿ ವೈಭವೋಪೇತ ಜೀವನ ನಡೆಸುತ್ತಿದ್ದ ಕೂರೇಶರು, ತಮ್ಮ ಪತ್ನಿ ಆಂಡಾಳಮ್ಮನೊಂದಿಗೆ ರಾಮಾನುಜರ ಪ್ರಭಾವಕ್ಕೆ ಒಳಗಾಗಿ ಯಥೇಚ್ಛ ಸಂಪತ್ತನ್ನು ದಾನ ಮಾಡಿ, ತಮಗಿಂತ ವಯಸ್ಸಿನಲ್ಲಿ ಚಿಕ್ಕವರಾದರೂ ಅವರ ಶಿಷ್ಯರಾದರು.ರಾಮಾನುಜರಿಗೆ ಗುರುಗಳಾಗಿದ್ದ ಯಾದವಪ್ರಕಾಶರೂ ತಮ್ಮ ತಾಯಿಯ ಹಿತನುಡಿಗೊಳಗಾಗಿ ಗೋವಿಂದಜೀಯರ್ ಆಗಿ ಅವರ ಶಿಷ್ಯರಾದರು. ಶಿವ ಭಕ್ತನಾಗಿ ಕಾಳಹಸ್ತಿಯಲ್ಲಿದ್ದ ಇವರ ಚಿಕ್ಕಮ್ಮನ ಮಗ ಗೋವಿಂದಭಟ್ಟರು ಪೆರಿಯ ನಂಬಿಗಳ ಪ್ರೇರಣೆಯಿಂದ ಎಂಬಾರ್ ಎಂಬ ಹೆಸರಿನೊಂದಿಗೆ ರಾಮಾನುಜರ ಇಷ್ಟದಂತೆ ರಾಮಾನುಜರ ಶಿಷ್ಯರಾದರು.

ಯಾಮುನರ ಕೋರಿಕೆಯಂತೆ ಕೂರೇಶರ ಇಬ್ಬರು ಮಕ್ಕಳಿಗೆ ರಾಮಾನುಜರು ಪರಾಶರಭಟ್ಟ ಹಾಗೂ ವ್ಯಾಸಭಟ್ಟರೆಂದು ನಾಮಕರಣ ಮಾಡಿ ಆಶೀರ್ವದಿಸಿದರು. ಶ್ರೀರಂಗನಾಥನು ತಮ್ಮ ಶಿಷ್ಯ ರಾಮಾನುಜುರಿಗೆ 'ಉಡೈಯವರ್' ಎಂಬ ಹೊಸ ಬಿರುದು ಕೊಟ್ಟರು. ಈವರೆಗೆ ಶ್ರೀರಂಗ ದೇವಸ್ಥಾನವನ್ನು ನೋಡಿಕೊಳ್ಳುತ್ತಿದ್ದ ತಿರುವರಂಗತ್ತ ಅಮುದ ನಾರ್ ಅವರು 'ಇ' ರಾಮಾನುಜ ನೂತ್ತಂದಾದಿ' ಎಂಬ ರಾಮಾನುಜರ ಮೇಲಿನ 108 ಪಾಶುರಗಳನ್ನೊಳಗೊಂಡ ಪ್ರಬಂಧವನ್ನರ್ಪಿಸಿದರು. ರಾಮಾನುಜರಿಗೆ ಐವರು ಮುಖ್ಯ ಆಚಾರ್ಯರು ಸಕಲ ವಿದ್ಯೆಗಳನ್ನೂ ಬೋಧಿಸಿ ಆಶೀರ್ವದಿಸಿದರು.

1) ಪೆರಿಯನಂಬಿಗಳು ಪಂಚಸಂಸ್ಕಾರ ಮಾಡಿ, ದ್ವಯಾರ್ಥ ಬೋಧಿಸಿದರು. 2) ಗೋಷ್ಠಿಪೂರ್ಣರು ತಿರುಮಂತ್ರದೊಂದಿಗೆ ಚರಮ ಶ್ಲೋಕಾರ್ಥ ಹಾಗೂ ಶರಣಾಗತಿ ತತ್ವಗಳನ್ನು ಬೋಧಿಸುವುದರೊಂದಿಗೆ ಅವರಿಗೆ 'ಎಂಬೆರುಮಾನಾರ್' ಬಿರುದು ಕೊಟ್ಟು ಆಶೀರ್ವದಿಸಿದರು. 3) ತಿರುಮಲೈ ಅಂಡಾನ್‌ರವರು ಭಗವದ್ವಿಷಯ ಎಂದರೆ ತಿರುಮಾಯ್ಮೊಳಿಯ ವಿಶೇಷಾರ್ಥಗಳನ್ನು ಬೋಧಿಸಿದರು. 4) ಶ್ರೀ ಶೈಲಪೂರ್ಣರು (ಪೆರಿಯ ತಿರುಮಲೈ ನಂಬಿಯವರು) ರಾಮಾಯಣದ ವಿಶೇಷಾರ್ಥಗಳನ್ನು ಒಂದು ವರ್ಷ ಬೋಧಿಸಿದರು. 5) ಶ್ರೀವರರಂಗ ಅವರಿಂದ ಪ್ರಪತ್ತಿಯ ವಿವಿಧ ಮಾರ್ಗಗಳನ್ನು ಅರಿತರು.

ಶ್ರೀ ರಾಮಾನುಜರು ಮುಖ್ಯಶಿಷ್ಯರಲ್ಲಿ ದಾಶರಥಿ (ರಾಮಾನುಜರ ಸೋದರಿಯ ಮಗ) ಯಜ್ಞಮೂರ್ತಿ, ಧನುರ್ದಾಸ, ಯಜ್ಞೇಶ, ವರದಾಚಾರ್ಯ, ಆನಂದಾಳ್ವಾನ್, ವಡುಹನಂಬಿ ಪ್ರಮುಖರಾಗಿದ್ದಾರೆ.

ಅನಂತರ ಶ್ರೀರಾಮಾನುಜರು ಕಾಶ್ಮೀರ ಪ್ರವಾಸ ಕೈಕೊಂಡು. ಅಲ್ಲಿ ಸರಸ್ವತೀ ಭಂಡಾರದಲ್ಲಿದ್ದ ಬೋಧಾಯನ ವೃತ್ತಿ ಎಂಬ ಬ್ರಹ್ಮಸೂತ್ರ ಭಾಷ್ಯವನ್ನು ಪಡೆದರು.ಅದನ್ನು ಅಲ್ಲಿಯವರು ಬೇಗ ವಾಪಸ್ ಪಡೆದಿದ್ದರಿಂದ ಪೂರ್ತಿಯಾಗಿ ಓದಲಾಗಲಿಲ್ಲ. ಕೂರೇಶರು ಇವರ ಜೊತೆಯಲ್ಲಿದ್ದು, ಎಲ್ಲವನ್ನೂ ಓದಿ ಗ್ರಹಿಸಿದ್ದರು. ಅವರ ಸಹಾಯವನ್ನೂ ಪಡೆದು, ರಾಮಾನುಜರು ವ್ಯಾಸರ ಬ್ರಹ್ಮಸೂತ್ರಕ್ಕೆ ಶ್ರೀಭಾಷ್ಯವೆಂಬ ವಿಸ್ತಾರವಾದ ವ್ಯಾಖ್ಯಾನ ರಚಿಸಿದರು. ಇದರೊಂದಿಗೆ ವೇದಾಂತಸಾರ, ವೇದಾಂತ ದೀಪ ಎಂಬ ಎರಡು ಗ್ರಂಥಗಳನ್ನು ಬರೆದರು. ನಂತರ ದಿವ್ಯದೇಶಗಳ ದರ್ಶನ ಮಾಡಿ ತಿರುಪತಿಗೆ ಬಂದರು. ಅಲ್ಲಿ ಶ್ರೀವೈಷ್ಣವರಿಗೂ,ಶಿವಭಕ್ತರಿಗೂ ಇದ್ದ ವೆಂಕಟೇಶನು,ವಿಷ್ಣುವೇ? ಅಥವಾ ಶಿವನೇ? ಎಂಬ ವಾಗ್ವಾದಕ್ಕೆ ತಮ್ಮ ವಾಗ್ವಾದಗಳಿಂದ ತೆರೆ ಎಳೆದು, ನಾರಾಯಣನಲ್ಲದೆ ಬೇರಾರೂ ಅಲ್ಲವೆಂಬ ಸತ್ಯವನ್ನು ಸಾಬೀತು ಮಾಡಿ,ಇಬ್ಬರನ್ನೂ ಸಮಾಧಾನ ಪಡಿಸಿದರು. ಹಾಗೆಯೇ ದೇವರ ಕೈಂಕರ್ಯಕ್ಕೆ ಹೂವಿನ ತೋಟದ ಅಗತ್ಯ ಮನಗಂಡು ಯಾರಾದರೂ ಈ ಕಾರ್ಯಕ್ಕೆ ಮುಂದೆ ಬಂದಾರೇ? ಎಂದು ಪ್ರಶ್ನಿಸಿದಾಗ, ಕಾಡಿನಿಂದ ಕೂಡಿದ್ದ ತಿರುಮಲೆಯಲ್ಲಿ ತೋಟ ಮಾಡಲು ಮುಂದೆ ಬರದಾದಾಗ ಮೇಲುಕೋಟೆಯ ಆನಂದಾಳ್ವಾನ್ ಮುಂದೆ ಬಂದಾಗ, ರಾಮಾನುಜರು ಸಂತೋಷಗೊಂಡು ಜವಾಬ್ದಾರಿವಹಿಸಿದರು.

ಶಿವಭಕ್ತನಾದ ಕ್ರಿಮಿಕಂಠಚೋಳನು ಶ್ರೀವೈಷ್ಣವರಿಗೆ ತೊಂದರೆ ಕೊಡಲಾರಂಭಿಸಿದ್ದು ಶ್ರೀವೈಷ್ಣವರನ್ನು ಬಲವಂತವಾಗಿ ಶಿವಭಕ್ತರಾಗಿ ಮಾಡಲು ಯತ್ನಿಸುತ್ತಿದ್ದು, ಈ ಬಗ್ಗೆ ರಾಮಾನುಜರಿಗೆ ಆಹ್ವಾನ ಹೋದಾಗ ಇವರ ಆಪ್ತ ಶಿಷ್ಯ ಕೂರೇಶನು ರಾಮಾನುಜರನ್ನು ಕರ್ನಾಟಕದ ಕಡೆಗೆ ಕಳಿಸಿ ಮಹಾಪೂರ್ಣರ ಜೊತೆ ಚೋಳ ರಾಜನ ಮುಂದೆ ಹೋದಾಗ ರಾಜನಿಗೆ ಮಣಿಯದ ಮಹಾಪೂರ್ಣರ ಕಣ್ಣುಗಳನ್ನು ಕೀಳಿಸಿದಾಗ, ಕೂರೇಶರು ತಮ್ಮ ಕಣ್ಣುಗಳನ್ನು ತಾವೇ ಕಿತ್ತು ಕೊಂಡು , ನಂತರ ತಿರುಮಾಲಿರುಂಶೋಲೈಗೆ ಹೋಗಿ ಪಂಚಸ್ತವಗಳನ್ನು ರಚಿಸಿದರು. ವಯಸ್ಸಾದ ಮಹಾಪೂರ್ಣರು ಪರಮಪದಿಸಿದಾಗ, ಅವರ ಸಂಸ್ಕಾರಗಳನ್ನು ಮುಗಿಸಿದರು.

# ಭಗವದ್ ಶ್ರೀ ರಾಮಾನುಜರ ಆರು ದಿವ್ಯಾಜ್ಞೆಗಳು

1.ವೇದವ್ಯಾಸರ ಬ್ರಹ್ಮಸೂತ್ರಕ್ಕೆ ಪೂರ್ವಾಚಾರ್ ಸಮ್ಮತವಾದ "ಶ್ರೀಭಾಷ್ಯ" ವನ್ನು ಚೆನ್ನಾಗಿ ಪಠಿಸಿ ಕಲಿತು ಪ್ರವಚನ ಮಾಡುವುದು, ಅದು ಕಷ್ಟವೆನಿಸಿದರೆ



2. ನಮ್ಮಾಳ್ವಾರರ ತಿರುವಾಯ್ಮೊಳಿಯನ್ನು ಶ್ರದ್ಧೆಯಿಂದ ಕಲಿತು ಮೊದಲಿನಂತೆಯೇ ಪಠಿಸಿ ಪ್ರವಚನ ಮಾಡುವುದು, ಅದೂ ಕಷ್ಟ ವೆನಿಸಿದರೆ

3. ವಿಶ್ವಪ್ರಭುವಾದ ನಾರಾಯಣನು ಅರ್ಚಾವತಾರಿಯಾಗಿ ನೆಲೆಸಿರುವ ದಿವ್ಯಕ್ಷೇತ್ರಗಳಲ್ಲಿ ವಾಸ ಮಾಡುತ್ತಾ ಶ್ರದ್ಧೆಯಿಂದ ಆ ಪ್ರಭುವಿನ ಸೇವೆ ಮಾಡುವುದು. ಅದು ಕಷ್ಟವೆನಿಸಿದರೆ

4. ಎಲ್ಲಿದ್ದರೂ ಅಲ್ಲಿ ಪ್ರಪತ್ತಿ ಮಂತ್ರವಾದ ದ್ವಯಮಂತ್ರವನ್ನು ಅರ್ಥಸಹಿತ ಮನನ ಮಾಡುವುದು, ಅದೂ ಕಷ್ಟವೆನಿಸಿದರೆ

5. ನಮ್ಮಲ್ಲಿ ಪ್ರಪತ್ತಿ ಮಾಡಿರುವ ಹಿರಿಯರ ಬಳಿ ಸೇರಿ ಅವರ ಸೇವೆ ಮಾಡುವುದು ಅಥವಾ ದೂರದಲ್ಲಿದ್ದರೂ ಅವರ ಪರಿಚಯ ಬಿಡದೆ ಇಟ್ಟುಕೊಳ್ಳುವುದು.

6. ಅದೂ ಆಗದಿದ್ದರೆ ಮೇಲುಕೋಟೆಯಲ್ಲಿ ಗುಡಿಸಲು ಹಾಕಿಕೊಂಡು ದೇವರ ಸೇವೆ ಮಾಡುತ್ತಾ ಜೀವಿಸುವುದು.

ಇತ್ತ ರಾಮಾನುಜರು ಶ್ರೀರಂಗವನ್ನು ಬಿಟ್ಟು ಸಾಲಿಗ್ರಾಮ, ತೊಂಡನೂರು ಮಾರ್ಗವಾಗಿ ಯಾದವಾದ್ರಿ ತಲುಪಿಸಿದರು. ಅಲ್ಲಿ ವಿಠಲ ದೇವನೆಂಬ ಜೈನರಾಜನನ್ನು ಶ್ರೀವೈಷ್ಣವ ಮತಕ್ಕೆ ಪರಿವರ್ತಿಸಿ, ವಿಷ್ಣುವರ್ಧನನೆಂದು ನಾಮಕರಣ ಮಾಡಿದರು.

ಕನಸಿನಲ್ಲಿ ದೇವರು ಬಂದು ರಾಮಾನುಜರಿಗೆ ತಮ್ಮ ವಿಗ್ರಹ ಮಣ್ಣಿನಲ್ಲಿ ರುವುದಾಗಿ ತಿಳಿಸಲಾಗಿ, ರಾಜನ ಸಹಾಯ ದಿಂದ ವಿಗ್ರಹ ತೆಗೆಸಿ,1100 ಎ.ಡಿ.ಯಲ್ಲಿ ಚೆಲುವನಾರಾ ಯಣನ್ನು ಪ್ರತಿಷ್ಠೆ ಮಾಡಿಸಿದರು ನಂತರ ಉತ್ಸವ ಮೂರ್ತಿಯಾಗಿ ದೆಹಲಿಗೆ ಹೋಗಿ ಬಾದಷಹನನ್ನು ಸಂಪರ್ಕಿಸಿ, ಅವರ ಮಗಳಿಂದ ರಾಮಪ್ರಿಯ ಉತ್ಸವ ಮೂರ್ತಿ ತಂದು ಅದನ್ನೂ ಮೇಲುಕೋಟೆಯಲ್ಲಿ ಪ್ರತಿಷ್ಠಾಪಿಸಿ, ಯತಿರಾಜ ಮಠ ಆರಂಭಿಸಿ, 12 ವರ್ಷಗಳ ಕಾಲ ಶ್ರೀಭಾಷ್ಯ. ಗೀತಾಭಾಷ್ಯ ಪ್ರವಚನಗಳಿಂದ ಭಕ್ತರನ್ನು ತೃಪ್ತಿ ಪಡಿಸಿದರು. ತಮ್ಮ ಭಕ್ತರೇ ತಯಾರಿಸಿದ ತಮ್ಮ ವಿಗ್ರಹವನ್ನು ಆಲಿಂಗಿಸಿ, ಭಕ್ತರನ್ನು ತೃಪ್ತಿ ಪಡಿಸಿದರು.

ಕ್ರಿಮಿ ಕಂಠಚೋಳನು ಸತ್ತ ನಂತರ ಶ್ರೀರಂಗಕ್ಕೆ, ಹಿಂತಿರುಗಿ ಕಣ್ಣುಗಳನ್ನು ಕಳೆದುಕೊಂಡಿದ್ದ ತಮ್ಮ ಪ್ರಿಯ ಶಿಷ್ಯ ಕೂರೇಶನನ್ನು ಕಂಡು ಶೋಕಿಸಿದರು. ಸಾಲಿಗ್ರಾಮದಲ್ಲಿ ಇಂದಿಗೂ ಅಲ್ಲಿಯ ಕೊಳದಲ್ಲಿ ಶ್ರೀರಾಮಾನುಜರ ಶ್ರೀಪಾದತೀರ್ಥವನ್ನು ಭಕ್ತಿಯಿಂದ ಸ್ವೀಕರಿಸುತ್ತಾರೆ. ಸಾಲಿಗ್ರಾಮದವರೇ ಆದ ವಡುಹನಂಬಿಯವರು ಶ್ರೀರಾಮಾನುಜರ ಪಟ್ಟ ಶಿಷ್ಯರಾಗಿದ್ದರು.

ಶ್ರೀವೈಷ್ಣವ ಸಂಪ್ರದಾಯದ ಏಳಿಗೆಗಾಗಿ 74 ಸಿಂಹಾಸನಾಧಿಪತಿಗಳನ್ನು ನೇಮಿಸಿದರು. ಅವರೇ ತಬ್ಬಿ ಸ್ಥಾಪಿಸಿದ ಅವರ ಪ್ರತಿಮೆಗಳು ಶ್ರೀಪೆರಂಬದೂರು, ಮೇಲುಕೋಟೆ ಮತ್ತು ಶ್ರೀರಂಗದಲ್ಲಿ ಕಂಡು ಆನಂದಿಸಬಹುದು.

ಶ್ರೀರಾಮಾನುಜರು ರಚಿಸಿ,ಅನುಗ್ರಹಿಸಿದ ಗ್ರಂಥಗಳು ಒಂಭತ್ತು, ಅವುಗಳನ್ನು : -

1) ಶ್ರೀ ಭಾಷ್ಯ , 2) ವೇದಾಂತ ದೀಪ ಹಾಗೂ 3) ವೇದಾಂತ ಸಾರ 4) ವೇದಾರ್ಥ ಸಂಗ್ರಹ 5) ಗೀತಾಭಾಷ್ಯ 6) ಶರಣಾಗತಿಗದ್ಯ, 7)ಶ್ರೀ ರಂಗಗದ್ಯ 8) ವೈಕುಂಠಗದ್ಯ 9) ನಿತ್ಯಗ್ರಂಥ.

ಶ್ರೀ ರಾಮಾನುಜರು 120 ವರ್ಷ ಬಾಳಿ, ಸಾರ್ಥಕ ಬದುಕು ನಡೆಸಿ , 1137 ರಲ್ಲಿ ಪರಮಪದಿಸಿದರು.





# ಅಕ್ಷಯ ಫಲ ನೀಡುವ ಅಕ್ಷತೃತೀಯ

ಎಸ್. ಗಿರಿಜಾ ಎಸ್. ದೇಶಪಾಂಡೆ
9739388300

ವೈಶಾಖ ಮಾಸದ ಶುಕ್ಲಪಕ್ಷದ ತೃತೀಯ ದಿನವನ್ನು ಅಕ್ಷಯ ತೃತೀಯ ಎಂದು ಕರೆಯಲಾಗುತ್ತದೆ. ಸಂಸ್ಕೃತದಲ್ಲಿ ಅಕ್ಷಯ ಪದದ ಅರ್ಥ ಅಂತ್ಯವಿಲ್ಲ ಮತ್ತು ಅದೃಷ್ಟವನ್ನು ತರುತ್ತದೆ ಎಂಬ ನಂಬಿಕೆಯಿದೆ. ಅಕ್ಷಯ ಪದವು ಅಭ್ಯುದಯ ಭರವಸೆ ಸಂತೋಷ ಯಶಸ್ಸು ಎಂಬ ಅರ್ಥದಲ್ಲಿ ಎಂದೂ ಕಡಿಮೆಯಾಗುವುದಿಲ್ಲ ಎಂದರ್ಥವನ್ನು ನೀಡುತ್ತದೆ. ಅಕ್ಷಯ ತೃತೀಯವನ್ನು ಆಕ್ತಿ ಅಥವಾ ಅಖಾತೀಜ ಎಂದು ಕರೆಯುತ್ತಾರೆ. ಹಿಂದೂ ಪುರಾಣದ ಪ್ರಕಾರ ತ್ರೇತಾಯುಗವು ಅಕ್ಷಯತೃತೀಯದಂದು ಪ್ರಾರಂಭವಾಯಿತು. ವಿಷ್ಣುವಿನ ಆರನೇಯ ಅವತಾರವಾದ ಪರಶುರಾಮನ ಜನ್ಮದಿನವೆಂದು ಹಿಂದೂಗಳು ನಂಬುತ್ತಾರೆ. ಪರಶುರಾಮನ ಗೌರವಾರ್ಥವಾಗಿ ಆಚರಿಸುವವರು ಈ ಹಬ್ಬವನ್ನು ಪರಶುರಾಮ ಜಯಂತಿ ಎಂದು ಉಲ್ಲೇಖಿಸುತ್ತಾರೆ. ಕೆಲವರು ವಿಷ್ಣುವಿನ ಎಂಟನೇಯ ಅವತಾರ ಕೃಷ್ಣನ ಮೇಲೆ ತಮ್ಮ ಗೌರವ ಕೇಂದ್ರಿಕರಿಸುತ್ತಾರೆ. ಸನಾತನ ಧರ್ಮದಲ್ಲಿ ವೈಶಾಖಮಾಸಕ್ಕೆ ಹೆಚ್ಚಿನ ಮಹತ್ವವಿದೆ. ಈ ಸಮಯವನ್ನು ಮಂಗಳಕರ ಅದೃಷ್ಟವೆಂದು ಪರಿಗಣಿಸಲಾಗುತ್ತದೆ. ಈ ಸಮಯದಲ್ಲಿ ಸ್ನಾನ,ದಾನ,ಪಠಣ,ತಪಸ್ಸು,ಯಾಗ ಆಚರಣೆಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಪಡೆದಿದೆ ಎಂಬ ನಂಬಿಕೆ ನಮ್ಮಲ್ಲಿದೆ. ಆ ದಿನದಂದು ಮಾಡಿದ ದಾನದ ಫಲವು ಅಕ್ಷಯ ಫಲವೆಂಬ ನಂಬಿಕೆ ಇದೆ. ಆ ದಿನದಂದು ದಾನ ಮಾಡುವ ವ್ಯಕ್ತಿಗೆ ವೈಕುಂಠ ಧಾಮದಲ್ಲಿ ಸ್ಥಾನ ಸಿಗುತ್ತದೆ. ಗಂಗೆಯಲ್ಲಿ ಸ್ನಾನ ಮಾಡಿ ಬಾರ್ಲಿಯನ್ನು ದಾನ ಮಾಡಿದರೆ ಮನುಷ್ಯನ ಎಲ್ಲ ಪಾಪಗಳು ನಾಶವಾಗುತ್ತವೆ ಎಂಬ ಪ್ರತೀತಿಯಿದೆ.

## ಹಿಂದೂ ಪುರಾಣದ ಪ್ರಕಾರ

ಹಿಂದೂ ಪುರಾಣದ ಪ್ರಕಾರ ಯುದಿಷ್ಟರನು ಶ್ರೀಕೃಷ್ಣನ ಬಳಿ ಅಕ್ಷಯ ತೃತೀಯ ಮಹತ್ವ ತಿಳಿಯಬೇಕೆಂದು ಕೇಳಿದಾಗ ಶ್ರೀಕೃಷ್ಣನು ಯುಧಿಷ್ಟರನಿಗೆ ಯಾವುದೇ ಶುಭವನ್ನು ಮಾಡಲು ಲಭ್ಯವಿರುವ ಎಲ್ಲಕ್ಕಿಂತ ಅತ್ಯಂತ ಮಂಗಳಕರವಾದ ತಿಥಿ ಅಕ್ಷಯತೃತೀಯಾ ಎಂದು ಹೇಳುತ್ತಾನೆ. ಋಷಿ ವ್ಯಾಸರು ಹಿಂದೂ ಮಹಾಕಾವ್ಯ ಮಹಾಭಾರತವನ್ನು ಅಕ್ಷಯತೃತೀಯ ದಿನದಂದು ಗಣೇಶದೇವರಿಗೆ ಪಠಿಸಲು ಪ್ರಾರಂಭಿಸಿದರು. ಇನ್ನೊಂದು ದಂತಕಥೆಯ ಪ್ರಕಾರ ಗಂಗಾನದಿಯು ಈ ದಿನದಂದು ಭೂಮಿಗೆ ಇಳಿದ ದಿನವೆಂದು ಹೇಳಲಾಗುತ್ತಿದೆ ಸುಧಾಮನು ತನ್ನ ಬಾಲ್ಯದ ಗೆಳೆಯ ಕೃಷ್ಣನನ್ನು ದ್ವಾರಕೆಯಲ್ಲಿ ಭೇಟಿ ಮಾಡಿದಾಗ ಅನಿಯಮಿತ ಸಂಪತ್ತನ್ನು ವರವಾಗಿ ಪಡೆದಾಗ ಈ ಶುಭ ದಿನದಂದು ಕುಬೇರನು ಸಂಪತ್ತಿನ ದೇವರನ್ನು ನಂಬಿಸಿದನೆಂದು ನಂಬಲಾಗಿದೆ.

## ಪೂಜಾವಿಧಾನ

ಬೇಗ ಎದ್ದು ಸ್ನಾನ ಮಾಡಿ ಹಳದಿಬಣ್ಣದ ಬಟ್ಟೆ ಧರಿಸಿದರೆ ಶ್ರೇಷ್ಟ. ಪೂಜೆ ಮಾಡುವವರು ಗಂಗಾಜಲದಿಂದ ಪೂಜಾಸ್ಥಳ ಶುದ್ಧೀಕರಿಸಿ ಪೂಜೆಯಲ್ಲಿರುವ ವಿಗ್ರಹಗಳಿಗೆ ಹೂವು, ತುಳಸಿಯನ್ನು ಅರ್ಪಿಸಬೇಕು. ಧೂಪ, ದ್ರವ್ಯ ಬೆಳಗಿ ವಿಷ್ಣುಮಂತ್ರ, ಆರತಿಯೊಂದಿಗೆ ಪೂಜೆ ಮುಗಿಸಬೇಕು. ಬಡವರಿಗೆ ಆಹಾರ, ಬಟ್ಟೆ ದಾನ ಮಾಡಬೇಕು. ಅದು ಎಲ್ಲರಿಗೂ ಶುಭ ಫಲ ನೀಡುತ್ತದೆ. ಆ ದಿನ ಚಿನ್ನ ಖರೀದಿಸುವುದರಿಂದ ಸಂತೋಷ, ಸಮೃದ್ಧಿ ಪಡೆದುಕೊಳ್ಳುತ್ತಾರೆ ಎಂಬ ನಂಬಿಕೆಯಿದೆ.

ಧಾರ್ಮಿಕ ನಂಬಿಕೆಗಳ ಪ್ರಕಾರ ಅಕ್ಷಯತೃತೀಯ ದಿನದಂದು ಶ್ರೀರಾಮಚರಿತ ಮಾನಸ ಪಠಿಸಬೇಕು. ಅದರ ಜೊತೆ ವಿಷ್ಣುವಿನ ಹತ್ತನೇಯ ಅವತಾರ ಕಥೆಯನ್ನು ಓದಬೇಕು ಅಥವಾ ಕೇಳಬೇಕು. ಇವುಗಳನ್ನು ಪಠಿಸುವುದರಿಂದ ಋಷಿಮುನಿಗಳ, ಮಹಾಮುನಿಗಳ ದರ್ಶನ ಫಲ ಲಭಿಸುತ್ತದೆ. ಅಂದು ತುಳಸೀ ಜೀರಿಗೆ ನೀರನ್ನು ಬೆರೆಸಿದ ಕಾಳನ್ನು ಅರ್ಪಿಸಬೇಕು. ತುಳಸೀ, ಪತ್ರೆ ಇಲ್ಲದೇ ವಿಷ್ಣುವಿನ ಆರಾಧನೆ ಅಪೂರ್ಣವೆಂದು ಪರಿಗಣಿಸಲಾಗಿದೆ. ಅಕ್ಷಯತೃತೀಯವನ್ನು ಸಂಭ್ರಮದಿಂದ ಆಚರಿಸಿ ಸಂತಸದಿಂದ ಬಾಳೋಣ.









# ಹಾರಗದ್ದೆ ಶ್ರೀ ಚನ್ನಕೇಶವ ದೇವಾಲಯ

-ಕೆಂಗೇರಿ ಚಕ್ರಪಾಣಿ
94483 86886

ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕಿನ ಒಂದು ಊರು. ಇಲ್ಲಿ ದೊರೆತಿರುವ ಸು. 12 ನೆಯ ಶತಮಾನದ ಶಾಸನದಲ್ಲಿ ಹಾರಗದ್ದೆಯನ್ನು 'ಪಾರಂಗಳನಿ' ಎಂದು ಕರೆಯಲಾಗಿದೆ. ಈ ಊರಿಗೆ ಖಗಪುರಿ ಎಂಬ ಹೆಸರೂ ಇತ್ತು ರುಕ್ಮಾಂಗದ ಚರಿತ್ರೆ ಚನ್ನನ ನೀತಿಕಂದ ಲಕ್ಷ್ಮೀಶಭಾರತ ಕೃತಿಗಳನ್ನು ಬರೆದ ಲಕ್ಷ್ಮೀಶ ಎಂಬ ಕವಿಯು ಇದೇ ಊರಿನವನು. ಹಾರಗದ್ದೆಯಲ್ಲಿ ಸುಂದರವಾದ 11 ನೆಯ ಶತಮಾನಕ್ಕೆ ಸೇರುವ ಚೋಳರ ಕಾಲದ ಚನ್ನಕೇಶ ದೇವಾಲಯವಿದೆ.

ಹಾರಗದ್ದೆಯ ಚನ್ನಕೇಶವನ ದೇವಾಲಯವು ಶಿಥಿಲ ಹಂತವನ್ನು ತಲುಪಿದ್ದರಿಂದ ಸ್ಥಳೀಯರು ಆಸಕ್ತಿ ವಹಿಸಿ ಮೂಲ ಸ್ವರೂಪಕ್ಕೆ ಧಕ್ಕೆ ಬಾರದಂತೆ ಜೀರ್ಣೋದ್ಧಾರವನ್ನು ಮಾಡಿ ಸುತ್ತಲೂ ವಿಶಾಲವಾದ ಪ್ರಕಾರಮಂಟಪ, ಬೃಹದಾದಾಕಾರದ ಅಂದದ ರಾಜಗೋಪುರ, ಅದರ ಮುಂದೆ ಚಂದದ ಗರುಡ ಸ್ತಂಭಗಳನ್ನು ನಿರ್ಮಿಸಿ ದೇವಾಲಯವನ್ನು ಅಚ್ಚುಕಟ್ಟಾಗಿ ವಿಸ್ತರಿಸಿ ದಿನಾಂಕ: 27.04.2016 ರಂದು ಲೋಕಾರ್ಪಣೆಗೊಳಿಸಿದ್ದಾರೆ. ಹೀಗಾಗಿ ಹಾರಗದ್ದೆಯ ಚನ್ನಕೇಶವನ ಭಕ್ತ ಮಂಡಳಿಯವರು ನಿಜಕ್ಕೂ ಅಭಿನಂದನಾರ್ಹರು. ಕೇಶವ ದೇವಾಲಯವು ಗರ್ಭಗೃಹ ಅಂತರಾಳ, ನವರಂಗ ಮುಖಮಂಟಪ, ವಿಶಾಲವಾದ ಪ್ರಾಕಾರಮಂಟಪಗಳನ್ನು ಒಳಗೊಂಡ ಬೃಹತ್ ರಚನೆಯಾಗಿದೆ.

ದೇವಾಲಯದ ಹೊರಭಿತ್ತಿಯು ಕುಡ್ಯ, ಸ್ತಂಭಗಳಿಂದ ಕೂಡಿದ್ದು, ಅಲ್ಲಲ್ಲಿ ದೇವ ಕೋಷ್ಠಗಳಿವೆ. ದೇವಾಲಯದ ಮೇಲ್ಭಾಗದ ಕೈಪಿಡಿಯಲ್ಲಿ ದಶಾವತಾರದ ಮತ್ತು ವಿಷ್ಣುವಿನ ವಿವಿಧ ರೂಪಗಳ ಅಂದದ ಮೂರ್ತಿಗಳಿವೆ. ಗರ್ಭಗುಡಿಗೆ ಇತ್ತೀಚಿನ ಶಿಖರವಿದೆ. ಚನ್ನಕೇಶವನ ದೇವಾಲಯದ ಗರ್ಭಗುಡಿಯಲ್ಲಿ ಸುಮಾರು ಐದು ಅಡಿ ಎತ್ತರವಿರುವ ಶ್ರೀಭೂನೀಳಾ ಸಹಿತನಾದ ಚನ್ನಕೇಶವನ ಸುಂದರಮೂರ್ತಿಯಿದೆ. ದೇವನು ವಿಷ್ಣುವಿನ ಚತುರ್ವಿಂಶತಿ ಮೂರ್ತಿಗಳಲ್ಲಿ ಬರುವ ಕೇಶವನಂತೆ ಶಂಖ, ಚಕ್ರ,ಗದಾ,ಪದ್ಮಧಾರಿಯಾಗಿದ್ದು, ಬಲ ಕೆಳಗಿನ ಕೈ ಅಭಯಹಸ್ತದಲ್ಲಿದದ್ದು, ಹಸ್ತದಲ್ಲಿ ಪದ್ಮವಿದೆ. ಚನ್ನಕೇಶವನ ವಿಗ್ರಹವು ಮೂರ್ತಿಶಿಲ್ಪದ ಲಕ್ಷಣದಿಂದ ಸುಮಾರು 11 ನೆಯ ಶತಮಾನದ ಚೋಳರ ಕಾಲಕ್ಕೆ ಸೇರುವುದು. ಕಿರೀಟ ಮಕುಟವನ್ನು ಧರಿಸಿ ಹಸನ್ಮುಖವಾಗಿರುವ ಕೇಶವನು ನೋಡಲು ಬಹಳ ಆಕರ್ಷಕವಾಗಿರುವನು. ನವರಂಗದಲ್ಲಿ ಅದೇ ಕಾಲಘಟ್ಟಕ್ಕೆ ಸೇರುವ ವಿಶ್ವಕ್ಸೇನರ ಮೂರ್ತಿಯಿದೆ. ದೇವಾಲಯದಲ್ಲಿ ಗಣೇಶ, ಸುಬ್ರಹ್ಮಣ್ಯ ಪಾರ್ವತಿ ದೇವಿಯರ ವಿಗ್ರಹಗಳಿವೆ. ಈ ದೇವಾಲಯದ ಹೊರ ಪ್ರಾಕಾರದ ಈಶಾನ್ಯ ದಿಕ್ಕಿನಲ್ಲಿ ಸುದರ್ಶನ ನಾರಸಿಂಹರ ಅಪರೂಪ ವಿಗ್ರಹವಿದೆ. ವಿಗ್ರಹದ ಮುಂದೆ ಹದಿನಾರು ಬಾಹುಗಳ ಸುದರ್ಶನನಿದ್ದರೆ, ಹಿಂಬದಿಯಲ್ಲಿ ಚತುರ್ಭುಜ ಯೋಗಾನರಸಿಂಹನಿರುವನು.

ಒಟ್ಟಿನಲ್ಲಿ ಹಾರಗದ್ದೆಯ ಚನ್ನಕೇಶವ ದೇವಾಲಯವು ನೋಡಲು ಬಹಳ ದಿವ್ಯವಾಗಿದ್ದು, ಬೆಂಗಳೂರಿಗೆ ಅತೀ ಸಮೀಪದಲ್ಲಿದ್ದು, ಬೆಂಗಳೂರಿನ ಮತ್ತು ಬೆಂಗಳೂರಿಗೆ ಬರುವ ಪ್ರವಾಸಿಗರೆಲ್ಲರೂ ತಪ್ಪದೇ ವೀಕ್ಷಿಸಬೇಕಾದ ಆಲಯವಾಗಿರುವುದು. ಹಾರಗದ್ದೆಯ ಚನ್ನಕೇಶವ ಸ್ವಾಮಿಯ ಬ್ರಹ್ಮರಥೋತ್ಸವವು ಚೈತ್ರಮಾಸ ಕೃಷ್ಣಪಕ್ಷದ ನವಮಿಯಲ್ಲಿ ಬರುವ ಮಿಥುನ ಲಗ್ನದಲ್ಲಿ ಬೆಳಗ್ಗೆ 11.00 ಗಂಟೆಯಿಂದ 11.35 ಗಂಟೆಯೊಳಗೆ ಬಹಳ ವಿಜೃಂಭಣೆಯಿಂದ ಸಹಸ್ರಾರು ಜನರ ಸಮ್ಮುಖದಲ್ಲಿ ವೈಭವವಾಗಿ ನೆರವೇರುತ್ತದೆ. ಉತ್ಸವದ ಅಂಗವಾಗಿ ಮುತ್ತಿನ ಪಲ್ಲಕ್ಕಿ ಉತ್ಸವ,ಬಸವೇಶ್ವರ ರಥೋತ್ಸವವು ಜರುಗುವುದು. ಅಂದು ಬರುವ ಭಕ್ತರೆಲ್ಲರಿಗೂ ಅನ್ನಸಂತರ್ಪಣೆಯ ವ್ಯವಸ್ಥೆಯಿದೆ. ರಥೋತ್ಸವದಲ್ಲಿ ಜಾನಪದ ಕಲಾತಂಡದವರಿಂದ ವೀರಗಾಸೆ ಕುಣಿತ, ಮೈಸೂರು ನಗಾರಿ ಮತ್ತು ಡೊಳ್ಳು ಕುಣಿತ ಮುಂತಾದ ಜಾನಪದ ಮೇಳಗಳು ನಡೆಯುತ್ತದೆ.

**ಹೀಗೆ ಬನ್ನಿ :** ಆನೇಕಲ್ ತಾಲೂಕು ಹಾರಗದ್ದೆಯ ತಾಲೂಕು ಕೇಂದ್ರದಿಂದ ಸುಮಾರು 10 ಕಿ.ಮೀ. ದೂರದಲ್ಲಿದೆ. ಬನ್ನೇರುಘಟ್ಟ-ಆನೇಕಲ್ ರಸ್ತೆಯಲ್ಲಿ 7 ಕಿ.ಮೀ. ಕ್ರಮಿಸಿದರೆ ಜಿಗಣಿ ಸಿಗುವುದು. ಜಿಗಣಿಯಿಂದ 2 ಕಿ.ಮೀ. ದೂರದಲ್ಲಿ ಆನೇಕಲ್ ಕಡೆ ಸಾಗಿ ಹಾರಗದ್ದೆಯನ್ನು ಸೇರಬಹುದು.

# ಹರಿದಾಸಿ ಯದುಗಿರಿಯಮ್ಮನವರ ಶ್ರೀಮದ್ರಾಮಾಯಣ ಕೃತಿಗಳು

- ಡಾ॥ ಸುಮನ ಬದರೀನಾಥ್
94820 94855

**- ಕಳೆದ ಸಂಚಿಕೆಯಿಂದ....**

'ಶ್ರೀರಾಮಧ್ಯಾನ' ಯದುಗಿರಿಯಮ್ಮನವರ ದೀರ್ಘ ಕೃತಿಗಳಲ್ಲೊಂದು. ಇದು ಶ್ರೀರಾಮಾಯಣ ಕತೆಯ ಸಂಗ್ರಹರೂಪವಾಗಿದೆ. ಕೃತಿ 101 ನುಡಿಗಳನ್ನೊಳಗೊಂಡಿದೆ. ದ್ವಿಪದಿಗಳ ಛಂದಸ್ಸಿನಲ್ಲಿ ರಚಿತವಾಗಿದೆ. ದ್ವಿಪದಿಗಳಲ್ಲಿ ದ್ವಿತೀಯಾಕ್ಷರ ಪ್ರಾಸವಿದ್ದು ಕೆಲವೆಡೆ ಅಂತ್ಯ ಪ್ರಾಸವೂ ಕಂಡು ಬರುತ್ತದೆ. ಕೃತಿಯ ಶೈಲಿ ಸರಳ ಸುಂದರ ಆಡು ಕನ್ನಡವಾಗಿದ್ದು ತನ್ನದೇ ಆದ ಸೊಬಗು ಸೊಗಡುಗಳಿಂದ ಕೂಡಿದೆ.



ಈ ರಚನೆ ಕೃತಿಯ ಅಧಿದೇವತೆಯಾದ ಶ್ರೀರಾಮಸ್ತುತಿ, ಗುರು ಸ್ತುತಿಗಳಿಂದ ಪ್ರಾರಂಭಗೊಳ್ಳುತ್ತದೆ ತಮ್ಮಗ್ಗೆ ಕೃತಿರಚನೆಯಲ್ಲಿರುವ ಅಲ್ಪ ಶಕ್ತಿಯನ್ನು ನಿವೇದಿಸಿಕೊಳ್ಳುತ್ತಾ ಭಗವಂತನನ್ನು ಕೃತಿರಚನೆ ಮಾಡುವ ಶಕ್ತಿಯನ್ನು ನೀಡಬೇಕೆಂದು ಪ್ರಾರ್ಥಿಸಿದ್ದಾರೆ.

ಸೀತಾರಾಮ ಶ್ರೀರಘುರಾಮ ಕಾ
ಕುತ್ಸ್ಥರಾಮ ಕರುಣಾಳುರಾಮ.
ಉತ್ತಮ ಗುರುಗಳಿಗೆ ಭಕ್ತಿಯಿಂದಲೆ ಎರಗಿ
ಭಕ್ತವತ್ಸಲನ ಚರಿತ್ರೆ ಪೇಳುವೆನು
ಆದಿ ಮೂರುತಿ ಮಹಿಮೆ ವೇದಂಗಳರಿಯದು ಎನ್ನ
ಭೇಧ ಬುದ್ಧಿಗೆ ಇದು ಭೋಧವಾಗುವುದೆ
ಪತಿತ ಪಾವನ ನಿಮ್ಮ ಸ್ತುತಿಯ ಮಾಡುವುದಕ್ಕೆ
ಮತಿಯ ಪಾಲಿಸಿ ಸದ್ಗತಿಯ ಕೊಡೆನಗೆ
ನಿಮ್ಮ ಪಾದದ ಭಕ್ತಿ ನಿಮ್ಮ ಪಾದದ ಸ್ತುತಿ
ನಿಮ್ಮ ಪೊಗಳುವ ಮತಿಗತಿಯ ಕೊಡೆನಗೆ

ಮುಂದೆ ಕತೆ ದೇವತೆಗಳೆಲ್ಲ ಹೋಗಿ ಭಗವಂತನನ್ನು ಅವತರಿಸುವಂತೆ ಪ್ರಾರ್ಥಿಸುವುದರಿಂದ ಪ್ರಾರಂಭಗೊಳ್ಳುತ್ತದೆ. ಶ್ರೀರಾಮ ಜನನ, ಬಾಲ್ಯ, ವಿಶ್ವಾಮಿತ್ರನೊಡನೆ ಯಾಗವ ಕಾಯಲು ಹೋಗಿದ್ದು, ಶಿವ ಧನುರ್ಭಂಗ, ಸೀತಾವಿವಾಹ, ವನವಾಸಕ್ಕೆ ಹೊರಟಿದ್ದು, ಭರತನಿಗೆ ಪಾದುಕಾ ಪ್ರಧಾನ, ಶೂರ್ಪನಖಿ ಮುಖಭಂಗ, ಸೀತಾಪಹರಣ ಸುಗ್ರೀವ ಸಖ್ಯ ಈ ಎಲ್ಲ ಘಟನೆಗಳೂ ಸಂಕ್ಷಿಪ್ತ ಸಂಗ್ರಹವಾಗಿ 18 ನುಡಿಗಳಲ್ಲಿ ಸರಳ ಸುಂದರವಾಗಿ ನಿರೂಪಿಸಲ್ಪಟ್ಟಿದೆ. ಸುಂದರಕಾಂಡ, ಯುದ್ಧಕಾಂಡಗಳು ತುಸು ವಿಸ್ತಾರವಾಗಿ ವರ್ಣಿಸಲ್ಪಟ್ಟಿವೆ. ಸುಮಾರು 30 ನುಡಿಗಳಲ್ಲಿ ಇವು ಹರಡಿವೆ. ರಾಮ ರಾವಣರ ಯುದ್ಧವನ್ನು ವರ್ಣಿಸುವಾಗ ರಾವಣ ಸಂಹಾರವನ್ನು ಸುಂದರವಾದ ಅಪರೂಪದ ಉಪಮೆಗಳನ್ನಿತ್ತು ಚಿತ್ರಿಸಿದ್ದಾರೆ.

ದಶಕಂಠನೆಂತೆಂಬ ಹಸನಾದ ವೃಕ್ಷವ
ದಶರಥಸುತವಾತ ಬಂದು ಮುರಿಯಿತು ॥
ರಾವಣನೆಂತೆಂಬ ವಾರಣದ ಕೋಡ ನೋಡಿ ವೀರರಾ
ಘವನೆಂಬ ಕೇಸರಿಯು ಮುರಿಯಿತು
ಪುಲಸ್ತ್ಯಪುತ್ರನೆಂಬ ರಾಜ ವೃಷಭವನ್ನು ಇಕ್ಷ್ವಾಕು
ಕುಲದ ವ್ಯಾಘ್ರುವು ಭಕ್ಷಿಸಿತಾಗ
ಆ ಮಹಾರಾಕ್ಷಸೇಂದ್ರನೆಂಬ ಜ್ವಲಿಸುವ ಅಗ್ನಿಯ ಶ್ರೀ
ರಾಮ ಜೀಮೂತವು ಬಂದು ಕೆಡಿಸಿತು

ಇವು ಯದುಗಿರಿಯಮ್ಮನವರ ಪ್ರತಿಭಾ ಸಂಪನ್ನತೆಯ, ಕಲ್ಪನಾ ಶಕ್ತಿಯ ಪ್ರತೀಕವಾಗಿವೆ. ಮುಂದೆ ಮೂರು ನುಡಿಗಳಲ್ಲಿ ಅಜಭವ ಸುರರೆಲ್ಲ ಮಾಡಿದ ಸ್ತೋತ್ರ ರೂಪದಿಂದ ದಶಾವತಾರಗಳನ್ನು ಸಂಕ್ಷಿಪ್ತವಾಗಿ ವರ್ಣಿಸಿದ್ದಾರೆ. ಭಗವಂತನನ್ನು ನಾನಾ ಶ್ರವಣ ಮನೋಹರ ಉಕ್ತಿ ಸುಂದರ ಪ್ರಾಸ

ಭರಿತ ನುಡಿಗಳಿಂದ ಪರಿಪರಿಯಾಗಿ ಸ್ತುತಿಸಿದ್ದಾರೆ. ಕತೆ ಮತ್ತೆ ಮುಂದು ವರೆದು ಭರದ್ವಾಜಾಶ್ರಮಕ್ಕೆ ಭೇಟಿ, ಭರತನ ಹಂಬಲ, ರಾಮಾಗಮನ ವನ್ನು ಹೇಳುತ್ತಾ ಭರತ ಧನ್ಯನಾದೆನೆಂದು ಹೈನ್ನಹಾವಿಗೆ ತಂದು ಪನ್ನಗ ಶಯನನ ಪಾದದೊಳೆರಿಸಿದುದನ್ನು ಸುಂದರವಾಗಿ ಚಿತ್ರಿಸುತ್ತದೆ. ಸುಮಾರು 13 ನುಡಿಗಳಲ್ಲಿ ಶ್ರೀರಾಮ ಪಟ್ಟಾಭಿಷೇಕದ ವರ್ಣನೆಯಿದೆ ಮುಕ್ತಾಯದಲ್ಲಿ,

ಇಂದಿರೇಶನ ಮಹಿಮೆ ಒಂದು ತಿಳಿಯದಿಹ
ಮಂದಮತಿಯ ಆನಂದದಿ ಕ್ಷಮಿಸಿ
ಕಂದನ ನುಡಿಯನು ತಂದೆತಾಯ್ಗಳು ಕೇಳಿ ಆ
ನಂದ ಪಡುವ ತೆರದಿ ಗೋವಿಂದ ॥

ಎಂದು ಅನನ್ಯ ಶರಣಾಗತಿಯಿಂದ ಪ್ರಾರ್ಥಿಸಿದ್ದಾರೆ. ಕಡೆಯ ನುಡಿಯಲ್ಲಿ ಯದುಗಿರಿಯಮ್ಮನವರ ಅಂಕಿತವಿದೆ ವೆಂಕಟ ಎಂದು ಇಂತು ಈ ಕೃತಿ ಹರಿದಾಸ ಸಾಹಿತ್ಯದಲ್ಲಿನ ಸಂಗ್ರಹ ರಾಮಾಯಣ ರಚನೆಗಳಲ್ಲಿ ಒಂದು ಉತ್ತಮ ಸ್ಥಾನ ಪಡೆದಿದೆ.

ಶ್ರೀಮದ್ರಾಮಾಯಣ ಮಂಗಳಂ ಕೃತಿಯೂ ಕೂಡ ರಾಮಾ ಯಣದ ಕತೆಯನ್ನೇ ಹೇಳುತ್ತದೆ. ಇದು 55 ದ್ವಿಪದಿಗಳನ್ನೊಳಗೊಂಡ ರಚನೆ. ತುಸು ಧೀರ್ಘವಾದ ಸಾಲುಗಳಿವೆ. ದ್ವಿತೀಯಾಕ್ಷರ ಪ್ರಾಸ ಅಂತ್ಯ ಪ್ರಾಸಗಳಿವೆ. ಇದು ರಾಮಾಯಣಕ್ಕೆ, ಸೀತಾರಾಮರಿಗೆ ಯದುಗಿರಿ ಯಮ್ಮನವರು ಹಾಡಿದ ಮಂಗಳಗೀತೆಯಾಗಿದೆ. ಕೃತಿ ಮಂಗಳದ ಹಾಡಿ ನಿಂದಲೇ ಪ್ರಾರಂಭಗೊಳ್ಳುತ್ತದೆ.



ಮಂಗಳಂ ಮಹಾನುಭಾವಗೆ ಮಂಗಳಂ ಲೋಕಮಾತೆ ಸೀತೆಗೆ
ಮಂಗಳಂ ಶತ್ರುಘ್ನ ಭರತಗೆ ಮಂಗಳಂ ಸೌಮಿತ್ರಿರಾಮಗೆ ॥

ರಾಮಾಯಣದ ಕತೆಯನ್ನು ಏನನ್ನೂ ಬಿಡದೆ ಎಲ್ಲವನ್ನೂ ಹೇಳುತ್ತಾ ಸಂಕ್ಷಿಪ್ತವಾಗಿ ಸರಳವಾಗಿ ಹೇಳಿಕೊಂಡು ಹೋಗಿದ್ದಾರೆ. ಈ ಕೃತಿಯ ವೈಶಿಷ್ಟವೆಂದರೆ ಪ್ರತಿಯೊಂದು ದ್ವಿಪದಿಯ ನುಡಿಯ ಕೊನೆಯ ಲ್ಲಿಯೂ ರಾಮಗೆ, ರಾಮಚಂದ್ರಗೆ ಎಂದು ಸ್ಮರಿಸಿರುವುದು. ಮಂಗಳ ಹಾಡಿ ರುವುದು. ಇಡೀ ಕೃತಿಯೇ ಶ್ರೀರಾಮ ಮಂಗಳಾಶಾಸನವಾಗಿದೆ. ಭಕ್ತಿ ಭಾವ ಜನಕವಾಗಿದೆ. ಯದುಗಿರಿಯಮ್ಮನವರ ಶೈಲಿಯ ವಿಶಿಷ್ಟತೆಗಳನ್ನೆಲ್ಲ ಒಳ ಗೊಂಡಿದೆ ಕೆಲವು ಸುಂದರ ದ್ವಿಪದಿಗಳು,

ಪಂಪಾಪುಳಿನದ ವನವಕಂಡು ಪಂಕಜಾಕ್ಷಿಯ ನೆನೆದು ವಿರಹ
ತಾಪದಲಿಪ್ಪಿರಲು ಬಂದ ಆಂಜನೇಯಗೆ ಸಖ್ಯ ನೀಡಿದ ರಾಮಚಂದ್ರಗೆ
ರಾನಣನೆಂಬಾ ಗಂಧಹಸ್ತಿಯ ರಾಮಕೇಸರಿ ಬಂದು ಮುರಿಯಲು
ಪೂವ ಮಳೆಯನು ಸುರರು ಕರೆಯಲು ಶಿರಧಿ ಧರಿಸಿದ ರಾಮಚಂದ್ರಗೆ
ಉಟ್ಟುರಾಮ ಜಟೆಯನ್ನು ಶೋಧಿಸಿ ಮಡಿಯ ಸೀತೆ ಸಕಲಾಭರಣ
ತೊಟ್ಟು ಸುಗ್ರೀವ ಶತ್ರುಂಜಯವನೇರಲು ರಥವನೇರಿದ ರಾಮಚಂದ್ರನಿಗೆ

ರಂಗನಾಥನ ಪರಮ ಭಕ್ತೆಯಾದ ಯದುಗಿರಿಯಮ್ಮ ಆ ಕ್ಷೇತ್ರದ ವಿಶಿಷ್ಠತೆಯನ್ನು ಒಂದು ನುಡಿಯಲ್ಲಿ ಹೇಳಿದ್ದಾರೆ.

ರವಿಜಗೆಹಾರ ಅಂಗದಗೆ ಬಾಪುರಿ ದೇವಮಾಲಿಕೆಯಿತ್ತು ಹನುಮಗೆ
ಸುವಿಭೀಷಣಗೆ ರಂಗನಾಥನ ಇತ್ತು ಕಳುಹಿದ ರಾಮಚಂದ್ರಗೆ
ಕತೆ ಇಂತು ಮಂಗಳ ಹಾಡುತ್ತಾ ಮುಕ್ತಾಯಗೊಳ್ಳುತ್ತದೆ.
ಧರೆಯ ಧರ್ಮದಿ ಪೊರೆದು ಪ್ರಜೆಗಳ ಪುತ್ರರಂದದಿ ಪಾಲಿಸುತ
ಈ ವರ ಅಶ್ವಮೇಧವ ರಚಿಸಿ ಶೇಷಾದ್ರಿಯಲಿ ನೆಲಸಿದ
ರಾಮಚಂದ್ರಗೆ

ಈ ಎರಡೂ ಕೃತಿಗಳು ಯದುಗಿರಿಯಮ್ಮನವರ ಕವಿತಾ ಶಕ್ತಿಯ ಉತ್ತಮ ಅಭಿವ್ಯಕ್ತಿಯಾಗಿದ್ದು ಅತ್ಯಂತ ವಿಶಿಷ್ಠವಾಗಿವೆ. ಅವುಗಳೆಂದರೆ ಸಂಕ್ಷಿ ಪ್ತತೆ, ಸಂಗ್ರಹಣಗಳಿದ್ದರೂ ಕತೆಯ ಯಾವ ಭಾಗವನ್ನೂ ಬಿಡದೆ ಎಲ್ಲವನ್ನೂ ಸೂಚಿಸಿ ಹೇಳಿರುವುದು. ಎಲ್ಲೂ ಆಸಕ್ತಿಯನ್ನು ಕಳೆದುಕೊಂಡಿಲ್ಲ. ಇವು ಹರಿದಾಸ ಶ್ರೀವೈಷ್ಣವ ಸಾಹಿತ್ಯಕ್ಕೆ ಉತ್ತಮ ಕೊಡುಗೆಯಾಗಿವೆ. ಚೈತ್ರ ಮಾಸವು ಮಂಗಳಕರವಾದ ಶ್ರೀಮದ್ರಾಮಾಯಣ ಪಾರಾಯಣಕ್ಕೆ ಅತ್ಯಂತ ಶ್ರೇಷ್ಠ ಪರ್ವಕಾಲವಾಗಿದ್ದು ಈ ಪವಿತ್ರ ಸಂದರ್ಭದಲ್ಲಿ ಯದುಗಿರಿಯಮ್ಮ ನವರಿಂದ ರಚಿತವಾದ ಈ ಕೃತಿ ರತ್ನಗಳನ್ನು ಶ್ರೀರಾಮ ನವರಾತ್ರಿಯಲ್ಲಿ ಪ್ರತಿ ದಿನ ಪಾರಾಯಣ ಮಾಡಿ ಧನ್ಯರಾಗೋಣ.

# ವೇಶ್ಯಾವೃತ್ತಿಯನ್ನು ತೊರೆದು ಶರಣೆಯಾದಳು ಸಂಕವ್ವ

- ದೀಪಶ್ರೀ ಎಸ್. ಕೂಡ್ಲಗಿ
8296322664

ಹನ್ನೆರಡನೇ ಶತಮಾನವನ್ನು ವಚನ ಸಾಹಿತ್ಯದ ಸುವರ್ಣ ಕಾಲ ಎನ್ನಬಹುದು. ಈ ಅವಧಿಯು ಪ್ರಸಿದ್ಧ ಹಾಗೂ ಅಪ್ರಸಿದ್ಧ/ಗೌಪ್ಯ ವಚನಕಾರರ ವಚನಕಾರ್ತಿಯರನ್ನು ಸಮಾವ ಜಕ್ಕೆ ಕೊಡುಗೆ ನೀಡಿದ ಕಾಲ. ಇವರಲ್ಲಿ ಬಹಿಷ್ಕೃತ ಸಮಾಜ ದಿಂದ ಪುರಸ್ಕೃತ ಶರಣೆ ಸ್ಥಾನ ಪಡೆದ ಕೀರ್ತಿ ಈಕೆಗೆ ಸಲ್ಲುತ್ತದೆ. ವೇಶ್ಯಾ ವೃತ್ತಿಯನ್ನು ತೊರೆದು ಶರಣರ ಮಾರ್ಗದರ್ಶನದಲ್ಲಿ ಬಸ ವಣ್ಣನ ಮೆಚ್ಚುಗೆ ಪಡೆದವಳು ಸಂಕವ್ವ 12 ನೇ ಶತಮಾನದ ಕವಿ ಯಿತ್ರಿ ಮತ್ತು ಸಂತ ಶಿವ ಶರಣೆ ವೃತ್ತಿಯಲ್ಲಿ ವೇಶ್ಯೆಯಾದರೂ ಜನರ ಆಧರವನ್ನು ಗಳಿಸಿದವಳು ಹಾಗೂ ಬದಲಾವಣೆಯ ಕ್ರಾಂತಿಯಲ್ಲಿ ತೊಡಗಿಕೊಂಡು ಜನತೆಯ ಪ್ರೀತಿ ಸಂಪಾದಿಸಿ ದಳು.

ಸಂಕವ್ವ ಗೌಪ್ಯವಚನಕಾರ್ತಿ ಬಹಿಷ್ಕೃತ ಸಮಾಜದ ಸರ್ವ ಶ್ರೇಷ್ಠ ಶರಣೆ ಈಕೆಯ ಜನನ 1190 ಸಂಕವ್ವಳ ಅಂಕಿತ ನಾಮ ನಿರ್ಲಜ್ಜೇಶ್ವರ. ಶರಣೆಯಾಗುವುದಕ್ಕಿಂತ ಮುಂಚೆ ವೇಶ್ಯಾ ವೃತ್ತಿ ಕಾಯಕ ಮಾಡುತ್ತಿದ್ದಳು. ಆರಂಭದಲ್ಲಿ ವೇಶ್ಯಾ ವೃತ್ತಿಯನ್ನು ಆಯ್ದುಕೊಂಡಿದ್ದ ಈಕೆ, ಬಸವಣ್ಣನವರ ವಚನ ಕ್ರಾಂತಿಯಿಂದ ಪ್ರಭಾವಿತಳಾಗಿ ವೇಶ್ಯಾವೃತ್ತಿಯನ್ನು ಬದಿಗೊತ್ತಿ ಶರಣರ ಒಡ ನಾಡಿಯಾಗಿ, ವಚನಗಳ ಬರವಣಿಗೆಯಲ್ಲಿ ತಲ್ಲೀನಳಾದಳು.

ಮಾನವ ತನ್ನ ಜೀವನದಲ್ಲಿ ಕಾಯಕ ಎಣಿಸದೇ ಕೈಲಾಸ ಬೇಡುವುದು ಅತಿಯಾಸೆ. ಬಸವಣ್ಣನವರ ಅಣತಿಯಂತೆ ವೇಶ್ಯಾ ವೃತ್ತಿಯನ್ನು ಕೇವಲ, ಎಂದು ತಿಳಿಯಬಾರದು. ಪ್ರತಿಯೊಂದು ವೃತ್ತಿ ಹಾಗೂ ಪ್ರವೃತ್ತಿಗೂ ತನ್ನದೇ ಶ್ರೇಷ್ಠತೆ, ಮಾನ್ಯತೆ, ಗುರುತು ಗಳಿಯೆಂದು ತನ್ನ ವೇಶ್ಯಾವೃತ್ತಿಯ ಪದ್ಧತಿಗಳನ್ನು ಮರೆಮಾಚದೇ ಮುಕ್ತ ಮನಸ್ಸಿನಿಂದ ಅರುಹಿದ್ದಾಳೆ ಸಂಕವ್ವ. ಬಸವಣ್ಣ ಸಹ ಆಕೆಯ ಈ ಮುಕ್ತ ಮನಸ್ಸಿನ ಭಾವಕ್ಕೆ ಮನ್ನಣೆ ನೀಡಿದ್ದಾರೆ. ಇದುವರೆಗೆ ಸಂಕವ್ವಳ ಒಂದು ವಚನ ಮಾತ್ರ ಲಭ್ಯವಾಗಿದೆ. ದೊರೆತ ಒಂದು ವಚನ ಸಹ ಮೌಲಿಕವಾಗಿರುವಂತದ್ದು. ಈ ವಚನದಲ್ಲಿ ಯಾವುದೇ ತರಹದ ಮಲಿನತೆ ಇಲ್ಲದಿರುವುದು ಆಧ್ಯಾತ್ಮಿಕವಾಗಿ ಗಮನಿಸಿದಾಗ ಗೋಚರಿಸುತ್ತದೆ. ಈಕೆಯ ವಚ ನಗಳಲ್ಲಿ ಕಾಯಕ ನಿಷ್ಠೆ, ಆತ್ಮವಿಶ್ವಾಸ, ದಿಟ್ಟ ನಿಲುವು, ಅಚಲ ಎದೆಗಾರಿಕೆಯಿದೆ.

"ಒತ್ತೆಯ ಹಿಡಿದು ಮುತ್ತೊತ್ತೆಯ ಹಿಡಿಯೆ
ಹಿಡಿದೆಡೆ ಬತ್ತಲೆ ನಿಲಿಸಿ ಕೊಲ್ಲುವರಯ್ಯಾ
ವ್ರತಹೀನನರಿದು ಬೆರೆದಡೆ
ಕಾದ ಕತ್ತಿಯಲ್ಲಿ ಕೈ ಕಿವಿ ಮೂಗ
ಕೊಯ್ವರಯ್ಯಾ ಒಲ್ಲೆನೊಲ್ಲೆ ಒಲ್ಲೆನಾಗಿ
ನಿಮ್ಮಾಣೆ ನಿರ್ಲಜ್ಜೇಶ್ವರಾ"

ಒಮ್ಮೆ ಗ್ರಾಹಕನಿಗೆ ಹೇಳಿಕೊಟ್ಟರೆ ಮತ್ತೆ ನಾನು ಮಾತನಾಡುವುದಿಲ್ಲ ಹಾಗೂ ನಾನು ಹಾಗೆ ಮಾಡಿದರೆ ಅವರು ನನ್ನನ್ನು ಬೆತ್ತಲೆಯಾಗಿ ನಿಲ್ಲಿಸುತ್ತಾರೆ ಹಾಗೂ ನನ್ನನ್ನು ಕೊಲ್ಲುತ್ತಾರೆ . ನಾನು ಕಲುಷಿತರೊಂದಿಗೆ ಸಹಬಾಳ್ವೆ ನಡೆಸಿದರೆ ಕಾದ ಕತ್ತಿಯಿಂದ ನನ್ನ ಕೈ ಮೂಗು ಕಿವಿಗಳನ್ನು ಕತ್ತರಿಸುತ್ತಾರೆ ಎಂದಿಗೂ ಇಲ್ಲ. ನಿನ್ನನ್ನು ತಿಳಿದುಕೊಂಡು ನಾನು ಮಾಡುವುದಿಲ್ಲ. ನಾಚಿಕೆ ಇಲ್ಲದವನೇ ಶಿವನೇ ನನ್ನ ಮಾತು ಈಕೆಯ ಅಂಕಿತದ ಪ್ರಕಾರ ನಿರ್ಲಜ್ಜೇಶ್ವರ ಎಂದರೆ ನಾಚಿಕೆ ಇಲ್ಲದವನು ಎಂಬ ಅರ್ಥ ನೀಡುತ್ತದೆ.

ಹದ ತಪ್ಪಿ ಕುಟ್ಟಲು ನುಚ್ಚಲ್ಲದೆ ಅಕ್ಕಿಯಿಲ್ಲ ವ್ರತಹೀನನ ನೆರೆಯೆ
ನರಕವಲ್ಲದೆ ಮುಕ್ತಿಯಿಲ್ಲ ಅರಿಯದುದು ಹೋಗಲಿ ಅರಿದು ಬೆರೆದೆನಾದೊಡೆ
ಕಾದಕತ್ತಿಯಲಿ ಕಿವಿಯ ಕೊಯ್ವರಯ್ಯಾ। ಒಲ್ಲೆ ಒಲ್ಲೆನಾಗಿ ನಿಮ್ಮಾಣೆ
ನಿರ್ಲಜ್ಜೇಶ್ವರ

ಆಕೆ ಮುಕ್ತ ಹೃದಯದ, ಆಧ್ಯಾತ್ಮಿಕ ಮಹಿಳೆಯಾಗಿ ಪ್ರಚುರವಾದಳು. ಆಕೆಯ ಅಂಕಿತದ ಪ್ರಕಾರ "ನಿರ್ಲಜ್ಜೇಶ್ವರ" ಅಂದರೆ "ಶಿವ, ನಾಚಿಕೆ ಇಲ್ಲದವನು". ವೇಶ್ಯೆಯೂ ಸಂತಳಾಗಬಹುದು ಎಂಬುದನ್ನು ಪ್ರಪಂಚಕ್ಕೆ ಸಾರಲು ತನ್ನ ಹೆಸರಿನ ಮುಂದೆ ವೇಶ್ಯೆ ಎಂದು ಸೇರಿಸಿಕೊಂಡಿದ್ದಾಳೆ ಎಂದು ನಂಬಲಾಗಿದೆ.

ಆಕೆಯ ಏಕ ಮಾತ್ರ ಕವಿತೆ ಲಭ್ಯವಿದ್ದು. ಈ ಕವಿತೆ ಉಳಿದುಕೊಂಡಿದೆ. ಈ ಕವಿತೆಯನ್ನು ನನ್ನ ವೇಶ್ಯೆಯ ವ್ಯಾಪಾರದಲ್ಲಿ ಎಂದು ಹೆಸರಿಸಲಾಗಿದೆ. ಸಂಕವ್ವ ತನ್ನ ಪ್ರೀತಿಯ ಕುರಿತು ಶಿವನಿಗೆ ಭರವಸೆ ನೀಡುತ್ತಾಳೆ. ತನ್ನ ವೃತ್ತಿಯಲ್ಲಿ ತನ್ನನ್ನು ಮೊದಲು ಕರೆದುಕೊಂಡವರನ್ನು ಹೊರತು ಪಡಿಸಿ ಬೇರೆಯವರೊಂದಿಗೆ ಹೊರಗೆ ಹೋಗುವುದನ್ನು ಹೇಗೆ ನಿಷೇಧಿಸಲಾಗಿದೆ ಎಂದು ಹೋಲಿಕೆ ಮಾಡುತ್ತಾಳೆ. ತಾನು ಈಗಾಗಲೇ ಶಿವನ ಕೈ ಹಿಡಿದಿದ್ದೇನೆ ಹಾಗೂ ತನ್ನವೃತ್ತಿಯ ಭಾಗವಾಗಿ ಈಗ ಯಾರೊಂದಿಗಿದ್ದರೂ ತನ್ನ ಮನಸ್ಸಿ ನಲ್ಲಿ ಶಿವ ಮಾತ್ರ ತನ್ನ ಮನಸ್ಸಿನಲ್ಲಿದ್ದಾನೆ ಎಂದು ಅವಳು ಸುಳಿವು ನೀಡುತ್ತಾಳೆ.









# ಆದಿ ಶಂಕರಾಚಾರ್ಯರು

- ಡಾ|| ಎಸ್. ನಂಜುಂಡಸ್ವಾಮಿ
78990 11310

ಹಿಂದೂ ಧರ್ಮಕ್ಕೆ ವೇದವೇ ಮೂಲ. ವೇದದಲ್ಲಿ ಮೋಕ್ಷ ಸಾಧನೆಗೆ ಕರ್ಮ ಮತ್ತು ಜ್ಞಾನ ಎಂಬ ಎರಡು ಪರಸ್ಪರ ಪೂರಕವಾದ ಅಧ್ಯಾತ್ಮಸಾಧನೆಗಳಿವೆ. ಕ್ರಿ.ಶ. ಐದನೆಯ ಶತಮಾನದ ಹೊತ್ತಿಗೆ ಕರ್ಮಕಾಂಡವು ಮೇಲುಗೈ ಸಾಧಿಸಿ, ಜ್ಞಾನಕಾಂಡವು ಅವನತ ಮುಖಿಯಾಗಿದ್ದ ಸಂದರ್ಭದಲ್ಲಿ ಜ್ಞಾನಕಾಂಡವೇ ಮಿಗಿಲು, ಬ್ರಹ್ಮವೇ ಸತ್ಯ, ಜೀವವೇ ಬ್ರಹ್ಮ, ಆತ್ಮ ಪರಮಾತ್ಮರು ಅಭಿನ್ನರು, ಸಮಸ್ತ ಜೀವಿಗಳೂ ಮುಕ್ತಿಗೆ ಅರ್ಹರು ಎಂಬ ವೈದಿಕ ಸಂಸ್ಕೃತಿಯ ನಿಜವಾದ ಅರ್ಥವನ್ನು ವೇದಾಂತ ತತ್ವದ ಹಿನ್ನೆಲೆಯಲ್ಲಿ ಭರತಖಂಡಕ್ಕೆ ತಿಳಿಯಪಡಿಸಿದ ಆಚಾರ್ಯರು ಆದಿ ಶಂಕರರು. ಅವರ ಜೀವನ ಸಾಧನೆಗಳ ಬಗ್ಗೆ ತಿಳಿಸತಕ್ಕಂತಹ ಶಂಕರ ವಿಜಯವೆಂಬ ಸುಮಾರು 22 ಗ್ರಂಥಗಳಿವೆ. ಒಂದೊಂದು ಗ್ರಂಥದಲ್ಲಿಯೂ ಆದಿಶಂಕರರ ಕಥಾನಕವು ಒಂದೊಂದು ರೀತಿಯಾಗಿ ಇರುತ್ತದೆ. ಇವುಗಳಲ್ಲಿ ವಿದ್ಯಾರಣ್ಯ ಕೃತವೆಂದು ಹೇಳಲ್ಪಡುವ ಶ್ರೀಮಾಧವೀಯ ಶಂಕರವಿಜಯವು ಮತ್ತು ಆನಂದಗಿರಿಯ ಶಂಕರ ವಿಜಯವು ಬಹಳ ಪ್ರಸಿದ್ಧವಾಗಿವೆ. ಶಂಕರಾಚಾರ್ಯರ ಕಾಲಮಾನದ ಬಗ್ಗೆ ಹಲವು ಅಭಿಪ್ರಾಯಗಳಿವೆ. ಇವರ ಕಾಲ ಕ್ರಿ.ಶ. 688 ರಿಂದ 720 ಎಂದು ಅನೇಕ ವಿದ್ವಾಂಸರು ಆಧಾರಪೂರ್ವಕವಾಗಿ ಊಹಿಸಿದ್ದಾರೆ. ಶಂಕರಾಚಾರ್ಯರ ಜೀವನ ಸಾಧನೆಯ ಪ್ರಮುಖ ಅಂಶಗಳನ್ನು ಈ ರೀತಿಯಾಗಿ ವಿವೇಚಿಸಬಹುದು.

## ಜನನ ಬಾಲ್ಯ ಸಂನ್ಯಾಸ ಸ್ವೀಕಾರ



ಇಂದಿನ ಕೇರಳ ರಾಜ್ಯದ ತ್ರಿಚೂರ್ (ತ್ರಿಶೂರ್) ಜಿಲ್ಲೆಯಲ್ಲಿ, ಪೂರ್ಣಾ ನದಿಯ ದಂಡೆಯಲ್ಲಿರುವ ಕಾಲಟಿ ಎಂಬ ಗ್ರಾಮದಲ್ಲಿ ನಂಬೂದರಿ ಬ್ರಾಹ್ಮಣ ಮನೆಯತನಕ್ಕೆ ಸೇರಿದ, ಕೃಷ್ಣ ಯಜುರ್ವೇದಿಗಳಾದ, ಆರ್ಯಾಂಬಾ (ಸತೀ ದೇವಿ) ಮತ್ತು ಶಿವಗುರು ದಂಪತಿಗಳಿಗೆ ಬಹುಕಾಲ ಮಕ್ಕಳಿಲ್ಲದಿರಲು, ಸಮೀಪದ ವೃಷಭಾಚಲ ಕ್ಷೇತ್ರಕ್ಕೆ ಬಂದು ಶಿವನ ಆರಾಧನೆಯನ್ನು ಮಾಡಿದರು. ಶಿವನು ಅವರ ಕನಸಿನಲ್ಲಿ ಕಾಣಿಸಿಕೊಂಡು, ಅವರ ಕೋರಿಕೆಯಂತೆ ಅಲ್ಪಾಯುವಾದರೂ ಸರ್ವಜ್ಞನಾದ ಪುತ್ರನು ಜನಿಸುವಂತೆ ವರ ನೀಡಿದನು. ವೈಶಾಖ ಶುದ್ಧ ಪಂಚಮಿಯಂದು ಆಚಾರ್ಯರರ ಜನನವಾಯಿತು ಎಂದು ಪರಂಪರೆಯ ಪ್ರಕಾರ ತಿಳಿದು ಬರುತ್ತದೆ. ಅಂದೇ ಶಂಕರ ಜಯಂತಿಯನ್ನು ಆಚರಿಸಲಾಗುವುದು. ಶಂಕರರ ಆಯಸ್ಸು 32 ವರ್ಷ ಮಾತ್ರ ಎಂದು ಪರಂಪರೆಯಿಂದ ತಿಳಿದು ಬರುತ್ತದೆ. ತಂದೆ ತಾಯಿಗಳು ಮಗುವಿಗೆ ಶಂಕರನೆಂದು ನಾಮಕರಣ ಮಾಡಿದರು.ಶಿವಗುರುವು ಬೇಗ ಮರಣ ಹೊಂದಲು,ತಾಯಿ ಆರ್ಯಾಂಬೆಯೇ ಮಗನಿಗೆ 5 ನೆಯ ವಯಸ್ಸಿಗೆ ಚೌಲ, ಉಪನಯನಾದಿ ಸಂಸ್ಕಾರಗಳನ್ನು ಮಾಡಿ ವಿದ್ಯಾಭ್ಯಾಸಕ್ಕಾಗಿ ತ್ರಿಚೂರಿನ ಗುರುಕುಲಕ್ಕೆ ಕಳುಹಿಸಿದಳು. ಗುರುಕುಲ ಪದ್ಧತಿಯಂತೆ ಶಂಕರರು ಭಿಕ್ಷೆ ಬೇಡಲು ಹೋದಾಗ, ಒಬ್ಬ ಕಡು ಬಡವಳಾದ ಗೃಹಿಣಿಯು ತನ್ನಲ್ಲಿ ಇದ್ದ ಒಂದು ನೆಲ್ಲಿಕಾಯಿಯನ್ನೇ ಭಿಕ್ಷೆಯಾಗಿ ನೀಡಿದಳು. ಆಕೆಯ ಕರುಣಾರ್ದ್ರದೀನ ಸ್ಥಿತಿಯನ್ನು ಕಂಡ ಶಂಕರರು ಲಕ್ಷ್ಮೀಯನ್ನು ಕುರಿತು ಕನಕಧಾರಾ ಸ್ತೋತ್ರವನ್ನು ರಚಿಸಿ ಸ್ತುತಿಸಿದಾಗ ಆಕೆಯ ಮನೆಯಲ್ಲಿ ಚಿನ್ನದ ನೆಲ್ಲಿಕಾಯಿಯೇ ತುಂಬಿತೆಂದು ಒಂದು ಪ್ರತೀತಿ, ನಂಬಿಕೆ.

ಗುರುಕುಲದಲ್ಲಿ ಶಂಕರರು ಎಂಟನೆಯ ವಯಸ್ಸಿಗೆ ವೇದ ವೇದಾಂಗ, ಸಾಹಿತ್ಯಗಳಲ್ಲಿ ಪಾರಂಗತರಾಗಿ ಮನೆಗೆ ಮರಳಿ ತಾಯಿಯ ಸೇವೆಯಲ್ಲಿ ಅಧ್ಯಯನ, ಅಧ್ಯಾಪನದಲ್ಲಿ ನಿರತರಾದರು. ಅವರ ತಾಯಿ ಸ್ನಾನಾದಿಗಳಿಗೆ ಸಮೀಪದ ಪೂರ್ಣಾನದಿಗೆ ಹೋಗಲು ಅಶಕ್ತರಾದಾಗ, ಶಂಕರರು ನದಿ ದೇವತೆಯನ್ನು ಸ್ತುತಿಸಿ, ನದಿಯು ತಮ್ಮ ಮನೆಯ ಮುಂದೆಯೇ ಇದ್ದ ಕೃಷ್ಣನ ದೇವಾಲಯದ ಬಳಿಯಲ್ಲಿಯೇ ಹರಿಯುವಂತೆ ಪವಾಡ ಮಾಡಿದರು.



ಅಸಾಮಾನ್ಯ ಪ್ರತಿಭಾಶಾಲಿಯಾದ ಶಂಕರರ ಖ್ಯಾತಿಯನ್ನು ಕೇಳಿ ಕೇರಳದ ರಾಜ ರಾಜಶೇಖರನು ಶಂಕರರ ಬಳಿ ಬಂದು ಅವನು ಬರೆದಿದ್ದ ಮೂರು ನಾಟಕಗಳನ್ನು ತೋರಿಸಿ,ಅವರಿಂದ ಮೆಚ್ಚುಗೆ ಗಳಿಸಿ, ಧರ್ಮಪ್ರಸಾರ ಕಾರ್ಯಕ್ಕೆ ಸಾಕಷ್ಟು ಹೊನ್ನನ್ನು ನೀಡಿದನೆಂದು ತಿಳಿದು ಬರುತ್ತದೆ. ಶಂಕರರ ಮನಸ್ಸು ಜ್ಞಾನಮಾರ್ಗದತ್ತ ಹರಿದಿತ್ತು. ಶಂಕರರು ಸನ್ಯಾಸ ಸ್ವೀಕಾರಕ್ಕೆ ತಾಯಿಯ ವಿರೋಧವಿತ್ತು. ಒಂದು ದಿನ ಶಂಕರರು ನದಿಯಲ್ಲಿ ಸ್ನಾನ ಮಾಡುತ್ತಿದ್ದಾಗ ಮೊಸಳೆಯು ಶಂಕರರ ಕಾಲನ್ನು ಹಿಡಿಯಿತು. ಈ ನೆವದಿಂದಲೇ ತಾಯಿಯಿಂದ ಸನ್ಯಾಸಕ್ಕೆ ಅಪ್ಪಣೆ ಪಡೆದ ಶಂಕರರು ಆಪತ್ ಸನ್ಯಾಸವನ್ನು ಸ್ವೀಕರಿಸಿದರು. ತಾಯಿಯ ಕೋರಿಕೆಯಂತೆ “ಅಮ್ಮಾ ನೀನು ಯಾವಾಗ ಸ್ಮರಿಸುವೆಯೋ ಆಗಲೇ ನಾನು ನಿನ್ನ ಬಳಿಗೆ ಬರುವೆನು, ಸಂನ್ಯಾಸಿಯಾದರೂ ನಿನ್ನ ಅಂತ್ಯ ಸಂಸ್ಕಾರವನ್ನು ಮಾಡುವೆನು'' ಎಂದು ವಚನವಿತ್ತರು.

### ಗೋವಿಂದ ಭಗವತ್ಪಾದರಲ್ಲಿ ಶಿಷ್ಯತ್ವ

ಅಚ್ಯುತನ ಪ್ರೇರಣೆಯಂತೆ ಶಂಕರರು ಸೂಕ್ತ ಗುರುವನ್ನು ಅರಸುತ್ತಾ ನರ್ಮದಾ ನದಿಯ ತೀರದಲ್ಲಿದ್ದ ಗೌಡಪಾದಾಚಾರ್ಯರ ಶಿಷ್ಯರಾದ ಗೋವಿಂದ ಭಗವತ್ಪಾದರ ಆಶ್ರಮಕ್ಕೆ ಬಂದರು. ಹೀಗೆ ಹೋಗುವಾಗ ಅವರು ಋಷ್ಯಶೃಂಗರಿಂದ ಪವಿತ್ರೀಕೃತ ಭೂಮಿಯಾಗಿದ್ದ ತುಂಗಾತೀರದ ಶೃಂಗೇರಿಯ ಮೇಲೆ ಹಾದು ಹೋದರೆಂದು ಪ್ರತೀತಿ. ಗೋವಿಂದ ಭಗವತ್ಪಾದರು ಕೇಳಿದ ಪ್ರಶ್ನೆಗಳಿಗೆ ವೇದಾಂತದ ರೀತಿಯಲ್ಲಿ ಉತ್ತರಿಸಿದ ಶಂಕರರು ಅವರಿಂದ ಕ್ರಮ ಸನ್ಯಾಸವನ್ನು ಪಡೆದರು. ಗೋವಿಂದಭಗವತ್ಪಾದರು ಶಂಕರರಿಗೆ ಉಪನಿಷತ್ ಹಾಗೂ ಬ್ರಹ್ಮಸೂತ್ರಗಳ ಮಹತ್ವವನ್ನು ಅಂತರಾರ್ಥವನ್ನು ಮನವರಿಕೆ ಮಾಡಿಕೊಟ್ಟರು. ಒಮ್ಮೆ ನರ್ಮದೆಯು ಉಕ್ಕಿಹರಿದು ಭಗವತ್ಪಾದರು ಹಾಗೂ ಅವರ ಶಿಷ್ಯರುಗಳ ವಾಸವಿದ್ದ ಗುಹೆಗಳಿಗೆ ನುಗ್ಗತೊಡಗಿದಾಗ, ಶಂಕರರು ಕಮಂಡಲವನ್ನು ಒಡ್ಡಿ ನದಿಯ ಪ್ರವಾಹವೆಲ್ಲಾ ಅದರಲ್ಲಿ ಲೀನವಾಗುವಂತೆ ಮಾಡಿ ಪವಾಡವನ್ನು ಮೆರೆದರು. ವಿದ್ವಾಂಸರಿಂದ ಕೂಡಿದ್ದ ಪುರಾತನ ವಿದ್ಯಾಸ್ಥಾನವಾದ ಕಾಶೀ ಕ್ಷೇತ್ರಕ್ಕೆ ಹೋಗಿ ವೇದ ಉಪನಿಷತ್ತು ಬ್ರಹ್ಮಸೂತ್ರಗಳಿಗೆ ಭಾಷ್ಯವನ್ನು ರಚಿಸುವಂತೆ ಗೋವಿಂದ ಭಗವತ್ಪಾದರು ಶಂಕರರಿಗೆ ಅಜ್ಞಾಪಿಸಿದರು.

### ಕಾಶೀ ಕ್ಷೇತ್ರದಲ್ಲಿ ಶಂಕರರು - ಮನೀಷಾ ಪಂಚಕ ರಚನೆ

ಶಂಕರರು ಕಾಶೀ ಕ್ಷೇತ್ರಕ್ಕೆ ಬಂದು, ಅಲ್ಲಿ ಚೋಳದೇಶದಿಂದ ಬಂದಿದ್ದ ಸನಂದನ (ಪದ್ಮಪಾದ) ಎಂಬುವವನನ್ನು ಶಿಷ್ಯನನ್ನಾಗಿ ಸ್ವೀಕರಿಸಿದರು. ಶಂಕರರು ಸ್ನಾನ ಆಹ್ನೀಕಗಳಿಗೆ ಗಂಗಾನದಿಯ ಸ್ನಾನ ಘಟ್ಟದಲ್ಲಿ ಹೋಗುತ್ತಿದ್ದಾಗ ಅವರಿಗೆ ಒಬ್ಬ ಚಂಡಾಲನು ತನ್ನ ನಾಲ್ಕು ನಾಯಿಗಳೊಡನೆ ಅಡ್ಡವಾದನು. ಆಗ ಶಂಕರರು ಹೇ ಚಂಡಾಲ ದೂರ ಸರಿ ಎಂದರು. ಆಗ ಅವನು ಅನ್ನಮಯವಾದ ಈ ಶರೀರಕ್ಕೆ ದೂರ ಹೋಗು ಎಂದು ಹೇಳುತ್ತಿದ್ದೀರೋ, ಅಥವಾ ಆತ್ಮವನ್ನುದ್ದೇಶಿಸಿ ದೂರಸರಿ ಎಂದು ಹೇಳುತ್ತಿದ್ದೀರೋ, ಎಲ್ಲರಲ್ಲಿಯೂ ಸರ್ವವ್ಯಾಪಿಯಾಗಿರುವ ಆತ್ಮವಸ್ತುವು ಒಂದೇ ಆಗಿರುವುದರಿಂದ ಆತ್ಮನನ್ನು ದೂರ ಸರಿ ಎಂದು ಹೇಳಲು ಆಗುವುದಿಲ್ಲ. ಜಗತ್ತೇ ಸಚ್ಚಿದ್ಧಾನಂದ ಬ್ರಹ್ಮನಿಂದ ಆವೃತವಾಗಿರುವಾಗ ಯಾರು ಯಾರಿಂದ ದೂರ ಸರಿಯಬೇಕೆಂದು ಕೇಳಿದನು. ಆಗ ಶಂಕರರಿಗೆ ಜ್ಞಾನೋದಯವಾಗಿ, ಮನೀಷಾಪಂಚಕವೆಂಬ ಶ್ಲೋಕವನ್ನು ರಚಿಸಿ, ಅನುಭವ ಸಿದ್ಧವಾದ ಶಾಶ್ವತ ಜ್ಞಾನವು ಯಾರಿಗೆ ಇರುವುದೋ ಅವನು ಚಂಡಾಲನೇ ಆಗಿರಲಿ, ಬ್ರಾಹ್ಮಣನೇ ಆಗಿರಲಿ ಅವನೇ ನನ್ನ ಗುರು ಎಂದು ಹೇಳಿದರು. ಆ ಬ್ರಹ್ಮಜ್ಞಾನಿಯಾದ ಚಂಡಾಲನು ಶಂಕರಿಗೆ ಸಾಕ್ಷಾತ್ ಕಾಶಿ ವಿಶ್ವನಾಥನಂತೆಯೇ ತೋರಿಬಂದನು. ಶಂಕರರು ಶಿವನನ್ನು ಸ್ತುತಿಸಿ ಸೂತ್ರಭಾಷ್ಯಗಳನ್ನು ಬರೆಯಲು ಸಂಕಲ್ಪಿಸಿದರು.

### ಬದರಿನಾಥದಲ್ಲಿ ಭಾಷ್ಯ ರಚನೆ

ಗೋವಿಂದಭಗವತ್ಪಾದರ ಅನುಜ್ಞೆಯಂತೆ ಭಾಷ್ಯವನ್ನು ರಚಿಸಲು ಶಂಕರರು, ಬ್ರಹ್ಮಸೂತ್ರ ರಚನೆಯಾದ ವ್ಯಾಸ ಪೀಠವೆನಿಸಿದ ನರನಾರಾಯಣ ಆಶ್ರಮವಾದ ಬದರಿಕಾಶ್ರಮಕ್ಕೆ ಹೋದರು. ಚೀನಾ ದೇಶದವರ ಹಾವಳಿಯ ಕಾರಣ ಬದರಿನಾರಾಯಣನ ಮೂರ್ತಿಯನ್ನು ರಕ್ಷಿಸಲು ಅದನ್ನು ಅಲ್ಲಿದ್ದ ನಾರದ ಕುಂಡದಲ್ಲಿ ಮುಳುಗಿಸಿಟ್ಟಿದ್ದ ವಿಚಾರ ತಿಳಿಯಿತು. ಶಂಕರರು ಆ ಮೂರ್ತಿಯನ್ನು ಹುಡುಕಿ ತೆಗೆದು ಪ್ರತಿಷ್ಠಾಪಿಸಿದರು. ಅಲಕನಂದಾ ನದಿಯ ದಡದ ವ್ಯಾಸ ಗುಹೆಯಲ್ಲಿ ಕುಳಿತು ಭಾಷ್ಯ ರಚನೆಗೆ ತೊಡಗಿದರು. ಆಚಾರ್ಯರು ತಮ್ಮ 16 ನೆಯ ವಯಸ್ಸಿನ ಹೊತ್ತಿಗೆ ಬ್ರಹ್ಮಸೂತ್ರ ಉಪನಿಷತ್ತು ಮತ್ತು ಭಗವದ್ಗೀತೆಗಳಿಗೆ ಭಾಷ್ಯವನ್ನು ಬರೆದರು. ವ್ಯಾಸ ಮಹರ್ಷಿಗಳು ವೃದ್ಧ ಬ್ರಾಹ್ಮಣನ ರೂಪದಲ್ಲಿ ಬಂದು ಸೂತ್ರಗಳ ಮೇಲೆ ಶಂಕರರೊಡನೆ ವಾದ ಮಾಡಿದರು. ಶಂಕರರ ವಾದದಿಂದ ತೃಪ್ತರಾದ ವ್ಯಾಸ ಮಹರ್ಷಿಗಳು ಅವರಿಗೆ ದರ್ಶನ ನೀಡಿದರು. ಅಲ್ಲಿಂದ ಅವರು ಗಂಗೋತ್ರಿ ಮತ್ತು ಕೇದಾರನಾಥಕ್ಕೆ ಹೋಗಿ ಶಿವನ ದರ್ಶನ ಪಡೆದು ಕಾಶೀ ಕ್ಷೇತ್ರಕ್ಕೆ ಹಿಂದಿರುಗಿದರು.

### ಮಂಡನಮಿಶ್ರ ಮತ್ತು ಉಭಯ ಭಾರತಿಯವರೊಡನೆ ತತ್ತ್ವಾರ್ಥ ಜಿಜ್ಞಾಸೆ :-



ಕಾಶೀಕ್ಷೇತ್ರದಿಂದ ಪ್ರಯಾಗ ಕ್ಷೇತ್ರಕ್ಕೆ ಬಂದು ಅಲ್ಲಿದ್ದ, ಜೈಮಿನಿ ಮಹರ್ಷಿಗಳಿಂದ ಪ್ರತಿಪಾದಿತವಾದ ಕರ್ಮ





ಪ್ರಧಾನವಾದ ಪೂರ್ವಮಿಮಾಂಸೆಯ ಪ್ರತಿಪಾದಕರಾಗಿದ್ದ ಕುಮಾರಿಲಭಟ್ಟರನ್ನು ಕಂಡು ತಾವು ರಚಿಸಿರುವ ಬ್ರಹ್ಮಸೂತ್ರಭಾಷ್ಯಕ್ಕೆ ವಾರ್ತಿಕವನ್ನು ಬರೆಯಬೇಕೆಂದು ಕೇಳಿದರು. ಆಗ ಅವರು ನಾನು ನನ್ನ ತಪ್ಪಿಗೆ ದೇಹತ್ಯಾಗ ಮಾಡುತ್ತಿದ್ದೇನೆ. ನನ್ನ ಶಿಷ್ಯನಾದ ಮಂಡನಮಿಶ್ರನನ್ನು ವಿಶ್ವರೂಪಾಚಾರ್ಯ ಕಂಡು ಅವನಿಗೆ ಅದ್ವೈತ ತತ್ವವನ್ನು ಬೋಧಿಸಿ ಅವನಿಂದ ವಾರ್ತಿಕವನ್ನು ಬರೆಯಿಸಿ ಎಂದರು.

ಶಂಕರರು ಮಾಹಿಷ್ಮತಿನಗರಕ್ಕೆ ಬಂದು ಮಂಡನ ಮಿಶ್ರರೊಡನೆ ಸಂಭಾಷಣೆ ನಡೆಸಿ,ವಾದ ಮಾಡಲು ಒಪ್ಪಿಸಿದರು. ಬಹುಶ್ರುತ ವಿದ್ವಾಂಸೆಯಾಗಿದ್ದ ಮಂಡನಮಿಶ್ರರ ಪತ್ನಿ ಉಭಯ ಭಾರತಿಯವರ ಸಮ್ಮುಖದಲ್ಲಿ ಶಾಸ್ತ್ರಾರ್ಥ ಚರ್ಚೆಯನ್ನು ನಡೆಸಿದರು. ಮಂಡನಮಿಶ್ರರು ಕರ್ಮಸಿದ್ಧಾಂತದ ಪ್ರಕಾರ ಜೀವ ಬ್ರಹ್ಮರ ಭಿನ್ನತೆಯನ್ನು ಸಮರ್ಥಿಸಿದರು. ಆದರೆ ಶಂಕರರು ಬ್ರಹ್ಮಸತ್ಯ ಜಗನ್ಮಿಥ್ಯಾ,ಅಹಂಬ್ರಹ್ಮಾಸ್ಮಿ,ತತ್ತ್ವಮಸಿ ಮೊದಲಾದ ಉಪನಿಷತ್ ವಾಕ್ಯಗಳನ್ನುದ್ಧರಿಸಿ ಬ್ರಹ್ಮವೊಂದೇ ಸತ್ಯ ಎಂದು ಜೀವ ಬ್ರಹ್ಮೈಕ್ಯವನ್ನು ಸಾಧಿಸಿದರು. ಮಂಡನ ಮಿಶ್ರರು ಶಂಕರರ ವೇದಾಂತ ತತ್ತ್ವವನ್ನು ಒಪ್ಪಿ ಅವರ ಶಿಷ್ಯರಾದರು. ಶಂಕರರು ಅವರಿಗೆ ಸುರೇಶ್ವರಾಚಾರ್ಯರೆಂದು ನಾಮಕರಣ ಮಾಡಿ ಸನ್ಯಾಸಾಶ್ರಮವನ್ನು ನೀಡಿದರು.ಇವರೇ ಮುಂದೆ ಬ್ರಹ್ಮಸೂತ್ರ ಭಾಷ್ಯಕ್ಕೆ ಟೀಕೆಯನ್ನು ಬರೆದು ವಾರ್ತಿಕಕಾರರೆಂದು ಪ್ರಸಿದ್ಧರಾದರು.

### ಶಂಕರರ ದಕ್ಷಿಣ ದಿಗ್ವಿಜಯ

ಶಂಕರರು ದಕ್ಷಿಣಯಾತ್ರೆಯನ್ನು ಕೈಗೊಂಡರು. ಪಂಢರಪುರಕ್ಕೆ ಬಂದು ವಿಠಲನನ್ನು ಸ್ತುತಿಸಿದರು. ಅಲ್ಲಿಂದ ಶ್ರೀಶೈಲಕ್ಕೆ ಬಂದರು. ಅದು ಕಾಪಾಲಿಕರೆಂಬ ಉಗ್ರಪಂಥದ ತಾಂತ್ರಿಕ ಉಪಸಾಕರ ಕೇಂದ್ರವಾಗಿತ್ತು. ಶಂಕರರು ದಿನನಿತ್ಯ ನೀಡುತ್ತಿದ್ದ ವೇದಾಂತ ಪ್ರವಚನವನ್ನು ಕೇಳಿ ಜನರು ಕಾಪಾಲಿಕ ಪಂಥವನ್ನು ತ್ಯಜಿಸಿ ಅದ್ವೈತಾವಲಂಬಿಗಳಾಗತೊಡಗಿದರು. ಕಾಪಾಲಿಕರ ಗುರುವಾದ ಉಗ್ರಭೈರವನು ಶಂಕರರ ಮೇಲೆ ಹಗೆ ಸಾಧಿಸಿ ಏಕಾಂತದಲ್ಲಿ ಧ್ಯಾನಾಸಕ್ತರಾಗಿದ್ದ ಅವರನ್ನು ಕೊಲ್ಲಲು ಬಂದನು. ಆ ಸಂದರ್ಭದಲ್ಲಿ ತಕ್ಷಣ ಅಲ್ಲಿಗೆ ಬಂದ ಆಚಾರ್ಯರ ಶಿಷ್ಯ ಪದ್ಮಪಾದರು ಉಗ್ರಭೈರವನನ್ನು ನಿಗ್ರಹಿಸಿ ಕೊಂದರು. ಅಲ್ಲಿಂದ ಮುಂದೆ ಕ್ರಮೇಣ ಕಾಪಾಲಿಕ ಮತವು ಅವನತಿಯನ್ನು ಹೊಂದಿತು. ಅಲ್ಲಿಂದ ಶಂಕರರು ಹರಿಹರ ಕ್ಷೇತ್ರಕ್ಕೆ ಬಂದು ಹರಿಹರನನ್ನು ಸ್ತುತಿಸಿದರು.

ಆಚಾರ್ಯರು ಶಿಷ್ಯರ ಸಮೇತ ಗೋಕರ್ಣ ಕ್ಷೇತ್ರಕ್ಕೆ ಬಂದು ಆತ್ಮಲಿಂಗವನ್ನು ಪೂಜಿಸಿದರು. ಅಲ್ಲಿದ್ದ ನೀಲಕಂಠನೆಂಬ ಕರ್ಮಮೀಮಾಂಸ ಪಂಡಿತನನ್ನು ವಾದದಲ್ಲಿ ಸೋಲಿಸಿದರು. ನೀಲಕಂಠನು ಆಚಾರ್ಯರ ಶಿಷ್ಯನಾಗಿ ಅದ್ವೈತ ವೇದಾಂತಕ್ಕೆ ನೀಲಕಂಠಭಾಷ್ಯವೆಂಬ ಕೃತಿಯನ್ನು ರಚಿಸಿದನು. ಕೊಲ್ಲೂರುಕ್ಷೇತ್ರಕ್ಕೆ ಬಂದು ಶ್ರೀಚಕ್ರವನ್ನು ಸ್ಥಾಪಿಸಿ,ಉಗ್ರರೂಪಳಾಗಿದ್ದ ಮೂಕಾಂಬಿಕೆಯನ್ನು ಸೌಮ್ಯರೂಪಳನ್ನಾಗಿ ಮಾಡಿ ಅರ್ಚಿಸಿದರು. ಗೋಕರ್ಣದಿಂದ ಶ್ರೀಬಲಿ (ಶಿವಳ್ಳಿ) ಎಂಬ ಕ್ಷೇತ್ರಕ್ಕೆ ಬಂದು, ಅಲ್ಲಿದ್ದ ಪ್ರಭಾಕರನೆಂಬ ಬ್ರಾಹ್ಮಣನ ಮೂಕ ಮಗನ ಜಡತ್ವವನ್ನು ನೀಗಿ, ಅವನಿಂದ ಅದ್ವೈತ ತತ್ವದ ಬಗ್ಗೆ ವಿವರಣೆಯನ್ನು ನೀಡಿಸಿ, ಅವನನ್ನು ತಮ್ಮ ಶಿಷ್ಯನನ್ನಾಗಿ ಸ್ವೀಕರಿಸಿ ಹಸ್ತಾಮಲಕನೆಂದು ನಾಮಕರಣ ಮಾಡಿ ಸನ್ಯಾಸಾಶ್ರಮವನ್ನು ನೀಡಿದರು.

### ಆರ್ಯಾಂಬೆಯ ದೇಹತ್ಯಾಗ

ಆಚಾರ್ಯ ಶಂಕರರು ಗೋಕರ್ಣದಿಂದ ರಾಮಸೇತುವಿಗೆ ಬಂದು ರಾಮೇಶ್ವರನನ್ನು ಅರ್ಚಿಸಿ, ಅಲ್ಲಿಂದ ಕಾಂಚಿ ಪಟ್ಟಣಕ್ಕೆ ಬಂದರು. ಅಲ್ಲಿ ಕಾಮಾಕ್ಷಿಯನ್ನು ಶ್ರೀ ಚಕ್ರವನ್ನು ಪ್ರತಿಷ್ಠಾಪಿಸಿ, ಏಕಾಮ್ರೇಶ್ವರ ಮತ್ತು ವರದರಾಜ ದೇವರುಗಳು ಪೂಜೆಗೆ ಏರ್ಪಾಡು ಮಾಡಿದರು. ಅವರು ದಕ್ಷಿಣ ದೇಶದಲ್ಲಿದ್ದಾಗಲೇ ತಾಯಿ ಆರ್ಯಾಂಬೆಯು ಮರಣಶಯ್ಯೆಯಲ್ಲಿರುವ ಸುದ್ದಿಯು ಬಂದಿತು. ತಕ್ಷಣ ಅವರು ಕಾಲಡಿಗೆ ಬಂದರು ತಾಯಿಗೆ ಮಗನನ್ನು ನೋಡಿ ಬಹಳ ಆನಂದವಾಯಿತು. ದೇವರಧ್ಯಾನದಲ್ಲಿ ಆಕೆ ತನ್ನ ಶರೀರವನ್ನು ಬಿಟ್ಟಳು. ಶಂಕರರು ಸನ್ಯಾಸಿಗಳಾದರೂ, ಮಾತೃಪ್ರೇಮ ಹಾಗೂ ಬ್ರಹ್ಮಭಾವದಿಂದ ಆಕೆಯ ಅಂತ್ಯಸಂಸ್ಕಾರವನ್ನು ನಡೆಸಿದರು.

### ಶೃಂಗೇರಿಯಲ್ಲಿ ಶಂಕರರು

ಆಚಾರ್ಯರು ಶೃಂಗೇರಿಗೆ ಬಂದು ಶ್ರೀ ಶಾರದಾ, ಚಂದ್ರಮೌಳೀಶ್ವರ ಮೂರ್ತಿಗಳನ್ನು ಮತ್ತು ಶ್ರೀಚಕ್ರವನ್ನು ಪ್ರತಿಷ್ಠಾಪಿಸಿ, ದಕ್ಷಿಣಾಮ್ನಾಯ ಮಠವನ್ನು ಸ್ಥಾಪಿಸಿ, ಸುರೇಶ್ವರಾಚಾರ್ಯರನ್ನು ಪೀಠಾಧಿಪತಿಗಳನ್ನಾಗಿ ನೇಮಿಸಿ, ಭಾರತೀ ಸಂಪ್ರದಾಯವನ್ನು ಪ್ರತಿಷ್ಠಾಪಿಸಿದರು.

ಶೃಂಗೇರಿಯಲ್ಲಿದ್ದುಕೊಂಡು ಶಿಷ್ಯರಿಗೆ ಪಾಠವನ್ನು ಮಾಡುವಾಗ ಒಮ್ಮೆ ಅವರಲ್ಲಿ ಶಿಷ್ಯವೃತ್ತಿಯನ್ನು ಮಾಡುತ್ತಾ ಹೊಳೆಯ ಆಚೆ ಬದಿಯಲ್ಲಿ ಆಚಾರ್ಯರ ಬಟ್ಟೆಗಳನ್ನು ಮಡಿ ಮಾಡುತ್ತಿದ್ದ ಸನಂದನನು ಬರಲಿ ಎಂದರು. ಶಿಷ್ಯರು ಅವನು ಶಾಸ್ತ್ರಾರ್ಥಕ್ಕೆ ಅಧಿಕಾರಿಯಲ್ಲ ಎಂದಾಗ, ಅವನಿಗೆ

ಸಮಸ್ತ ವಿದ್ಯೆಯನ್ನೂ ಮನಸ್ಸಿಂದಲೇ ಉಪದೇಶಿಸಿ ಸನಂದನ ಎಂದು ಕರೆದರು. ಕೂಡಲೇ ಅವನು ಉಕ್ಕಿ ಹರಿಯು ತ್ತಿದ್ದ ಹೊಳೆಯನ್ನೂ ಲೆಕ್ಕಿಸದೇ ದಾಟಿ ಬಂದಾಗ, ಅವನ ಪಾದಗಳಿಗೆ ಒಂದೊಂದು ಪದ್ಮಗಳು ಆಸರೆ ನೀಡಿದವು. ಶಂಕರರು ಅವನಿಗೆ ಪದ್ಮಪಾದಚಾರ್ಯನೆಂದು ನಾಮಕರಣ ಮಾಡಿ ಸನ್ಯಾಸಾ ಶ್ರಮವನ್ನು ನೀಡಿದರು. ಶೃಂಗೇರಿಯಲ್ಲಿರುವಾಗಲೇ ಆನಂದಗಿರಿ ಎಂಬುವವನನ್ನು ಶಿಷ್ಯನನ್ನಾಗಿ ಸ್ವೀಕರಿಸಿದರು. ಅವನಿಗೆ ತೋಟಕಾಚಾರ್ಯನೆಂದು ನಾಮಕರಣ ಮಾಡಿ ಸನ್ಯಾಸಾಶ್ರಮವನ್ನು ನೀಡಿದರು.

### ದ್ವಾರಕಾಪೀಠ, ಪುರಿ ಗೋವರ್ಧನ ಪೀಠ, ಜ್ಯೋತಿರ್ಮಠಗಳ ಸ್ಥಾಪನೆ

ಆಚಾರ್ಯ ಶಂಕರರು ದ್ವಾರಕಾ ಮತ್ತು ಉಜ್ಜಯಿನಿಗೆ ಬಂದರು. ಉಜ್ಜಯಿನಿಯಲ್ಲಿ ಮಹಾಕಾಲೇಶ್ವರನನ್ನು, ದ್ವಾರಕೆಯಲ್ಲಿ ಕೃಷ್ಣನನ್ನು ಪೂಜಿಸಿ, ಸ್ತೋತ್ರಗಳನ್ನು ರಚಿಸಿದರು. ದ್ವಾರಕೆ ಯಲ್ಲಿ ಒಂದು ಪೀಠವನ್ನು ಸ್ಥಾಪಿಸಿದರು. ಅಲ್ಲಿಂದ ಪಶ್ಚಿಮದ ಪುರಿ ಮತ್ತು ಕಾಮರೂಪ ದೇಶ ಗಳಲ್ಲೂ ಆಚಾರ್ಯರು ಸಂಚರಿಸಿದರು. ಪುರಿಯಲ್ಲಿ ಜಗನ್ನಾಥನನ್ನು ಸ್ತುತಿಸಿ ಗೋವರ್ಧನ ಮಠ ವನ್ನು ಸ್ಥಾಪಿಸಿದರು. ಕೊನೆಯದಾಗಿ ಶಂಕರಾಚಾರ್ಯರು ಕಾಶ್ಮೀರಕ್ಕೆ ಹೋಗಿ ಬದರಿಯಲ್ಲಿ ಜ್ಯೋತಿರ್ಮಠವನ್ನು ಸ್ಥಾಪಿಸಿದರು.

### ಕಾಶ್ಮೀರದಲ್ಲಿ ಸರ್ವಜ್ಞ ಪೀಠಾರೋಹಣ

ಅಂದಿನ ಕಾಲದಲ್ಲಿ ಕಾಶ್ಮೀರವು ವಿದ್ವಾಂಸರುಗಳ ತವರು ಮನೆಯಾಗಿತ್ತು. ಅಲ್ಲಿದ್ದ ಶಾರದಾ ಮಂದಿರದಲ್ಲಿ ಸರ್ವಜ್ಞಪೀಠವಿತ್ತು. ಶಾರದಾ ಮಂದಿರಕ್ಕೆ ನಾಲ್ಕು ಬಾಗಿಲುಗಳಿದ್ದು ಉತ್ತರ, ಪೂರ್ವ ಮತ್ತು ಪಶ್ಚಿಮ ಬಾಗಿಲುಗಳು ಮಾತ್ರ ತೆರೆದಿದ್ದವು. ಆಚಾರ್ಯಶಂಕರರು ಮುಚ್ಚಿದ್ದ ದಕ್ಷಿಣದ ಬಾಗಿಲನ್ನು ತೆಗೆಸಿದರು.

ಆಗ ಅಂದು ಭಾರತದಲ್ಲಿ ಪ್ರಚಲಿತವಿದ್ದ ಎಲ್ಲ ದರ್ಶನಗಳ ಶಾಸ್ತ್ರಗಳ ವಿದ್ವಾಂಸರ ಗುಂಪು ಅವರನ್ನು ಸುತ್ತುವರಿದು ನಿಮ್ಮ ಸರ್ವಜ್ಞತ್ವದ ಪರೀಕ್ಷೆಯ ನಂತರವೇ ದಕ್ಷಿಣದ್ವಾರದಿಂದ ದೇವಾಲಯವನ್ನು ಪ್ರವೇಶಿಸಬೇಕೆಂದು ಆಗ್ರಹಿಸಿದರು. ಆಚಾರ್ಯ ಶಂಕರರು ಅವರೊಡನೆ ವಾದ ಮಾಡಿ ಸಮರ್ಪಕವಾಗಿ ಅವರ ಎಲ್ಲ ಪ್ರಶ್ನೆಗಳಿಗೂ ಯಥಾರ್ಥವಾದ ಉತ್ತರವನ್ನು ನೀಡಿ ವೇದಾಂತ ತತ್ವದ ಅಂದರೆ ಅದ್ವೈತ ಸಿದ್ಧಾಂತದ ಹಿರಿಮೆಯನ್ನು ಎತ್ತಿ ಹಿಡಿದರು. ನೆರೆದಿದ್ದ ವಿದ್ವಾಂಸರೆಲ್ಲರೂ ಅವರನ್ನು ಸರ್ವಜ್ಞ ಪೀಠದಲ್ಲಿ ಕೂರಿಸಿದರು.

ಸೌಂದರ್ಯ ಲಹರಿ ಸ್ತೋತ್ರವನ್ನು ಅವರು ಇಲ್ಲಿಯೇ ರಚಿಸಿದರೆಂದು ತಿಳಿದು ಬರುತ್ತದೆ. ಅಲ್ಲಿಂದ ಆಚಾರ್ಯರು ನೇಪಾಳಕ್ಕೆ ಹೋಗಿ ಪಶುಪತಿನಾಥನ ದರ್ಶನವನ್ನು ಮಾಡಿ ಅಲ್ಲಿಯೂ ಅದ್ವೈತ ಸಿದ್ಧಾಂತವನ್ನು ಪ್ರತಿಷ್ಠಾಪಿಸಿ, ವೈದಿಕ ಸಂಪ್ರದಾಯದಂತೆ ಪೂಜೆಯು ನಡೆಯುವ ವ್ಯವಸ್ಥೆಯನ್ನು ಮಾಡಿದರು.

### ಶಂಕರರು ಸ್ಥಾಪಿಸಿದ ನಾಲ್ಕು ಆಮ್ನಾಯ ಪೀಠಗಳು, ಷಣ್ಮತ ಸ್ಥಾಪನಾಚಾರ್ಯ, ಪಂಚಾಯತನ ಪೂಜಾಪದ್ಧತಿ

ಹೀಗೆ ಆಚಾರ್ಯ ಶಂಕರರು ಸರ್ವಜ್ಞ ಪೀಠಾರೋಹಣದ ನಂತರ ತಮ್ಮ ಶಿಷ್ಯರಿಗೆ ತಾವು ಸ್ಥಾಪಿಸಿದ್ದ ನಾಲ್ಕುಆಮ್ನಾಯಪೀಠಗಳ ಹೊಣೆಯನ್ನು ಒಪ್ಪಿಸಿದರು. ಶೃಂಗೇರಿ ಪೀಠಕ್ಕೆ ಸುರೇಶ್ವರಾಚಾರ್ಯರನ್ನು, ಪುರಿಯ ಗೋವರ್ಧನ ಮಠಕ್ಕೆ ಪದ್ಮಪಾದರನ್ನು, ದ್ವಾರಕಾಮಠಕ್ಕೆ ಹಸ್ತಾಮಲಕರನ್ನು, ಬದರಿಕಾಶ್ರಮದ ಜ್ಯೋತಿರ್ಮಠಕ್ಕೆ ತೋಟಕಾಚಾರ್ಯರನ್ನು ನಿಯಮಾಕ ಮಾಡಿದರು. ಶಂಕರಾಚಾರ್ಯರಿಗೆ ಷಣ್ಮತ ಸ್ಥಾಪನಾಚಾರ್ಯರೆಂಬ ಬಿರುದು ಬಂದಿತೆಂದು ಸಾಂಪ್ರದಾಯಿಕವಾಗಿ ತಿಳಿದು ಬರುತ್ತದೆ. ಅವರು ಶೋಧಿಸಿ ಉತ್ತಮಗೊಳಿಸಿದ ಐದು ಮತಗ ಳೆಂದರೆ, ವೈಷ್ಣವ,ಪಾಶುಪತ, ಸೌರಮತ, ಶಾಕ್ತ ಮತ್ತು ಗಾಣಪತ್ಯ ಶಂಕರರೇ ಸ್ಥಾಪಿಸಿದ ಅದ್ವೈತ ಪರವಾದ ಸ್ಮಾರ್ತಮತ ನಿರ್ಗುಣ ಬ್ರಹ್ಮೋಪಾಸನೆಯ ಜೊತೆಗೆ ಸಗುಣೋಪಾಸನೆಗಾಗಿ ಅವರು ವಿಷ್ಣು, ಶಿವ, ಅಂಬಿಕೆ, ಸೂರ್ಯ ಮತ್ತು ಗಣಪತಿ ಈ ಐದು ದೇವರುಗಳನ್ನು ಪೂಜಿಸುವಂತೆ ಸ್ಮಾರ್ತಮತದವರಿಗೆ ನಿಯಮಿಸಿದರು.ಇದಕ್ಕೆ ಪಂಚಾ ಯತನ ಪೂಜಾವಿಧಾನವೆಂದು ಹೆಸರು ಈ ಪ್ರಕಾರ ಎಲ್ಲ ದೇವತೆಗಳೂ ಸಮಾನರು.

### ಕೇದಾರನಾಥದಲ್ಲಿ ಐಕ್ಯ

ಕೊನೆಗೆ ಶಂಕರರು ಬದರಿಗೆ ಬಂದು, ಬದರಿ ನಾರಾಯಣನ ದರ್ಶನ ಮಾಡಿ, ಅಲ್ಲಿಂದ ದತ್ತಾತ್ರೇ ಯನ ಗುಹೆಗೆ ಬಂದು ಅವನ ದರ್ಶನ ಮಾಡಿ ಕೈಲಾಸ ಪರ್ವತಕ್ಕೆ ಹೋಗಿ ಸ್ಥೂಲ ಶರೀರವನ್ನು ತ್ಯಜಿಸಿದರು. ಕೇದಾರನಾಥದಲ್ಲಿ ಆಚಾರ್ಯರು ಅದೃಶ್ಯರಾದರು ಎಂದು ಸಂಪ್ರದಾಯ ಪ್ರಕಾರ ಹೇಳುತ್ತಾರೆ. ಕೇದಾರ ನಾಥದಲ್ಲಿ ಆಚಾರ್ಯರ ಒಂದು ಸ್ಮಾರಕವಿದ್ದು, ಆ ಜಾಗದಲ್ಲಿ ಈಚೆಗೆ ಬೃಹತ್ತಾದ ಶಂಕರಾಚಾರ್ಯರ ಪ್ರತಿಮೆಯನ್ನು ಸ್ಥಾಪಿಸಲಾಗಿದೆ.

### ಆಚಾರ್ಯರ ಕೃತಿಗಳು

ಶಂಕರಾಚಾರ್ಯರು ಮೊಟ್ಟ ಮೊದಲನೆಯ ದಾಗಿ ಬ್ರಹ್ಮಸೂತ್ರ, ಭಗವದ್ಗೀತೆ ಮತ್ತು ದಶೋಪ ನಿಷತ್ತುಗಳಿಗೆ ಭಾಷ್ಯವನ್ನು ರಚಿಸಿದರು. ಇವು ಪ್ರಸ್ಥಾನ ತ್ರಯವೆಂದು ಪ್ರಸಿದ್ಧಿಯಾಗಿವೆ. ಮುಂದೆ ಬಂದ ಆಚಾ ರ್ಯರುಗಳು ಇದೇ ಮಾರ್ಗವನ್ನು ಅನುಸರಿಸಿರು ವುದು ಶಂಕರರ ಘನತೆಗೆ ಸಾಕ್ಷಿಯಾಗಿದೆ. ವೇದಾಂತ ತತ್ವ ಅಂದರೆ ಅದ್ವೈತ ತತ್ವಗಳನ್ನು ಆಸಕ್ತರಿಗೆ ಸುಲಭ ವಾಗಿ ಸಂಗ್ರಹ ರೂಪದಲ್ಲಿ ತಿಳಿಸಲು ಪ್ರಕರಣ ಗ್ರಂಥ ಗಳನ್ನು ರಚಿಸಿದರು. ಆತ್ಮಬೋಧ, ಅಪರೋಕ್ಷಾನು ಭೂತಿ,ವಾಕ್ಯವೃತ್ತಿ, ಲಘು ವಾಕ್ಯವೃತ್ತಿ ಉಪದೇಶ ಸಾಹಸ್ರೀ, ವಿವೇಕ ಚೂಡಾಮಣಿ, ಅದ್ವೈತಾನುಭೂತಿ, ಮನೀಷಾಪಂಚಕ, ನಿರ್ವಾಣ ಷಟ್ಕ ಮುಂತಾದವು ಗಳು ಆಚಾರ್ಯರಿಂದ ರಚಿತವಾದ ಮುಖ್ಯ ಪ್ರಕರಣ ಗ್ರಂಥಗಳು. ಅದೇ ರೀತಿ ಆಚಾರ್ಯರು ಸಗುಣೋಪಾ ಸನೆಗೆ ದೇವತಾ ಸ್ತೋತ್ರಗ್ರಂಥಗಳನ್ನು ರಚಿಸಿದರು. ಆಚಾರ್ಯರ ಹೆಸರಿನಲ್ಲಿ ಸುಮಾರು 200ಕ್ಕೂ ಹೆಚ್ಚು ದೇವತಾ ಸ್ತೋತ್ರಗಳಿವೆ.

ಇವುಗಳಲ್ಲಿ ಸುಮಾರು 40 ಕ್ಕೂ ಹೆಚ್ಚು ಶಂಕರಾಚಾರ್ಯಕೃತವೆಂದು ವಿದ್ವಾಂಸರು ಗುರುತಿಸಿ ದ್ದಾರೆ. ಅದ್ವೈತ ವೇದಾಂತಿಗಳಾದ ಶಂಕರರು ಸಕಲ ವೇದಾಂತ ವಿಚಾರವೇತ್ತರಿಗೆ ಗುರುಸ್ಥಾನದಲ್ಲಿ ಇದ್ದಾರೆ. ಅದ್ವೈತ ವೇದಾಂತದಲ್ಲಿ ಸರ್ವಮತ ಸಮನ್ವಯ ಭಾವ ಉಂಟು ಎಂದು ಭಾರತೀಯ ಮತ್ತು ವಿದೇಶಿ ವಿದ್ವಾಂ ಸರು ಅಭಿಪ್ರಾಯ ಪಟ್ಟಿದ್ದಾರೆ.





# ಕೊಡ್ಯಡ್ಕ ಹೊಸನಾಡು ಅನ್ನಪೂರ್ಣೇಶ್ವರೀ ಕ್ಷೇತ್ರ


- ಬಿ. ಆರ್. ಶ್ರೀಕಂಠಯ್ಯ

94494 57684


ಯಾವುದು ಇದು "ಹೊಸನಾಡು ಅನ್ನಪೂರ್ಣೇಶ್ವರಿ" ಎಂಬ ಕುತೂಹಲ ಸಾಮಾನ್ಯವಾಗಿ ಎಲ್ಲರಲ್ಲೂ ಮೂಡುತ್ತದೆ. ನಾವೆಲ್ಲರೂ "ಹೊರನಾಡು ಅನ್ನಪೂರ್ಣೇಶ್ವರಿ" ನೋಡಿದ್ದೇವೆ ಮತ್ತು ಅದರ ಇತಿಹಾಸ ಕೇಳಿದ್ದೇವೆ. ಇದರ ಇತಿಹಾಸದ ಬಗ್ಗೆ ಸ್ವಲ್ಪ ತಿಳಿದುಕೊಳ್ಳೋಣ.

### ಶ್ರೀ ಕ್ಷೇತ್ರ ನಿರ್ಮಾಣದ ಹಿನ್ನಲೆ :-

ಈ ಕ್ಷೇತ್ರದ ಸಂಸ್ಥಾಪಕರು "ಹೆಗ್ಗಡೆ" ಮನೆತನಕ್ಕೆ ಸೇರಿದ ಶ್ರೀಜಯರಾಮ ಹೆಗ್ಗಡೆಯವರು. ಇವರು ೧೯೬೨ ರಲ್ಲಿ ಸಂಸಾರ ಸಮೇತ ಹೊರನಾಡು ಶ್ರೀಆದಿಶಕ್ತ್ಯಾತ್ಮಕ ಅನ್ನ ಪೂರ್ಣೇಶ್ವರಿ ದರ್ಶನಕ್ಕೆ ಬಂದಿದ್ದರು. ಆ ದೇವಿಯ ದರ್ಶನ ಮಾತ್ರದಿಂದಲೇ ಹೇಳಲಾರದಂತಹ ಆನಂದವನ್ನು ಅನುಭವಿಸಿದರು. ತಮ್ಮ ಕುಟುಂಬದ ಆರಾಧ್ಯ ದೇವತೆ ಶ್ರೀದೇವಿ ಅನ್ನ ಪೂರ್ಣೇಶ್ವರಿಗೆ ಕೊಡ್ಯಡ್ಕದಲ್ಲಿ ಕ್ಷೇತ್ರವೊಂದನ್ನು ಕಟ್ಟಿಕೊಡ ಬೇಕೆನ್ನುವ ಪ್ರೇರಣೆಗೆ ಒಳಗಾದರು. ಈ ಸಂದರ್ಭದಲ್ಲಿ ಕಟೀಲು ಅರ್ಚಕರು, ಹದಿನೆಂಟು ವರ್ಷದ ಶ್ರೀಜಯರಾಮ ಹೆಗ್ಗಡೆಯ ವರಿಗೆ ನಿನಗೆ "ದೇವಸ್ಥಾನ ಕಟ್ಟಿಸುವ ಯೋಗ"ವಿದೆ ಎಂದು ಹೇಳಿದ್ದನ್ನು ಮೆಲಕು ಹಾಕುತ್ತಾ ಮುಂದಿನ ಪ್ರಯತ್ನ ಮಾಡ ಬೇಕೆಂದು ತೀರ್ಮಾನಿಸಿದರು. ಈ ಪ್ರೇರಣೆಗೆ ತಕ್ಕಂತೆ, ಹೆಗ್ಗಡೆ ಯವರ ಚಿಕ್ಕತಾಯಿಯ ಸ್ವಪ್ನದಲ್ಲಿ "ನಾನು ನಿಮ್ಮ ಕೊಡ್ಯಡ್ಕ ಭೂಮಿಯಲ್ಲಿ ನೆಲೆ ನಿಂತಿದ್ದೇನೆ" ಎಂದು ದೇವಿಯ ಆದೇಶವಾಯಿತು. ಇದಕ್ಕೆ ಪೂರಕವಾಗಿ ಕಟೀಲಿನ ಜ್ಯೋತಿಷಿ ತಮ್ಮ ಸ್ವಂತ ನಿವೇಶನದಲ್ಲಿಯೇ ದೇವಾಲಯ ನಿರ್ಮಾಣವಾಗಬೇಕೆನ್ನುವುದು ದೇವಿಯ ಸಂಕಲ್ಪ ಎಂದು ಹೇಳಿದರು. ಶ್ರೀದೇವಿಯ ಸನ್ನಿಧಿಯಲ್ಲಿ ಪರಿವಾರ ದೇವರುಗಳ ಯುಕ್ತವಾಗಿ ನೆಲೆಗೊಳ್ಳುವ ವಿಧಿ ವಿಧಾನಗಳ ಕುರಿತೂ ಅಧಿಸೂಚನೆಗಳನಿತ್ತರು. ಎಲ್ಲಾ ನ್ಯೂನತೆಗಳನ್ನು ಪರಿಹರಿಸಿಕೊಂಡು, ಸುಮಾರು ಏಳು ಎಕರೆ ವಿಸ್ತಾರಜಾಗದಲ್ಲಿ ಕ್ಷೇತ್ರದ ಶಂಕು ಸ್ಥಾಪನೆಗೆ ಶುಭದಿನ ನಿಶ್ಚಯ ವಾಯಿತು. ಭೂಮಿ ಪೂಜೆ ಮಾಡುವ ಹಿಂದಿನ ದಿನ ಅನೇಕ ಶುಭ ಸೂಚನೆಗಳಾಯಿತು ಆಗಲೇಬೇಕು, ಇದು ಆ ತಾಯಿಯ ನಿರ್ಣಯವಲ್ಲವೆ!

### ಶ್ರೀ ಅನ್ನಪೂರ್ಣೇಶ್ವರಿ :-

ಒಳಾಂಗಳಕ್ಕೆ ಬಂದಾಗ, ಸುಂದರವಾದ ಶಿಲಾ ಮಂದಿರ,ಇಕ್ಕೆಲಗಳಲ್ಲಿರುವ ಸಿಂಹಗಳು, ಮಧ್ಯೆ ನಂದಿವಾಹನ ಎರಡು ಸಿಂಹದ್ವಾರಗಳಿರುವ ಈ ಕ್ಷೇತ್ರದಲ್ಲಿರುವ ಶ್ರೀ ಅನ್ನ ಪೂರ್ಣೇಶ್ವರಿಯು ದರ್ಶನವೀಯುತ್ತಾಳೆ. ಈ ಪಂಚಲೋಹದ ವಿಗ್ರಹವು. ಐದು ಅಡಿ ಎತ್ತರ ಮತ್ತು ೫೫೦ ಕಿಲೋ.ಗ್ರಾಂ ಭಾರವಿದೆ ಎಂದು ತಿಳಿದು ಬರುತ್ತದೆ. ವಿಗ್ರಹವನ್ನು ಕೆಲವೇ ಮಂದಿ ಋತ್ವಿಕರು ಮಾತ್ರ ಪವಾಡ ಸದೃಶ್ಯವಾಗಿ ಸಾಗಿಸಿ ಎತ್ತಿ ನಿಲ್ಲಿಸಿದರು ಎಂದು ಹೇಳುತ್ತಾರೆ. ಇದು ಆಶ್ಚರ್ಯವಾದ ಸಂಗತಿ ಎಂದು ಹೇಳುತ್ತಾರೆ. ಈ ದೇವಿಯು ಚತುರ್ಭುಜ ಗಳಿಂದ ಕೂಡಿ, ಹಿಂದಿನ ಎರಡು ಹಸ್ತಗಳು ಮೇಲ್ಮುಖವಾಗಿದ್ದು, ಎಡಹಸ್ತದಲ್ಲಿ ಶಂಖ, ಬಲಹಸ್ತದಲ್ಲಿ ಚಕ್ರವನ್ನು ಧರಿಸಿದ್ದಾಳೆ. ಹಾಗೂ, ಇನ್ನೆರಡು ಕೈಗಳ ಪೈಕಿ ಎಡಹಸ್ತ ಅಭಯಹಸ್ತ ಮತ್ತು ಬಲ ಹಸ್ತದಲ್ಲಿ ಅನ್ನ ಸೌಟಿನೊಂದಿಗೆ ಭಕ್ತರನ್ನು ಕರುಣಿಸುತ್ತಿರುತ್ತಾಳೆ. ಶಿಲಾ ಮಂದಿರದಲ್ಲಿ ಸುಮಾರು ೪೦೦ ಭಕ್ತರು ನೆಲದ ಮೇಲೆ ಸುಖವಾಗಿ ದೇವಿಯ ಪೂಜಾ ಕೈಂಕರ್ಯಗಳನ್ನು ನೋಡಬಹುದು. ಇಲ್ಲಿಗೆ ಬರುವ ಭಕ್ತರು ಸಂಪ್ರಾಯದಂತೆ ತಮ್ಮ ಅಂಗಿ ಮತ್ತು ಒಳ ಬನೀನು ತೆಗೆದು ಒಳಗೆ ಪ್ರವೇಶಿಸಬೇಕು.



**ಇತರ ದೇವಾಲಯಗಳು :-**

ಶ್ರೀ ಪ್ರಸನ್ನ ಗಣಪತಿ-ಗರ್ಭಗುಡಿಯ ಹಿಂಭಾಗದಲ್ಲಿ ಸುಂದರವಾದ ಶ್ರೀ ಪ್ರಸನ್ನ ಗಣಪತಿಯನ್ನು ದರ್ಶನ ಮಾಡಬಹುದು. ಬೆಳ್ಳಿಯ ಕವಚ ಧರಿಸಿರುವ ಶಿಲಾಮೂರ್ತಿ ಬಹಳ ಸುಂದರವಾಗಿದೆ. ಈತ ಕ್ಷಿಪ್ರ ಫಲದಾಯಕ. ಇಲ್ಲಿ ಕಲ್ಲಿನಲ್ಲಿ ಕೆತ್ತಿರುವ ಗಣಪತಿ ಸ್ತೋತ್ರವನ್ನು ಹೇಳಿಕೊಂಡು ಭಕ್ತಿ ಭಾವದಿಂದ ನಮಸ್ಕರಿಸುವಾಗ ನಮ್ಮ ಮುಂದೆ ಪ್ರತ್ಯಕ್ಷವಾಗಿ ಬಂದಿರುವನೋ ಎಂಬ ಭಾವನೆ ಬರುತ್ತದೆ. ಶ್ರೀನಾಗ ಸನ್ನಿಧಿ-ಮೂರು ಹೆಡೆಗಳನ್ನು ಬಿಚ್ಚಿ ನಾಗ ಲಿಂಗೇಶ್ವರ ಮೂರ್ತಿಯು ಬಹಳ ಸುಂದರವಾಗಿದೆ. ಇಲ್ಲಿ "ಅಶ್ಲೇಷ ಬಲಿ" ವಿಶೇಷವಾಗಿ ನೆರವೇರಿಸಲಾಗುತ್ತದೆ. ಶ್ರೀಆಂಜನೇಯ ಸ್ವಾಮಿ ರಜತಕವಚ ಧರಿಸಿರುವ ಶಿಲಾ ಆಂಜನೇಯ ಮೂರ್ತಿ ಬಹಳ ಚೆನ್ನಾಗಿದೆ. ಇಲ್ಲಿ ಪವಮಾನ ಕಲಶಾಭಿಷೇಕ, ವಡಮಾಲ ಹಾರದ ಸೇವೆ, ಇತ್ಯಾದಿಗಳು ನಡೆಯುತ್ತದೆ. ಇಲ್ಲಿಯೂ ಕೂಡ ಆಂಜನೇಯನ ಸ್ತೋತ್ರವನ್ನು ಕಲ್ಲಿನ ಮೇಲೆ ಕೆತ್ತಲಾಗಿದೆ. ನವಗ್ರಹ ಮಂದಿರ - ಒಂಬತ್ತು ಗ್ರಹಗಳ ಮೂರ್ತಿಗಳು ಶಾಸ್ತ್ರೋಕ್ತವಾಗಿ ಪ್ರತಿಷ್ಠಾಪಿಸಲಾಗಿದೆ. ಎಲ್ಲರಿಗೂ ತಿಳಿದ ಹಾಗೆ, ನಮ್ಮ ಜೀವನದ ಆಗು ಹೋಗುಗಳು ನವ ಗ್ರಹಗಳ ಸಂಚಾರದಿಂದಲೇ ಆಗುತ್ತದೆ. ಇಲ್ಲಿನ ವಿಶೇಷತೆ ಶನೈಶ್ವರ ಪೂಜೆ, ನವಗ್ರಹ ಶಾಂತಿ ಇತ್ಯಾದಿ ಕಾರ್ಯಕ್ರಮಗಳು ನಡೆಯುತ್ತದೆ. ಗ್ರಹಚಾರ ಪರಿಹಾರಕ್ಕಾಗಿ, ದೀಪಗಳಿಗೆ ಎಣ್ಣೆ ಹಾಕುವ ಸಂಪ್ರದಾಯವಿದೆ ಎಳ್ಳಿನ ಎಣ್ಣೆಯು ಬಹಳ ಶ್ರೇಷ್ಠವಾದುದು.

**ನವದುರ್ಗೆಯರು -**

ಶಿಲಾ ತೀರ್ಥ ಮಂಟಪದ ಸುತ್ತಾ ಸುಮಾರು ನಾಲ್ಕು ಅಡಿ ಎತ್ತರವಿರುವ ಶಿಲಾ ಮೂರ್ತಿಗಳ ನವದುರ್ಗೆಯರು ವಿರಾಜಮಾನರಾಗಿದ್ದಾರೆ. ಈ ಒಂಬತ್ತು ದುರ್ಗೆಯರ ಹೆಸರುಗಳು ಮತ್ತು ಸ್ತೋತ್ರ ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿರುತ್ತದೆ. ಈ ದುರ್ಗೆಯರ ಹೆಸರು ಮತ್ತು ರೂಪಗಳ ಹಿಂದೆ ವಿಶೇಷತೆ ಇದೆ. ನವರಾತ್ರಿಯ ಕಾಲದಲ್ಲಿ ನವದುರ್ಗೆಯರಿಗೆ ವಿಶೇಷ ಪೂಜೆಗಳು ನಡೆಯುತ್ತದೆ.

1) ಶೈಲಪುತ್ರೀ 2) ಬ್ರಹ್ಮಚಾರಿಣೀ 3) ಚಂದ್ರಘಂಟಾ 4) ಕೂಷ್ಮಾಂಡ 5) ಸ್ಕಂದ ಮಾತಾ 6) ಕಾತ್ಯಾಯನೀ 7) ಕಾಳರಾತ್ರೀ 8) ಮಹಾಗೌರೀ 9) ಸಿದ್ಧಿಧಾತ್ರೀ

**ಶ್ರೀ ಶಂಕರಾಚಾರ್ಯ ಮತ್ತು ಶ್ರೀ ಮಧ್ವಾಚಾರ್ಯರ ವಿಗ್ರಹಗಳು :-**

ಯಾವ ಭೇದವಿಲ್ಲದೆ,ಅದ್ವೈತ ಮತ್ತು ದ್ವೈತ ತತ್ವಗಳನ್ನು ಪ್ರಚುರಪಡಿಸಿದ, ಶ್ರೀ ಶಂಕರಾಚಾರ್ಯರು ಮತ್ತು ಶ್ರೀಮಧ್ವಾಚಾರ್ಯರ ಶಿಲಾ ಮೂರ್ತಿಗಳನ್ನು ಕಾಣಬಹುದು. ಶ್ರೀಶಂಕರಾಚಾರ್ಯರ ಮೂರ್ತಿಯ ಪ್ರತಿಷ್ಠಾಪನೆ ಮತ್ತು ಸುಂದರವಾದ ಶ್ರೀ ಶಾರದ ಸಾಂಸ್ಕೃತಿಕ ಕಲಾಮಂದಿರವನ್ನು, ಶೃಂಗೇರಿ ಶಾರದಾ ಪೀಠದ ಮಹಾಸನ್ನಿಧಾನ ಶ್ರೀ ಶ್ರೀ ಶ್ರೀಭಾರತೀ ಮಹಾಸ್ವಾಮಿಗಳ ಅಮೃತ ಹಸ್ತದಿಂದ ಮೇ ೧೯೯೯ ರಲ್ಲಿ ನೆರವೇರಿತು,ಹಾಗೂ, ಮಧ್ವಾಚಾರ್ಯರ ಮೂರ್ತಿಯನ್ನು ಪೇಜಾವರ ಮಠಾಧೀಶರಾಗಿದ್ದ ಶ್ರೀ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳು ಮೇ ೨೦೦೨ ರಲ್ಲಿ ಪ್ರತಿಷ್ಠಾಪಿಸಿದ್ದಾರೆ. ತುಳಸಿ ಬೃಂದಾವನ ಬಹಳ ಸುಂದರವಾದ ಶಿಲೆಯ ತುಳಸೀಪೀಠ ಎಲ್ಲರನ್ನು ಆಕರ್ಷಿಸುತ್ತದೆ. ಇದರ ವಿಶೇಷತೆ, ಈ ತುಳಸೀ ಪೀಠವನ್ನು ಕೂರ್ಮವು (ಅವತಾರ) ಹೊತ್ತಿರುವಂತಿದೆ.

ದೇವಿಯ ಸನ್ನಿಧಿಯಲ್ಲಿ ಮಹಾಪ್ರಸಾದಕ್ಕೆ ಕೊರತೆಯಿಲ್ಲ. ಈ ಕ್ಷೇತ್ರದಲ್ಲಿ ಎರಡು ಅನ್ನ ಛತ್ರಗಳಿವೆ.'ಅನ್ನಪೂರ್ಣ' ಮತ್ತು 'ವೈಷ್ಣವಿ'. ಶ್ರೀಅನ್ನಪೂರ್ಣಾ ಛತ್ರದಲ್ಲಿ, ಏಕ ಕಾಲದಲ್ಲಿ ಸುಮಾರು ೯೦೦ ಭಕ್ತರು ಅನ್ನ ಪ್ರಸಾದವನ್ನು ಸ್ವೀಕರಿಸಬಹುದು. ಈ ಛತ್ರದ ಉದ್ಘಾಟನೆಯು, ಹೊರನಾಡು ಶ್ರೀಆದಿಶಕ್ತ್ಯಾತ್ಮಕ ಅನ್ನಪೂರ್ಣೇಶ್ವರಿ ಕ್ಷೇತ್ರದ ಧರ್ಮಾಧಿಕಾರಿಗಳಾದ, ಶ್ರೀಭೀಮೇಶ್ವರ ಜೋಶಿಯವರಿಂದ ೧೯೯೬ ರಲ್ಲಿ ನೆರವೇರಿತು. ಪ್ರಸಾದ ಭವನದಲ್ಲಿ ನಮಗೆ ಶುಚಿಯಾದ ವಾತಾವರಣದಲ್ಲಿ ರುಚಿಯಾಗಿ ತಯಾರಿಸಿದ ಪ್ರಸಾದವನ್ನು ಶಿಸ್ತಿನಿಂದ ಎಲ್ಲರಿಗೂ ಬಡಿಸುತ್ತಾರೆ. ಎಲ್ಲರೂ,ಇಲ್ಲಿನ ನಿಯಮಗಳನ್ನು ಪಾಲಿಸಿ ಪ್ರಸಾದವನ್ನು ಸ್ವೀಕರಿಸಬೇಕು. ನಮಗೆ ಇಲ್ಲಿ ತಂಗಲು 'ಶ್ರೀ ಕೃಷ್ಣ' ಅತಿಥಿ ಗೃಹವಿದೆ. ಇಲ್ಲಿದ್ದು, ನಾವು ದೇವಿಯ ಸೇವೆಗಳನ್ನು ಮಾಡಬಹುದು. ಪ್ರಾಂಗಣದ ಸುತ್ತಲೂ ಪ್ರದಕ್ಷಿಣೆ ಹಾಕುವಾಗ ನೂರೊಂದು ನುಡಿ ಮುತ್ತುಗಳನ್ನು ಓದಿಕೊಂಡು ನಿಧಾನವಾಗಿ ಹೋಗಬಹುದು. ಒಂದೊಂದು ಅಮೂಲ್ಯವಾದ ನುಡಿಗಳು.

ಶ್ರೀ ಕ್ಷೇತ್ರದಲ್ಲಿ ಗಣ ಹೋಮ, ಹನುಮ ಜಯಂತಿ, ನಾಗರ

ಪಂಚಮಿ ಶ್ರೀಚಂಡಿಕಾ ಹೋಮ, ಇತ್ಯಾದಿ ಅನೇಕ ಉತ್ಸವಗಳು ನಡೆಯುತ್ತಿರುತ್ತವೆ. ನಾವು ಅಮ್ಮನಿಗೆ ಭಕ್ತಿಯಿಂದ ನೀಡಿದರೆ, ನಮಗೆ ಅಮ್ಮ ನೀಡುತ್ತಾಳೆ ಎಂಬ ನಿಸ್ವಾರ್ಥ ಭಾವದಿಂದ, ಕಾಲಕ್ಕೆ ಅನುಗುಣವಾಗಿ ಹೊರೆಕಾಣಿಕೆ, ಅಕ್ಕಿ ಮತ್ತು ಇತರೇ ಅನ್ನಪ್ರಸಾದಕ್ಕೆ ಉಪಯೋಗಿಸುವ ಪದಾರ್ಥಗಳನ್ನು ತಂದು ಕೊಡುತ್ತಾರೆ. ತಮ್ಮ ಕೋರಿಕೆಗಳನ್ನು ಪೂರ್ಣಗೊಳಿಸಿದ ತಾಯಿ ಅನ್ನಪೂರ್ಣೇಗೆ ಸೀರೆಯನ್ನುಡಿಸಿ ತಮ್ಮ ಭಕ್ತಿ ಪೂರ್ವಕವಾದ ಕೃತಜ್ಞತೆಯನ್ನು ಸಲ್ಲಿಸುತ್ತಾರೆ. ಸುಮಾರು ಎರಡೂವರೆ ದಶಕಗಳ ಹಿಂದೆ ಶ್ರೀ ಕ್ಷೇತ್ರದಲ್ಲಿ ಸ್ಥಾಪಿತವಾದ ಶ್ರೀಅನ್ನಪೂರ್ಣೇಶ್ವರಿಯು ತನ್ನ ಭಕ್ತ ರನ್ನು ಅನುಗ್ರಹಿಸಿ ಎಲ್ಲರನ್ನೂ ಕರುಣಿಸುತ್ತಿದ್ದಾಳೆ. ದೇವಿಯ ಬ್ರಹ್ಮ ರಥೋತ್ಸವವು ಪ್ರತಿ ವರ್ಷ ಜನವರಿ ೨೬ರಂದು ನೆರವೇರುತ್ತದೆ. ಈ ಕಾಲದಲ್ಲಿ ಭಕ್ತರ ಸಂದಣಿ ಇರುತ್ತದೆ.

ತಿರುಗುವ ಶಿಲಾಗೋಲ-ಇಲ್ಲಿ ಒಂದು ವಿಶೇಷತೆಯನ್ನು ಕಾಣಬಹುದು. ಗ್ರಾನೈಟಿನಿಂದ ಮಾಡಲ್ಪಟ್ಟ ಈ ಶಿಲಾ ಗೋಲವು ಸುಮಾರು ೧೫೦೦ ಕೆಜಿ ತೂಕವಿದೆ. ವೈಜ್ಞಾನಿಕ ತಳಹದಿಯ ಮೇಲೆ, ಈ ಗೋಲವು ಸರಾಗವಾಗಿ ತಿರುಗಬಲ್ಲದು, ಗೋಲದ ಕೆಳಗೆ ೮/೧೦೦೦ ಮಾತ್ರ ಸ್ಥಳಾವಕಾಶವಿದೆ. ಇದು ಕೇವಲ ನೀರಿನ ಮೇಲ್ಮುಖ ಒತ್ತಡದ ಪ್ರಭಾವದಿಂದ ನೆರವೇರುತ್ತದೆ ಎಂದು ತಿಳಿದುಬರುತ್ತದೆ. ಈ ಗೋಲದ ತಿರುಗಣೆಯನ್ನು ಮಕ್ಕಳು ಕೂಡ ನಿಲ್ಲಿಸಬಹುದು. ಇಲ್ಲಿ ಇದರ ವಿವರಣೆಯ ಫಲಕವಿದೆ. ಇದನ್ನು ನೋಡಿಯೇ ಆನಂದಿಸಬೇಕು. ಇಲ್ಲಿನ ಮೃಗಾಲಯವು ಬಹಳ ಸುಂದರವಾಗಿದೆ. ಇಲ್ಲಿ ನವಿಲು, ಪಾರಿವಾಳ ಜಿಂಕೆ, ಕಾಡಬೆಕ್ಕು, ವಾನರಗಳು, ಕುದುರೆ ಮತ್ತು ಆನೆ ಇತ್ಯಾದಿ ಪ್ರಾಣಿಗಳನ್ನು ನೋಡಿ ಮಕ್ಕಳೂ ಮತ್ತು ಹಿರಿಯರು ಆನಂದಿಸಬಹುದು.



ಅನ್ನಪೂರ್ಣೇ ಸದಾ ಪೂರ್ಣೇ ಶಂಕರ ಪ್ರಾಣವಲ್ಲಭೇ।
ಜ್ಞಾನವೈರಾಗ್ಯ ಸಿದ್ಧ್ಯರ್ಥಂ ಭಿಕ್ಷಾಂ ದೇಹಿ ಚ ಪಾರ್ವತಿ।

ಎಂದು ಆ ಮಹಾತಾಯಿಯನ್ನು ಪ್ರಾರ್ಥಿಸೋಣ.



ಈ ಕ್ಷೇತ್ರಕ್ಕೆ ನಾವು ಮಂಗಳೂರಿನಿಂದ (೩೫ ಕಿಮೀ.) ಬರಬಹುದು ಮತ್ತು ಬೇರೆ ಕ್ಷೇತ್ರಗಳನ್ನು ದರ್ಶಿಸಿ "ಕಟೀಲು ದುರ್ಗಾಪರಮೇಶ್ವರಿ" (೨೫ ಕಿ.ಮೀ.) ಸನ್ನಿಧಿಯಿಂದಲೂ ಬರಬಹುದು. ತಮ್ಮ ಸ್ವಂತ ವಾಹನದಲ್ಲಿ ಬರುವವರಿಗೆ ವಾಹನ ನಿಲುಗಡೆಗೆ ವಿಶಾಲವಾದ ಜಾಗವಿದೆ. ಈ ಕ್ಷೇತ್ರಕ್ಕೆ ಅದು "ಹೊರನಾಡು" ಇದು "ಹೊಸನಾಡು" ಎಂಬುದಾಗಿ ಪೇಜಾವರ ಶ್ರೀಗಳು ಹೆಸರಿಸಿದರು ಎಂಬುದಾಗಿ ತಿಳಿದು ಬರುತ್ತದೆ. ನಾವು ರಸ್ತೆಯಿಂದ ಒಳಗೆ ಬರುವಾಗಲೇ ಎತ್ತರವಾದ ದ್ವಾರ ನಮ್ಮನ್ನು ಸ್ವಾಗತಿಸುತ್ತದೆ. ಒಳಾಂಗಣಕ್ಕೆ ಬಂದರೆ ಬೃಹದಾಕಾರವಾದ ಸಂಜೀವಿನಿ ಪರ್ವತ ಹೊತ್ತ ಶ್ರೀಆಂಜನೇಯನನ್ನು ದರ್ಶಿಸಬಹುದು. ತಂಪಾದ ವಾತಾವರಣದಲ್ಲಿ ಅನೇಕ ಮರ ಗಿಡಗಳ ಮಧ್ಯ ಮುಂದೆ ಸಾಗಿದರೆ, ನಮಗೆ ತಾಯಿಯ ದರ್ಶನ ದೊರೆಯುತ್ತದೆ.

# ಯಾಜ್ಞಸೇನಿ

- ಡಾ|| ವಾಣಿಶ್ರೀ ಬಿ.ಎಮ್
94803 22475

ಋಷಿ ವೇದವ್ಯಾಸರ ಕಥೆಯಲ್ಲಿ ಒಂದು ದರ್ಶನವಿದೆ. ಸಮಗ್ರ ಸುಂದರ ಜೀವನದರ್ಶನ, ನೀತಿಬೋಧೆ, ಉಪದೇಶ, ಕಾವ್ಯ ಸೌಂದರ್ಯ, ಧರ್ಮವಿವರಣೆ, ಪಂಚಮವೇದವೆನಿಸಿದ ಮಹಾಭಾರತದಲ್ಲಿದೆ. ದಾರ್ಶನಿಕರಾದ ವೇದವ್ಯಾಸರು ತಮ್ಮ ಕಣ್ಣೆದುರು ನಡೆದ ಯುಗ ಘಟನೆಯನ್ನು ಕಂಡು ಅದನ್ನು ಮಾನವ ಕೋಟಿಯ ಒಳಿತಿಗಾಗಿ ಕಾವ್ಯರೂಪದಲ್ಲಿ ಹೇಳಿದ್ದಾರೆ. ಅಮರ ಕೃತಿಯಾದ ಮಹಾಭಾರತವು ವಿಶ್ವಕ್ಕೆ ಮಾದರಿಯಾಗಬಲ್ಲ ಮಹತ್ಕೃತಿ. ಇದೊಂದು ಸಾರ್ವಕಾಲಿಕ ಕೃತಿಯಾಗಿದ್ದು ಎಲ್ಲ ಕಾಲಕ್ಕೂ ಸಲ್ಲಬಲ್ಲಂತಹುದ್ದಾಗಿದೆ. ಇಲ್ಲಿ ಬರುವ ಪ್ರತಿಯೊಂದು ಪಾತ್ರಗಳೂ ತಮ್ಮದೇ ಆದ ರೀತಿಯಲ್ಲಿ ವಿಶಿಷ್ಟವಾಗಿದೆ.

ಮಹಾಭಾರತದ ಕೇಂದ್ರ ಪಾತ್ರಗಳು ಕೃಷ್ಣ ಮತ್ತು ಕೃಷ್ಣಾ. ಯಜ್ಞಸೇನನೆಂಬ ದ್ರುಪದ ದೊರೆಯ ದ್ರೋಣ ದ್ವೇಷಾಗ್ನಿಯ ಹಿನ್ನೆಲೆಯಲ್ಲಿ ಜನಿಸಿದವಳು ದ್ರೌಪದಿ. ಅಯೋನಿಜೆಯಾಗಿ ಅಗ್ನಿಕುಂಡದಲ್ಲಿ ಅಣ್ಣ ಧೃಷ್ಟದ್ಯುಮ್ನನೊಡನೆ ಜನಿಸಿ ಧೃಷ್ಟದ್ಯುಮ್ನನ ಮುದ್ದಿನ ಕಣ್ಮಣಿಯಾಗಿ ಅವಳು ಸುಭದ್ರ ರಕ್ಷೆಯಲ್ಲಿ ಬೆಳೆದಳು. ದ್ರುಪದನ ಮಗಳಾದ್ದರಿಂದ ದ್ರೌಪದಿ, ಪಾಂಚಾಲದ ರಾಜಕುಮಾರಿಯಾಗಿದ್ದರಿಂದ ಪಾಂಚಾಲಿ, ಯಜ್ಞಸೇನನ ಮಗಳಾಗಿ ಯಾಜ್ಞಸೇನಿ, ಶ್ಯಾಮಲ ವರ್ಣದವಳಾದ್ದರಿಂದ ಕೃಷ್ಣಾ ಎಂದೆಲ್ಲಾ ಹೆಸರಾದ ದ್ರೌಪದಿ ಜನಿಸಿದ ಕೂಡಲೇ ಅಶರೀರವಾಣಿ "ಕುರುವಂಶಕ್ಕೆ ಇವಳಿಂದಲೇ ಭಯ'' ಎನ್ನುತ್ತದೆ. ದ್ರೌಪದಿ ಮಹಾನ್ ಸುಂದರಿ ಶ್ಯಾಮಲ ವರ್ಣದವಳಾದ ಇವಳಲ್ಲಿ ಪದ್ಮಪುಷ್ಪದ ಸುವಾಸನೆ ಹೊಮ್ಮುತ್ತಿತ್ತು ಎಂದು ಹೇಳಲಾಗುತ್ತದೆ. ನೀಳ ಕೇಶರಾಶಿ, ಉತ್ತಮ ಸ್ತ್ರೀ ಲಕ್ಷಣಗಳು ಅವಳಲ್ಲಿತ್ತು. ಅವಳ ಸೌಂದರ್ಯವೇ ಅವಳಿಗೆ ಶತ್ರುವಾಯಿತು. ಸೈಂಧವ, ಕೀಚಕ, ಮೊದಲಾದವರು ಅವಳ ರೂಪಿಗೆ ಮರುಳಾಗಿ ಅವಳಿಗೆ ಕೋಟಲೆ ನೀಡಿ ಹತರಾದರು.

ಮತ್ಸ್ಯಯಂತ್ರ ಭೇದಿಸಿ ಅರ್ಜುನ ಅವಳನ್ನು ಗೆದ್ದನು. ಹಿಂದಿನ ಜನ್ಮದಲ್ಲಿ ನಳಿನೀ ಎಂಬ ಋಷಿ ಕನ್ಯೆ ಶಿವನಲ್ಲಿ 'ಪತಿಂ ದೇಹಿ' ಎಂದು ಐದು ಬಾರಿ ಬೇಡಿದ್ದರಿಂದ ದ್ರೌಪದಿಯಾಗಿ ಪಂಚ ಪತಿಯರನ್ನು ಪಡೆದಳು. ಶ್ಯಾಮಲಾ, ಭಾರತೀ, ಶಚಿ, ಉಷೆ ಹಾಗೂ ಪಾರ್ವತೀ ದೇವಿಯರ ಸನ್ನಿಧಾನ ಇವಳಲ್ಲಿತ್ತು. ಕ್ರಮವಾಗಿ ಈ ರೂಪಗಳಲ್ಲಿ ತನ್ನ ಪತಿಯರೊಡನೆ ಬದುಕು ನಡೆಸಿದಳು. ಸತ್ಯಭಾಮೆ ಒಮ್ಮೆ ಅವಳನ್ನು ಐವರು ಪತಿಯರು ನಿನ್ನ ವಶವರ್ತಿಗಳಾಗಿರುವುದಕ್ಕೆ ಕಾರಣವೇನು ಎಂದಾಗ ಅವಳು ನೀಡುವ ಉತ್ತರ ಎಲ್ಲ ಸ್ತ್ರೀಯರಿಗೂ ಅನುಕರಣೀಯ. "ಗಂಡನಿಗೆ ಮೀರಿ ನಿದ್ರಿಸುವುದು, ಉಣ್ಣುವುದು, ಅಲಂಕರಿಸುವುದು, ಅತ್ತೆ ಮಾವಂದಿರನ್ನು ದೂಷಿಸುವುದು ಇವೆಲ್ಲ ಗೃಹಿಣಿಗೆ ಸುಖನಾಶಕಗಳು'' ಪತಿ ಎಂತಹ ಸ್ಥಿತಿಯಲ್ಲಿದ್ದರೂ ಅವನನ್ನು ಗೌರವಿಸುತ್ತಾ ಅವನ ಅನುವರ್ತಿನಿಯಾಗಿ ನಡೆಯಬೇಕೆನ್ನುವ ಆದರ್ಶ ಅವಳದ್ದು ದ್ರೌಪದಿ ರಾಜಕಾರ್ಯಗಳನ್ನು ಬಲ್ಲ ಚತುರೆಯೂ ಆಗಿದ್ದಳು.

ಏಕಾಹಂ ವೇದ್ಮಿ ಕಲ್ಯಾಣಿ ಪಾಂಡವಾನಾಂ ಯಶಸ್ವಿನಿ।
ಸರ್ವಂ ರಾಜ್ಞಃ ಸಮುದಯಂ ಆಯಂ ಚ ವ್ಯಯಮೋದ ಚ॥

ಧರ್ಮಜನ ರಾಜ್ಯದ ಸಕಲ ಆಯವ್ಯಯಗಳು ಇವಳಿಗೆ ಮಾತ್ರ ತಿಳಿದಿತ್ತೆಂಬ ಮಾತಿದೆ. ಧರ್ಮರಾಯನಿಗೆ ಆಗಾಗ ಬುದ್ಧಿಹೇಳಿ ತಿದ್ದುತ್ತಾ ಅವನಲ್ಲಿ ತಿರಸ್ಕಾರ ಹೊಂದದೆ ರಾಷ್ಟ್ರದ ಪ್ರಜೆಗಳನ್ನು, ಗೋವುಗಳನ್ನು ಮಕ್ಕಳಂತೆ ಪಾಲಿಸಿದ ಧೀರ ಮಹಿಳೆ. ಕಾಲಕಾಲಕ್ಕೆ ಪಾಂಡವರಿಗೆ ಪ್ರೇರಣೆ ನೀಡಿ ಅವರ ಧರ್ಮದಲ್ಲಿ ಜೊತೆಯಾದವಳು.

ಲೋಕೋತ್ತರ ಪರಾಕ್ರಮಿಗಳೂ, ದೇವಾಂಶ ಸಂಭೂತರೂ, ಧಾರ್ಮಿಕ ಸ್ವಭಾವದವರೂ ಆದ ಪಾಂಡವರ ಪತ್ನಿಯಾಗಿದ್ದೂ ವಸ್ತ್ರಾಪಹರಣದಂತಹ ಪರಿಭವದಿಂದ ತಪಿಸಿ ನೊಂದಳು. ಮಹಾಕಲಿಗಳಾದ ಪಾಂಡವರು ಅಸಹಾಯಕರಾಗಿ ತಲೆ ತಗ್ಗಿಸಿ ಕುಳಿತಿದ್ದರು. ಅಪದ್ಬಾಂಧವನಾಗಿ ಕೃಷ್ಣ ಅವಳ ಮಾನ ಸಂರಕ್ಷಣೆ ಮಾಡಿದ. ವನವಾಸದಲ್ಲಿ ನಾನಾ ರೀತಿಯ ಕಷ್ಟ ಕೋಟಲೆಗಳು ಬಂದರೂ ಸಹನಾಶೀಲೆಯಾಗಿ ಗಂಡಂದಿರನ್ನು ನೆರಳಿನಂತೆ ಹಿಂಬಾಲಿಸಿದಳು. ಪತಿ ಚಿತ್ತಾನುವರ್ತಿಯಾಗಿ ಅವರ ಮನಸ್ಸಿಗೆ ಸಂತಸ ನೆಮ್ಮದಿ ನೀಡಿದಳು.





ರದು. ದೇವತಾಸ್ತ್ರೀಯಾದ ದ್ರೌಪದಿ ಕ್ಷಮಾಶೀಲಳು. ಅವಳನ್ನು 'ರಣಚಂಡಿ' ಎಂಬಂತೆ ಬಿಂಬಿಸಲಾಗಿದೆ. ಆದರೆ ಅವಳ ಕ್ಷಮಾಗುಣ ಅತೀತವಾದದ್ದು ತನ್ನನ್ನು ಜೂಜಿಗಿಡಬಹುದಾದ ವಸ್ತು ಎಂಬಂತೆ ಜೂಜಿಗಿಟ್ಟು ಸೋತ ಧರ್ಮರಾಯನನ್ನು ಕ್ಷಮಿಸಿದಳು. ವನವಾಸ ಕಾಲದಲ್ಲಿ ದುರ್ಯೋಧನನ್ನು ಗಂಧರ್ವರ ಬಂಧನದಿಂದ ಬಿಡಿಸಿದಳು. ತನ್ನ ಐವರು ಮಕ್ಕಳನ್ನು ಕ್ರೂರವಾಗಿ ಕೊಂದ ಅಶ್ವತ್ಥಾಮನ್ನು ಕ್ಷಮಿಸಿದಳು. ಆದರೆ ತನಗಾದ ಪರಿಭವಕ್ಕೆ ಕೌರವರನ್ನು ಕ್ಷಮಿಸಿದ್ದರೆ ಲೋಕ ಮೆಚ್ಚುತ್ತಿರಲಿಲ್ಲ. ತನ್ನವರನ್ನೆಲ್ಲಾ ಕಳೆದುಕೊಂಡ ದ್ರೌಪದಿ ಮತ್ತೆ ಪಟ್ಟಾಭಿಷಿಕ್ತಳಾಗುವಾಗ ಸಂಕಟ,ವೈರಾಗ್ಯಗಳಿಂದ ನೊಂದರೂ ಯಾಂತ್ರಿಕವಾಗಿ ಪಟ್ಟಾಭಿಷೇಕದ ಸಂಭ್ರಮವನ್ನು ಸಹಿಸಿರಬೇಕು.

ದ್ರೌಪದಿ ಮಹಾಭಾರತದ ಕೇಂದ್ರ ಪಾತ್ರ. ತನ್ನೆಲ್ಲಾ ನೋವು ಸಂಕಟಗಳ ಹೊರತಾಗಿಯೂ ರಾಣಿಯಾದ ಅವಳ ಆದರ್ಶ ಅನುಪಮವಾದದ್ದು. ಕಾಲಕಾಲಕ್ಕೆ ಧರ್ಮರಾಯನಿಗೆ ಅವನ ಬಾಧ್ಯತೆಯನ್ನು ನೆನಪಿಸಿ ಕ್ಷಾತ್ರವೃದ್ಧಿ ಮಾಡಿದ ಆಕೆ ಕರ್ತವ್ಯಶೀಲಳೇ ಹೊರತು ರಕ್ತ ಪಿಪಾಸುವಲ್ಲ. ಪತಿಗಳಿಗೆ ಅನುರೂಪಳಾಗಿ ಅತ್ತೆಗೆ ಪ್ರೀತಿಯ ಸೊಸೆಯಾಗಿ, ಸಾಮ್ರಾಜ್ಯಕ್ಕೆ ಸಮರ್ಥ ಮಹಾರಾಣಿಯಾಗಿ ತನ್ನ ಅಪೂರ್ವ ಸಹನಾಶಕ್ತಿಯಿಂದ ಧರ್ಮ ಸಾಮ್ರಾಜ್ಯ ಕಟ್ಟಲು ಕಾರಣಳಾದ ದ್ರೌಪದಿಯಂತಹ ವೀರಮಹಿಳೆ ಇಡೀ ವಿಶ್ವಕ್ಕೇ ಅಗ್ರಮಾನ್ಯಳು.

ಇಡೀ ಪುರಾಣ ಪ್ರಪಂಚದಲ್ಲಿ ದ್ರೌಪದಿಯಷ್ಟು ದುಃಖ ಸಹಿಷ್ಣು ಸ್ತ್ರೀ ಬೇರೋಬ್ಬರಿಲ್ಲವೆಂದರೆ ತಪ್ಪಾಗಲಾ

ಅಪ್ರಾಕೃತ ಜನನ, ಅಪರೂಪದ ಸೌಂದರ್ಯ, ಹೆಣ್ಣಿಗೆ ಸಹಜವಲ್ಲದ ಕ್ಷಾತ್ರ ಪ್ರವೃತ್ತಿ ಮತ್ತು ಬಹುಪತಿತ್ವ ಅವಳನ್ನು ವಿಶಿಷ್ಟವಾಗಿಸಿದೆ.

## ಒಂದು ಕ್ಲಿಕ್ ಮಾಡಿ ಸ್ವಾಮಿ ದರ್ಶನ ಮಾಡಿ

## ತಿ.ತಿ.ದೇವಸ್ಥಾನಗಳು ಮೊಬೈಲ್ ಆ್ಯಪ್




**27.01.2023 ರಂದು ತಿ.ತಿ.ದೇವಸ್ಥಾನಗಳು ಎಂಬ ಹೆಸರಿನಿಂದ ರಚಿಸಲಾದ ಮೊಬೈಲ್ ಆ್ಯಪ್ ಅನ್ನು ತಿ.ತಿ.ದೇ ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ವೈ.ವಿ.ಸುಬ್ಬಾರೆಡ್ಡಿಯವರು ಪ್ರಾರಂಭಿಸಿದರು. ಇದುವರೆಗೆ ಭಕ್ತರಿಗಾಗಿ ಗೋವಿಂದ ಮೊಬೈಲ್ ಆ್ಯಪ್ ಅನ್ನು ಪ್ರಾರಂಭಿಸಿದರು. ಈಗ ಅದನ್ನು ಆಧುನೀಕರಿಸಲಾಗಿದೆ ಮತ್ತು ಹೆಚ್ಚಿನ ಅಪ್ಲಿಕೇಶನ್‌ಗಳನ್ನು ಅಳವಡಿಸಲು ಹೊಸ ಅಪ್ಲಿಕೇಶನ್ ಅನ್ನು ರಚಿಸಲಾಗಿದೆ.ಈ ಮೊಬೈಲ್ ಆ್ಯಪ್ ಮೂಲಕ ಭಕ್ತರು ತಿರುಮಲೆ ಸ್ವಾಮಿಯವರ ದರ್ಶನ, ಸೇವೆಗಳು, ವಸತಿ,ಅಂಗಪ್ರದಕ್ಷಿಣೆ,ಸರ್ವದರ್ಶನವನ್ನು ಈ ಅಪ್ಲಿಕೇಶನ್ ಮುಖಾಂತರ ಬುಕ್ ಮಾಡಿಕೊಳ್ಳಬಹುದು. ಅದೇ ಆ್ಯಪ್ ಮುಖಾಂತರ ದೇಣಿಗೆಯನ್ನು ನೀಡಬಹುದು. ಭಕ್ತರು ಲಾಗಿನ್ ಆಗಲು OTP ಜೊತೆಗೆ ಬಳಕೆದಾರರ ಹೆಸರನ್ನು ನಮೂದಿಸಬೇಕು,ಯಾವುದೇ ಪಾಸ್‌ವರ್ಡ್‌ನ ಅಗತ್ಯವಿಲ್ಲ.**

# ಶ್ರೀ ಗಂಗಾ ಸ್ತೋತ್ರಂ



ದೇವಿ ಸುರೇಶ್ವರಿ ಭಗವತಿ ಗಂಗೇ ತ್ರಿಭುವನತಾರಿಣಿ ತರಳತರಂಗೇ
ಶಂಕರಮೌಳಿವಿಹಾರಿಣಿ ವಿಮಲೇ ಮಮ ಮತಿರಾಸ್ತಾಂ ತವ ಪದಕಮಲೇ ॥ 1 ॥

ಭಾಗೀರಥಿಸುಖದಾಯಿನಿ ಮಾತಸ್ತವ ಜಲಮಹಿಮಾ ನಿಗಮೇ ಖ್ಯಾತಃ
ನಾಹಂ ಜಾನೇ ತವ ಮಹಿಮಾನಂ ಪಾಹಿ ಕೃಪಾಮಯಿ ಮಾಮಜ್ಞಾನಮ್ ॥ 2 ॥

ಹರಿಪದಪಾದ್ಯತರಂಗಿಣಿ ಗಂಗೇ ಹಿಮವಿಧುಮುಕ್ತಾಧವಳತರಂಗೇ
ದೂರೀಕುರು ಮಮ ದುಷ್ಕೃತಿಭಾರಂ ಕುರು ಕೃಪಯಾ ಭವಸಾಗರಪಾರಮ್ ॥ 3 ॥

ತವ ಜಲಮಮಲಂ ಯೇನ ನಿಪೀತಂ ಪರಮಪದಂ ಖಲು ತೇನ ಗೃಹೀತಮ್
ಮಾತರ್ಗಂಗೇ ತ್ವಯಿ ಯೋ ಭಕ್ತಃ ಕಿಲ ತಂ ದ್ರಷ್ಟುಂ ನ ಯಮಃ ಶಕ್ತಃ ॥ 4 ॥

ಪತಿತೋದ್ಧಾರಿಣಿ ಜಾಹ್ನವಿ ಗಂಗೇ ಖಂಡಿತ ಗಿರಿವರಮಂಡಿತ ಭಂಗೇ
ಭೀಷ್ಮಜನನಿ ಹೇ ಮುನಿವರಕನ್ಯೇ ಪತಿತನಿವಾರಿಣಿ ತ್ರಿಭುವನ ಧನ್ಯೇ ॥ 5 ॥

ಕಲ್ಪಲತಾಮಿವ ಫಲದಾಂ ಲೋಕೇ ಪ್ರಣಮತಿ ಯಸ್ತ್ವಾಂ ನ ಪತತಿ ಶೋಕೇ
ಪಾರಾವಾರವಿಹಾರಿಣಿ ಗಂಗೇ ವಿಮುಖಯುವತಿ ಕೃತತರಲಾಪಾಂಗೇ ॥ 6 ॥

ತವ ಚೇನ್ಮಾತಃ ಸ್ರೋತಃ ಸ್ನಾತಃ ಪುನರಪಿ ಜಠರೇ ಸೋಽಪಿ ನ ಜಾತಃ
ಇಂದ್ರಮುಕುಟಮಣಿರಾಜಿತಚರಣೇ ಸುಖದೇ ಶುಭದೇ ಭೃತ್ಯಶರಣ್ಯೇ ॥ 7 ॥

ಪುನರಸದಂಗೇ ಪುಣ್ಯತರಂಗೇ ಜಯ ಜಯ ಜಾಹ್ನವಿ ಕರುಣಾಪಾಂಗೇ
ಇಂದ್ರಮುಕುಟಮಣಿ ರಾಜಿತಚರಣೇ ಸುಖದೇ ಶುಭದೇ ಭೃತ್ಯಶರಣ್ಯೇ ॥ 8 ॥

ರೋಗ ಶೋಕಂ ತಾಪಂ ಪಾಪಂ ಹರಮೇ ಭಗವತಿ ಕುಮತಿಕಲಾರಮ್
ತ್ರಿಭುವನ ಸಾರೇ ವಸುಧಾರೇ ತ್ವಮಸಿ ಗತಿರ್ಮಮ ಖಲು ಸಂಸಾರೇ ॥ 9 ॥

ಅಲಕಾನಂದೇ ಪರಮಾನಂದೇ ಕುರು ಕರುಣಾಮಯಿ ಕಾತರವಂದ್ಯೇ
ತವ ತಟನಿಕಟೇ ಯಸ್ಯ ನಿವಾಸಃ ಖಲು ವೈಕುಂಠೇ ತಸ್ಯ ನಿವಾಸಃ ॥ 10 ॥

ವರಮಿಹ ನೀರೇ ಕಮಠೋ ಮೀನಃ ಕಿಂ ವಾ ತೀರೇ ಶರಟಃ ಕ್ಷೀಣಃ
ಅಥವಾಶ್ವಪಚೋ ಮಲಿನೋ ದೀನಸ್ತವ ನ ಹಿ ದೂರೇ ನೃಪತಿಕುಲೀನ ॥ 11 ॥


ಭೋ ಭುವನೇಶ್ವರಿ ಪುಣ್ಯೇ ಧನ್ಯೇ ದೇವಿ ದ್ರವಮಯಿ ಮುನಿವರಕನ್ಯೇ
ಗಂಗಾಸ್ತವಮಿಮಮಮಲಂ ನಿತ್ಯಂ ಪಠತಿ ನರೋ ಯಃ ಸ ಜಯತಿ ಸತ್ಯಮ್ ॥ 12 ॥

ಯೇಷಾಂ ಹೃದಯೇ ಗಂಗಾ ಭಕ್ತಿಸ್ತೇಷಾಂ ಭವತಿ ಸದಾ ಸುಖಮುಕ್ತಿಃ
ಮಧುರಾಕಂತಾ ಪಂಝ್ಝುಟಿಕಾಭಿಃ ಪರಮಾನಂದಕಲಿತಲಲಿತಾಭಿಃ ॥ 13 ॥

ಗಂಗಾಸ್ತೋತ್ರಮಿದಂ ಭವಸಾರಂ ವಾಂಛಿತಫಲದಂ ವಿಮಲಂ ಸಾರಮ್
ಶಂಕರಸೇವಕ ಶಂಕರ ರಚಿತಂ ಪಠತಿ ಸುಖೀಃ ತವ ಇತಿ ಚ ಸಮಾಪ್ತಃ ॥ 14 ॥

॥ ಇತಿ ಶ್ರೀಮಚ್ಛಂಕರಾಚಾರ್ಯ ವಿರಚಿತ ಗಂಗಾಸ್ತೋತ್ರ ಸಂಪೂರ್ಣಮ್ ॥

# ನಾಮ ರಾಮಾಯಣಂ








## ಬಾಲಕಾಂಡ

01) ಶುದ್ಧಬ್ರಹ್ಮಪರಾತ್ಪರ ರಾಮ।
02) ಕಾಲಾತ್ಮಕ ಪರಮೇಶ್ವರ ರಾಮ।
03) ಶೇಷತಲ್ಪ ಸುಖನಿದ್ರಿತ ರಾಮ।
04) ಬ್ರಹ್ಮಾದ್ಯಮರ ಪ್ರಾರ್ಥಿತ ರಾಮ।
05) ಚಂಡಕಿರಣಕುಲ ಮಂಡನ ರಾಮ್ಯ।
06) ಶ್ರೀಮದ್ದಶರಥ ನಂದನ ರಾಮ।
07) ಕೌಸಲ್ಯಾ ಸುಖವರ್ಧನ ರಾಮ।
08) ವಿಶ್ವಾಮಿತ್ರ ಪ್ರಿಯಧನ ರಾಮ।
09) ಘೋರತಾಟಕಾ ಘಾತಕ ರಾಮ।
10) ಮಾರೀಚಾದಿ ನಿಪಾತಕ ರಾಮ।
11) ಕೌಶಿಕ ಮಖ ಸಂರಕ್ಷಕ ರಾಮ।
12) ಶ್ರೀಮದಹಲ್ಯೋದ್ಧಾರಕ ರಾಮ।
13) ಗೌತಮ ಮುನಿ ಸಂಪೂಜಿತ ರಾಮ।
14) ಸುರ ಮುನಿವರ ಗಣ ಸಂಸ್ತುತ ರಾಮ।
15) ನಾವಿಕ ಧಾವಿತ ಮೃದುಪದ ರಾಮ।
16) ಮಿಥಿಲಾ ಪುರಜನ ಮೋಹಕ ರಾಮ।
17) ವಿದೇಹ ಮಾನಸ ರಂಜಕ ರಾಮ।
18) ತ್ರ್ಯಂಬಕ ಕಾರ್ಮುಕ ಭಂಜಕ ರಾಮ।
19) ಸೀತಾರ್ಪಿತ ವರಮಾಲಿಕ ರಾಮ।
20) ಕೃತ ವೈವಾಹಿಕ ಕೌತುಕ ರಾಮ।
21) ಭಾರ್ಗವದರ್ಪ ವಿನಾಶಕ ರಾಮ।
22) ಶ್ರೀಮದಯೋಧ್ಯಾ ಪಾಲಕ ರಾಮ।

## ಅಯೋಧ್ಯಕಾಂಡ

23) ಅಗಣಿತ ಗುಣಗಣ ಭೂಷಿತ ರಾಮ।
24) ಅವನೀತನಯಾ ಕಾಮಿತ ರಾಮ।
25) ರಾಕಾ ಚಂದ್ರ ಸಮಾನನ ರಾಮ।
26) ಪಿತೃವಾಕ್ಯಾಶ್ರಿತ ಕಾನನ ರಾಮ।
27) ಪ್ರಿಯ ಗುಹ ವಿನಿವೇದಿತ ಪದ ರಾಮ।
28) ತತ್ ಕ್ಷಾಳಿತ ನಿಜ ಮೃದುಪದ ರಾಮ।
29) ಭರದ್ವಾಜ ಮುಖಾನಂದಕ ರಾಮ।
30) ಚಿತ್ರ ಕೂಟಾದ್ರಿ ನಿಕೇತನ ರಾಮ।
31) ದಶರಥ ಸಂತತ ಚಿಂತಿತ ರಾಮ।
32) ಕೈಕೇಯೀ ತನಯಾರ್ಥಿತ ರಾಮ।
33) ವಿರಚಿತ ನಿಜ ಪಿತೃಕರ್ಮಕ ರಾಮ।
34) ಭರತಾರ್ಪಿತ ನಿಜಪಾದುಕ ರಾಮ।




## ಅರಣ್ಯಕಾಂಡ

35) ದಂಡಕಾವನಜನ ಪಾವನ ರಾಮ।
36) ದುಷ್ಟ ವಿರಾಧ ವಿನಾಶನ ರಾಮ।
37) ಶರಭಂಗ ಸುತೀಕ್ಷ್ಣಾರ್ಚಿತ ರಾಮ।
38) ಅಗಸ್ತ್ಯಾನುಗ್ರಹ ವರ್ಧಿತ ರಾಮ।
39) ಗೃಧ್ರಾಧಿಪ ಸಂಸೇವಿತ ರಾಮ।
40) ಪಂಚವಟೀ ತಟ ಸುಸ್ಥಿತ ರಾಮ।
41) ಶೂರ್ಪಣಖಾರ್ತಿ ವಿಧಾಯಕ ರಾಮ।
42) ಖರದೂಷಣ ಮುಖಸೂದಕ ರಾಮ।
43) ಸೀತಾಪ್ರಿಯ ಹರಿಣಾನುಗ ರಾಮ।
44) ಮಾರೀಚಾರ್ತಿ ಕೃದಾಶುಗ ರಾಮ।
45) ವಿನಷ್ಟ ಸೀತಾನ್ವೇಷಕ ರಾಮ।
46) ಗೃಧ್ರಾಧಿಪ ಗತಿದಾಯಕ ರಾಮ।
47) ಶಬರೀದತ್ತ ಫಲಾಶನ ರಾಮ।
48) ಕಬಂಧ ಬಾಹುಚ್ಛೇದನ ರಾಮ।

## ಕಿಷ್ಕಂಧಕಾಂಡ

49) ಹನುಮತ್ಸೇವಿತ ನಿಜಪದ ರಾಮ।
50) ನತ ಸುಗ್ರೀವಾಭೀಷ್ಟದ ರಾಮ।
51) ಗರ್ವಿತ ವಾಲಿ ಸಂಹಾರಕರಾಮ।
52) ವಾನರದೂತ ಪ್ರೇಷಕ ರಾಮ।
53) ಹಿತಕರ ಲಕ್ಷ್ಮಣ ಸಂಯುತ ರಾಮ।

**ರಾಮಾಯಣವನ್ನು ನೂರೆಂಟು ಪದಗಳಲ್ಲಿ ವಿವರಿಸುವ ನಾಮ ರಾಮಾಯಣವು ಸಾಂಪ್ರದಾಯಿಕ ಸ್ತೋತ್ರವಾಗಿದೆ. ಈ ದಿವ್ಯ ಸ್ತೋತ್ರವನ್ನು ಪಠಿಸುವುದರಿಂದ ರಾಮಾಯಣ ಪಠಿಸಿದ ಫಲದೊರೆಯುತ್ತದೆ.**
**ಏಪ್ರಿಲ್ 26 ರಂದು ಶ್ರೀರಾಮಜಯಂತಿ ಸಂದರ್ಭವಾಗಿ 'ಸಪ್ತಗಿರಿ' ಓದುಗರಿಗಾಗಿ**



## ಸುಂದರಕಾಂಡ

54) ಕಪಿವರ ಸಂತತ ಸಂಸ್ಮೃತ ರಾಮ।
55) ತದ್ಗತಿ ವಿಘ್ನಧ್ವಂಸಕ ರಾಮ।
56) ಸೀತಾ ಪ್ರಾಣಾಧಾರಕ ರಾಮ।
57) ದುಷ್ಟ ದಶಾನನ ದೂಷಿತ ರಾಮ।
58) ಶಿಷ್ಟ ಹನೂಮದ್ಭೂಷಿತ ರಾಮ।
59) ಸೀತಾವೇದಿತ ಕಾಕಾವನ ರಾಮ।
60) ಕೃತ ಚೂಡಾಮಣಿ ದರ್ಶನ ರಾಮ।
61) ಕಪಿವರ ವಚನಾಶ್ವಾಸಿತ ರಾಮ।

## ಯುದ್ಧಕಾಂಡ

62) ರಾವಣನಿಧನಪ್ರಸ್ಥಿತ ರಾಮ।
63) ವಾನರಸೈನ್ಯ ಸಮಾವೃತ ರಾಮ।
64) ಶೋಷಿತಸರಿದೀಶಾರ್ಥಿತ ರಾಮ।
65) ವಿಭೀಷಣಾಭಯದಾಯಕ ರಾಮ।
66) ಪರ್ವತಸೇತುನಿಬಂಧಕ ರಾಮ।
67) ಕುಂಭಕರ್ಣಶಿರಶ್ಛೇದಕ ರಾಮ।
68) ರಾಕ್ಷಸ ಸಂಘ ವಿಮರ್ದಕ ರಾಮ।
69) ಅಹಿಮಹಿರಾವಣ ಚಾರಣ ರಾಮ।
70) ಸಂಹೃತ ದಶಮುಖ ರಾವಣ ರಾಮ।
71) ವಿಧಿಭವ ಮುಖಸುರ ಸಂಸ್ತುತ ರಾಮ।
72) ಖಸ್ಥಿತ ದಶರಥ ವೀಕ್ಷಿತ ರಾಮ।
73) ಸೀತಾದರ್ಶನ ಮೋದಿತ ರಾಮ।
74) ಅಭಿಷಿಕ್ತ ವಿಭೀಷಣ ನತ ರಾಮ।
75) ಪುಷ್ಪಕ ಯಾನಾರೋಹಣ ರಾಮ।
76) ಭರದ್ವಾಜಾಭಿ ನಿಷೇವಣ ರಾಮ।
77) ಭರತಪ್ರಾಣ ಪ್ರಿಯಕರ ರಾಮ।
78) ಸಾಕೇತಪುರೀ ಭೂಷಣ ರಾಮ।
79) ಸಕಲ ಸ್ವೀಯ ಸಮಾನತ ರಾಮ।
80) ರತ್ನಲಸತ್ಪೀಠಸ್ಥಿತ ರಾಮ।
81) ಪಟ್ಟಾಭಿಷೇಕಾಲಂಕೃತ ರಾಮ।
82) ಪಾರ್ಥಿವಕುಲ ಸಮ್ಮಾನಿತ ರಾಮ।
83) ವಿಭೀಷಣಾರ್ಪಿತ ರಂಗಕ ರಾಮ।
84) ಕೀಶಕುಲಾನುಗ್ರಹಕರ ರಾಮ।
85) ಸಕಲಜೀವ ಸಂರಕ್ಷಕ ರಾಮ।
86) ಸಮಸ್ತ ಲೋಕಾಧಾರಕ ರಾಮ।



## ಉತ್ತರಕಾಂಡ

87) ಆಗತ ಮುನಿಗಣ ಸಂಸ್ತುತ ರಾಮ।
88) ವಿಶ್ರುತ ದಶಕಂಠೋದ್ಭವ ರಾಮ।
89) ಸೀತಾಲಿಂಗನ ನಿರ್ವೃತ ರಾಮ।
90) ನೀತಿ ಸುರಕ್ಷಿತ ಜನಪದ ರಾಮ।
91) ವಿಪಿನ ತ್ಯಾಜಿತ ಜನಕಜ ರಾಮ।
92) ಕಾರಿತ ಲವಣಾಸುರವಧ ರಾಮ।
93) ಸ್ವರ್ಗತ ಶಂಬುಕ ಸಂಸ್ತುತ ರಾಮ।
94) ಸ್ವತನಯ ಕುಶಲವ ನಂದಿತ ರಾಮ।
95) ಅಶ್ವಮೇಧ ಕ್ರತುದೀಕ್ಷಿತ ರಾಮ।
96) ಕಾಲಾವೇದಿತ ಸುರಪದ ರಾಮ।



97) ಆಯೋಧ್ಯಕಜನ ಮುಕ್ತಿದ ರಾಮ।
98) ವಿಧಿಮುಖ ವಿಬುಧಾನಂದಕ ರಾಮ।
99) ತೇಜೋಮಯ ನಿಜರೂಪಕ ರಾಮ।
100) ಸಂಸ್ಕೃತಿ ಬಂಧ ವಿಮೋಚಕ ರಾಮ।
101) ಧರ್ಮಸ್ಥಾಪನ ತತ್ಪರ ರಾಮ।
102) ಭಕ್ತಿಪರಾಯಣ ಮುಕ್ತಿದ ರಾಮ।
103) ಸರ್ವಚರಾಚರಪಾಲಕ ರಾಮ।
104) ಸರ್ವಭವಾಮಯ ವಾರಕ ರಾಮ।
105) ವೈಕುಂಠಾಲಯ ಸಂಸ್ಥಿತ ರಾಮ।
106) ನಿತ್ಯಾನಂದ ಪದಸ್ಥಿತ ರಾಮ।
107) ರಾಮರಾಮ ಜಯರಾಜಾ ರಾಮ।
108) ರಾಮರಾಮ ಜಯಸೀತಾ ರಾಮ।






19-02-2023 ರಪದು ತಿರುಮಲೆಯಲ್ಲಿ ನಡೆದ ಶ್ರೀ ಅನಂತಾಳ್ವಾರ್ ಅವತಾರೋತ್ಸವ ದೃಶ್ಯಗಳು
ಈ ಉತ್ಸವದಲ್ಲಿ ತಿರುಮಲೆ ಶ್ರೀ ಶ್ರೀ ಶ್ರೀ ದೊಡ್ಡ ಜೀಯರ್ ಸ್ವಾಮಿ, ಶ್ರೀ ಶ್ರೀಶ್ರೀ ಚಿಕ್ಕ ಜೀಯರ್ ಸ್ವಾಮಿಯವರು
ಅನುಗ್ರಹ ಭಾಷಣ ಮಾಡಿದರು




20-02-2023 ರಂದು ಶ್ರೀ ಜ್ಞಾನಪ್ರಸೂನಾಂಬ, ಶ್ರೀ ಕಾಳಹಸ್ತೀಶ್ವರ ಸ್ವಾಮಿಯವರಿಗೆ ತಿ.ತಿ.ದೇ. ವತಿಯಿಂದ ತಿ.ತಿ.ದೇ,ಕಾರ್ಯನಿರ್ವಹಣಾಧಿಕಾರಿ
ಶ್ರೀ ಎ.ವಿ. ಧರ್ಮಾರೆಡ್ಡಿ ಐ.ಡಿ.ಈ.ಎಸ್ . ದಂಪತಿಗಳು ರೇಷ್ಮೆವಸ್ತ್ರಗಳನ್ನು ಸಮರ್ಪಿಸಿದರು. ಇವರೊಂದಿಗೆ ತಿ.ತಿ.ದೇ, ವತಿಯಿಂದ ತಿ.ತಿ.ದೇ, ಕಾರ್ಯನಿರ್ವಹಣಾಧಿಕಾರಿ
ಇವರೊಂದಿಗೆ ತಿ.ತಿ.ದೇ, ಆಡಳಿತಮಂಡಳಿ ಅಧ್ಯಕ್ಷರು ಶ್ರೀ ವೈ.ವಿ. ಸುಬ್ಬಾರೆಡ್ಡಿ ಯವರ ಪತ್ನಿ ಶ್ರೀಮತಿ ಸ್ವರ್ಣಲತ,
ತಿ.ತಿ.ದೇ ಆಡಳಿತಮಂಡಳಿ ಸದಸ್ಯರು ಶ್ರೀ ಪಿ. ಅಶೋಕ್ ಕುಮಾರ್ ಸಹ ರೇಷ್ಮೆ ವಸ್ತ್ರಗಳನ್ನು ಸಮರ್ಪಿಸಿದರು.





ಶ್ರೀ ಭ್ರಮರಾಂಬ, ಶ್ರೀಮಲ್ಲಿಕಾರ್ಜುನ ಸ್ವಾಮಿಯವರ (ಶ್ರೀಶೈಲಂ) ಬ್ರಹ್ಮೋತ್ಸವಗಳು, (14-02-2023) ರಂದು ತಿ.ತಿ.ದೇ, ವತಿಯಿಂದ
ತಿ.ತಿ.ದೇ, ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀ ವಿ. ವೀರಬ್ರಹ್ಮ, ಐ.ಎ.ಎಸ್., ದಂಪತಿಗಳು ರೇಷ್ಮೆವಸ್ತ್ರಗಳನ್ನು ಸಮರ್ಪಿಸುತ್ತಿರುವ ದೃಶ್ಯ




27-02-2023 ರಂದು ಶ್ರೀ ಪದ್ಮಾವತಿ ಚಿಕ್ಕ ಮಕ್ಕಳ ಹೃದಯಾಲಯ ಆಸ್ಪತ್ರೆಯಲ್ಲಿ ಎರಡನೆ ಹೃದಯ ಶಸ್ತ್ರ ಚಿಕಿತ್ಸೆಯ ಸಂದರ್ಭದಲ್ಲಿ ಅಪರೂಪದ ದಾಖಲೆಯನ್ನು ರಚಿಸಲಾಗಿದೆ.
ಈ ಸಂದರ್ಭದಲ್ಲಿ ತಿ.ತಿ.ದೇ, ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ. ಧರ್ಮಾರೆಡ್ಡಿ ಐ.ಡಿ.ಈ.ಎಸ್.ಯವರು ಅಲ್ಲಿರುವ ವೈದ್ಯರಿಗೆ ಕೃತಜ್ಞತೆಯನ್ನು ತಿಳಿಸುತ್ತಿರುವ ದೃಶ್ಯ.
ಈ ಕಾರ್ಯಕ್ರಮದಲ್ಲಿ ತಿ.ತಿ.ದೇ, ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಎಸ್. ಭಾರ್ಗವಿ, ಐ.ಎ.ಎಸ್, ಆಸ್ಪತ್ರೆಯ ನಿರ್ದೇಶಕರು ಡಾ॥ ಶ್ರೀನಾಥ್‌ರೆಡ್ಡಿ ಇತರರು ಪಾಲ್ಗೊಂಡರು

# ಹರಿದಾಸ ಶಿರೋಮಣಿ
# ಶ್ರೀಮೊದಲಕಲ್ಲು ಶೇಷದಾಸರು

-ಶ್ರೀಧರ ರಾಯಸಂ

ಸ್ವಪ್ನಸೂಚಿತ ಅಂಕಿತ ಶ್ರೀವಿಜಯದಾಸರು ನೀಡಿದಂತೆ ಮೊದಲಕಲ್ಲು ಶೇಷದಾಸರು"ಗುರುವಿಜಯವಿಠಲ'' ಅಂಕಿತನಾಮ ದಿಂದ ಅನೇಕ ಕೀರ್ತನೆಗಳನ್ನು, ದೇವರನಾಮಗಳನ್ನು, ಸುಳಾದಿಗಳನ್ನು ಉಗಾಭೋಗಗಳನ್ನು, ರಚಿಸಿದ ಮಹನೀಯರು. ತೆಲಂಗಾಣ ರಾಜ್ಯದ, ಗದ್ವಾಲ್ ಸಂಸ್ಥಾನದ ದರೂರು ಹಳ್ಳಿಯಲ್ಲಿ, ಕ್ರಿ.ಶ.1800 ರಂದು ಜನಿಸಿದರು. 40 ವರ್ಷ ಲೌಕಿಕ ಜೀವನದಲ್ಲಿದ್ದು ಐದು ಹಳ್ಳಿಗಳ ಶಾನು ಭೋಗ ವೃತ್ತಿ ಮಾಡುತ್ತಿದ್ದರು. ಚಿಪ್ಪಗಿರಿಯಲ್ಲಿ ಶ್ರೀವಿಜಯದಾಸರ ಸೇವೆ ಮಾಡಿದ ಕಾರಣ, ಶೇಷದಾಸರಿಗೆ ಸ್ವಪ್ನದಲ್ಲಿ, ವಿಜಯದಾಸರು."ಗುರು ವಿಜಯ ವಿಠಲ'' ಅಂಕಿತ ನೀಡಿ, ಆಶೀರ್ವದಿಸಿದರು ಇವರು ರಚಿಸಿದ. ಭಗವದ್ಗೀತಾ ಸುಳಾದಿ ಅತ್ಯಂತ ಭಕ್ತಿಯಿಂದ ಕೂಡಿದ ಸುಳಾದಿ ಪ್ರಸಿದ್ಧಿಯಾಗಿದೆ.

ಎನ್ನಿಂದ ಆದ ಕೃತ್ಯ ಅವಜ್ಞ ಮಾಡದಲೆ
ಉತ್ತರವ ಪೇಳುವದುಭಾವಭಿಜನ್ಯವಾದ ಅಹಂಕಾರವಾದರೂ
ಶ್ರೀವರ ನಿನ್ನಿಂದೇ ಪುಟ್ಟಿತೆನಗೆ ಪಾವನ ಮಹಿಮೆಗುರುವಿಜಯ
ವಿಠ್ಠಲರೇಯಾಆವಪರಾಧ ಉಂಟು ತಿಳಿಸಿ ಪೇಳೊ ॥

ಮೊದಲಕಲ್ಲು ಶೇಷದಾಸರು 40 ಕ್ಕಿಂತ ಹೆಚ್ಚು ಸುಳಾದಿಗಳು, ಉಗಾಭೋಗಗಳು, ಅಹ್ನಿಕ ಪದ್ಧತಿ ರಚಿಸಿ ಭಕ್ತರಿಗೆ ನೀಡಿದ ಮಹಾನುಭಾವರು. ದರೂರು ಹಳ್ಳಿ ಸುತ್ತಮುತ್ತ ಶಾನುಭೋಗ ವೃತ್ತಿ ಮಾಡುತ್ತಾ, ಕುಲಕರ್ಣಿ ಶೇಷಪ್ಪ ಎಂದು ಪ್ರಸಿದ್ಧಿಯಾಗಿದ್ದರು. ಆ ಪ್ರಾಂತ್ಯವನ್ನು ಗದ್ವಾಲ್ ಸೋಮ ಭೂಪಾಲ ರಾಜನು ಆಳುತ್ತಿದ್ದನು. ಶೇಷಪ್ಪ ಪ್ರಾಮಾಣಿಕವಾಗಿ, ತೆರಿಗೆ ವಸೂಲು ಮಾಡಿ, ರಾಜನಿಗೆ ಒಪ್ಪಿಸುತ್ತಿದ್ದರು. ಪ್ರತಿನಿತ್ಯ ಬೆಲೆ ಬಾಳುವ ಉಡುಪು ಧರಿಸಿ ಕಪ್ಪು ಕೂದಲಿನ ವ್ಯಕ್ತಿಯಾಗಿ ಜರೀ ಪೇಟ, ದುಬಾರಿಯ ನೆಕ್‌ಲೇಸ್, ಚಿನ್ನದ ಸರ ಧರಿಸಿ ತುಳಸೀಮಣಿ ಹಾಕಿಕೊಂಡು, ಶುಭ್ರ ಶ್ವೇತ ಪಂಚೆ, ಶಾಲು ಹೊದ್ದುಕೊಂಡು, ರಾಜನ ಹತ್ತಿರ ಹೋಗುತ್ತಿದ್ದರು. ಒಂದು ದಿನ ರಾಜ ಶೇಷಪ್ಪ ಬೆಲೆ ಬಾಳುವ ಉಡುಪು ಧರಿಸಿಕೊಂಡು ಬಂದಿರುವುದು ಕಂಡು, ಕೋಪಿಷ್ಠನಾಗಿ, ಸಣ್ಣ ವಿಷಯಕ್ಕೆ ಶೇಷಪ್ಪನನ್ನು ಕೆಲಸದಿಂದ ತೆಗೆದು ಹಾಕಿದನು. ಇದು ದೇವರು ನೀಡಿದ ಎಚ್ಚರಿಕೆ ಎಂದು ಶೇಷಪ್ಪ ಮನಗೊಂಡು ರಾಜನ ಹತ್ತಿರ ಸೇವೆ ಮಾಡದೆ ತನ್ನ ಹಳ್ಳಿಗೆ ಹಿಂತಿರುಗದೆ, ಚಿಂತಾಲರೇವುನಲ್ಲಿ ಕಾಲ ಕಳೆದರು. ಪ್ರಾಯಶ್ಚಿತ್ತಕ್ಕೋಸ್ಕರ, ಶೇಷಪ್ಪ ಶ್ರೀವ್ಯಾಸರಾಜರು ಪ್ರತಿಷ್ಠಾಪಿಸಿದ್ದ ಮುಖ್ಯಪ್ರಾಣ ದೇವರ ಆಜ್ಞೆಯಂತೆ, ಪುನಃ ಮೊದಲಕಲ್ಲಿಗೆ ಬಂದು, ಪ್ರಾಯಶ್ಚಿತ್ತ ಮಾಡಿ ಕೊಂಡರು. ಕೇವಲ ತುಳಸೀದಳ ಸೇವಿಸಿ, ಉಪವಾಸದಿಂದ ಮುಖ್ಯ ಪ್ರಾಣನನ್ನು ಪ್ರಾರ್ಥಿಸಿದರು. ಯಾವ ಐಹಿಕ ಸುಖ ಬೇಡದೆ, ದೀರ್ಘ ತಪಸ್ಸಿನಿಂದ, ಕೃಶವಾಗಿದ್ದರೂ ಮುಖದ ಕಾಂತಿ ಚಿನ್ನದಂತೆ ಮಿಂಚಿರುತ್ತಿತ್ತು !! ಇದು ದೇವರು ತನಗೆ ನೀಡಿದ ತಕ್ಕ ಪಾಠವೆಂದು, ಆನಂದಿಸಿದರು. ಆಗಾಗ್ಗೆ ಸ್ವಪ್ನದಲ್ಲಿ, ಶೇಷದಾಸರ ಕುಲದೈವ ಶ್ರೀವೆಂಕಟರಮಣನ ದರ್ಶನ ಸ್ವಪ್ನದಲ್ಲಿ ಆಗುವ ಭಾಗ್ಯ ಕಂಡಿದ್ದರು. ಬಹುಕಾಲ ಉಗ್ರ ಪ್ರಾಯಶ್ಚಿತ್ತವನ್ನು ಗ್ರಾಮದಲ್ಲಿ ಮಾಡಲು, ಮೊದಲಕಲ್ಲಿನ ಶ್ರೀನಿವಾಸ ದೇವರು (ಮೆಹಬೂಬ್‌ನಗರ, ಆಂಧ್ರಪ್ರದೇಶ) ಆಶೀರ್ವದಿಸಿ 'ಅಪರೋಕ್ಷಾನುಭೂತಿ' ನೀಡಿ ಅನುಗ್ರಹಿಸಿದರು. ಶ್ರೀ ವಿಜಯದಾಸರ ಸ್ವಪ್ನಾನುದೇಶದಂತೆ ಗುರು ವಿಜಯವಿಠಲ ಅಂಕಿತ ನಾಮದಿಂದ ಮೊಟ್ಟ ಮೊದಲ ಕೀರ್ತನೆ, ರಚಿಸಿದರು.




ನಂಬಿದೆ ನಿನ್ನ ಪಾದ, ಮುಖ್ಯ ಪ್ರಾಣ ಡಿಂಭದೊಳಗೆ
ಹರಿಯ ಬಿಂಬ ಪೊಳ್ಳುವಂತೆ ಮಾಡು ಶ್ರೀ ಗುರು ವಿಜಯವಿಠಲನ
ಪಾದಕೆಬಾಗಿದ ಭವದೂರ ಜಾಗರ ಮೂರುತಿ ॥ (ತೋಡಿ-ರಾಗ)

ಬಹುಕಾಲ ತಮ್ಮ ಉಳಿದ ಜೀವಿತಾವಧಿಯಲ್ಲಿ, ದೇವತಾರ್ಚನೆ, ಸುಳಾದಿಗಳ, ಕೀರ್ತನೆಗಳ ರಚನೆ ಮತ್ತು ದೇವರ ಸೇವೆ ಮಾಡುತ್ತಾ, ಶಿಷ್ಯರನ್ನು ಅನುಗ್ರಹಿಸಿದರು. ಶೇಷದಾಸರು ಅನೇಕ ಕೀರ್ತನೆಗಳನ್ನು ರಚಿಸುವುದಲ್ಲದೇ, ಶ್ರೀಜಗನ್ನಾಥದಾಸರು ರಚಿಸಿದ ಅದ್ಭುತ ಗ್ರಂಥ - ಹರಿಕಥಾಮೃತ ಸಾರಕ್ಕೆ ವ್ಯಾಖ್ಯಾನ ಮಾಡಿ, ಭಕ್ತರಿಗೆ ನೀಡಿದರು. ಶೇಷದಾಸರ ಪ್ರಖ್ಯಾತಿ ಸುತ್ತಮುತ್ತ ಪ್ರದೇಶದಲ್ಲಿ ವ್ಯಾಪಿಸಲು, ಅನೇಕ ಜನರು ಆಗಮಿಸಿ. ಶ್ರೀ ವೆಂಕಟೇಶ್ವರನ ದರ್ಶನ ಮತ್ತು, ದಾಸರ ಆಶೀರ್ವಾದ ಪಡೆಯಲು ಆರಂಭಿಸಿದರು. ದೇವರ ಅನುಗ್ರಹದಿಂದ ಶೇಷದಾಸರು ಅನೇಕ ಪವಾಡಗಳನ್ನು ಪ್ರದರ್ಶಿಸಿದರು. ಶೇಷದಾಸರ ಪ್ರಾರ್ಥನೆಯಂತೆ ಆ ಊರಿನ ಶ್ರೀನಿವಾಸ ದೇವರ ಪಾದದ ಉಂಗುಷ್ಠದಿಂದ ಪವಿತ್ರ ಗಂಗಾ ಪೂರ್ಣ ದಿವಸ ಹರಿದು ಬಂದಳು ಎಂದೂ ಒಣಗದೆ, ಈ ನೀರಿನ ಜಲ ಸಮೃದ್ಧಿ ಹರಿದಾಡುತ್ತಿದೆ. ತಿರುಪತಿಯ ಶ್ರೀನಿವಾಸನೇ ನೆಲಸಿರುವನೆಂದು ಗ್ರಾಮದ ಜನರು, ನಂಬಿ ಪೂಜಿಸುವುದು ಈಗಲೂ ಕಾಣಬಹುದು. ತಂತ್ರಸಾರ ಸಂಗ್ರಹದಲ್ಲಿ ಪ್ರತಿಮಯಂ ತು ಸನ್ನಿಧ್ಯಾಂ, ಅರ್ಚಕಸ್ಯ ತಪೋಬಲತ್ ಶ್ರೀ ಮೊದಲಕಲ್ಲು ಶೇಷದಾಸರ ಮತ್ತು ಶ್ರೀ ವಿಜಯದಾಸರ ಭಕ್ತಿ ಪೂರ್ವಕ ಶ್ರೀನಿವಾಸ ದೇವರ ಆರಾಧನೆಗೊಂಡು ಮೊದಲಕಲ್ಲು ವಿಶೇಷ ಜಾಗೃತ ಸ್ಥಳವಾಗಿದೆ. ಪ್ರಾಣದೇವರನ್ನು ಪ್ರಾರ್ಥಿಸಿ ಶೇಷದಾಸರ ಬೆಳ್ಳಂಪುರಿ ಹನುಮಂತರಾಯರ ಪತ್ನಿಯ ಮಾನಸಿಕ ವ್ಯಥೆಯನ್ನು ಪರಿಹರಿಸಿದರು. ದಾಸರು ಅನೇಕ ಭಕ್ತರ ರೋಗ ಭೀತಿ, ಭೂತಬಾಧೆ, ಸಂತಾನಹೀನತೆಗಳನ್ನು ವಾಯುದೇವರ ಅನುಗ್ರಹ ಮತ್ತು ಭಗವತ್ಕೃಪೆಯಿಂದ ಪವಾಡ ಸದೃಶ ಘಟನೆಗಳನ್ನು ತೋರಿಸಿ ಅನುಗ್ರಹಿಸಿದರು. ಇಂದಿಗೂ ಅನೇಕ ಜನರು ಮೊದಲಕಲ್ಲು ಗ್ರಾಮಕ್ಕೆ ಹೋಗಿ, ದೇವರ ಅನುಗ್ರಹ ಪಡೆಯುತ್ತಾರೆ. ಅನೇಕ ಜನರಿಗೆ ಅನುಗ್ರಹ ಮಾಡಿ,ಕೀರ್ತನೆಗಳನ್ನು, ಸುಳಾದಿಗಳನ್ನು, ಉಗಾಭೋಗಗಳನ್ನು, ರಚಿಸಿ, ಶ್ರೀಮೊದಲಕಲ್ಲು ಶೇಷದಾಸರು, ವೈಶಾಖ ಶುದ್ಧ ಅಷ್ಟಮಿ (1869) ದೇಹ ತ್ಯಾಗ ಮಾಡಿದರು. ಪ್ರತಿ ವರ್ಷ ಇವರ ಆರಾಧನೆ, ವೈಶಾಖಶುದ್ಧ ಅಷ್ಟಮಿಯಂದು ಭಕ್ತರು ಆಚರಿಸುವರು.

ದಾಸರಾಯ ಪೋಷಿಸೆನ್ನನ್ನು ಪ್ರಾರ್ಥಿಸುವೆ ಶೇಷದಾಸ
ವರ್ಯ ಪೋಷಿಸೆನ್ನನು ಪೋಷಿಸೆನ್ನ ಮನದಿ ಬಹ
ದೋಷಗಳನು
ತರಿದು ಇಂದಿರೇಶನಂಘ್ರಿ ಧ್ಯಾನವ ಪ್ರತಿವಾಸರದಲಿ
ಒದಗುವಂತೆ!

# ಶ್ರೀವೆಂಕಟಾಚಲ ಮಹಾತ್ಯೆ



ಪುಣ್ಯಭೂಮಿ, ಕರ್ಮಭೂಮಿ ಆದ ಭಾರತ ದೇಶದಲ್ಲಿ ವಿವಿಧ ಅರಣ್ಯ ನಾಮಗಳನ್ನು ಹೊಂದಿರುವ ಭೂಪ್ರದೇಶಗಳು ಇವೆ. ಅದರಲ್ಲಿ ನೈಮಿಷಾರಣ್ಯ ದಂಡಕಾರಣ್ಯಗಳಂತಹ ಪ್ರದೇಶಗಳು, ಪುರಾಣಗಳಲ್ಲಿ ಪ್ರಸಿದ್ಧವಾಗಿ ಅಷ್ಟೇ ಅಲ್ಲದೇ ತಮಿಳುನಾಡಿನಲ್ಲಿ ವೇದಾರಣ್ಯ ಎಂಬ ಹೆಸರಿನ ಊರು ಕೂಡಾ ಇದೆ. ಈ ಮೂರರಲ್ಲಿ ನೈಮಿಷಾರಣ್ಯವು ಋಷಿಗಳ,ಮುನಿಗಳ,ಯೋಗಿಗಳ ವಾಸ ಸ್ಥಾನವಾಗಿದೆ. ಅಲ್ಲಿನ ಮುನಿಗಳೆಲ್ಲರೂ ಜ್ಞಾನವಂತರು, ವಿವೇಕಯುತರು, ಧರ್ಮವಂತರು ಆಗಿದ್ದು, ಸದಾ ಸಮಸ್ತ ಲೋಕದ ಯೋಗಕ್ಷೇಮವನ್ನು ಕೋರುವವರು. ಆದರೂ ಶೌನಕಾದಿಮುನಿಗಳು ಸೂತ ಮಹರ್ಷಿಗಳನ್ನು ಗೌರವಿಸುತ್ತಾ ತಮಗೆ ಬರುವ ಸಂದೇಹಗಳನ್ನು ಪರಿಹರಿಸಿಕೊಳ್ಳುತ್ತಿದ್ದರು. ಸೂತಮಹರ್ಷಿಗಳೂ ಕೂಡ ಕೇಳುವವರ ಆಸಕ್ತಿಗೆ ಅನುಗುಣವಾಗಿ ಸಂಶಯಗಳನ್ನು ಕಥೆಗಳ ಮೂಲಕ, ವೇದ ಪುರಾಣಗಳಲ್ಲಿನ ದೃಷ್ಟಾಂತಗಳ ಗೂಡಾರ್ಥಗಳನ್ನು ವಿಶದವಾಗಿ, ಸುಂದರವಾಗಿ ತಿಳಿಸುತ್ತಿದ್ದರು. ಹೀಗೆ ನೈಮಿಷದಲ್ಲಿ ನಿತ್ಯವೂ ಜ್ಞಾನಯಜ್ಞವು ನಡೆಯುತ್ತಿತ್ತು.

ಒಂದು ಶುಭದಿನದಂದು ಶೌನಕಾದಿ ಮುನಿಗಳು ಸೂತಮಹರ್ಷಿಗಳಿಗೆ ಕೇಳಿದರು "ವಿದ್ವಾಂಸರೇ, ನಿಮ್ಮ ಪ್ರವಚನಗಳಿಂದ ಸನಾತನ ಧರ್ಮಕ್ಕೆ ಸಂಬಂಧಿಸಿದ ಅನೇಕ ಅಂಶಗಳನ್ನು ತಿಳಿದುಕೊಂಡಿದ್ದೇವೆ. ಆದರೂ ನಮಗೆ ಒಂದು ಚಿಕ್ಕ ಸಂದೇಹವಿದೆ. ಭೂಲೋಕದಲ್ಲಿ ಮಹಾವಿಷ್ಣುವು ಜನಸಾಮಾನ್ಯರ ಸೇವೆಗಾಗಿ 108 ದಿವ್ಯ ಕ್ಷೇತ್ರಗಳಲ್ಲಿ ಸ್ವಯಂಭೂ ಆಗಿ ಅವತರಿಸಿ ನೆಲಸಿದ್ದಾನೆ ಅಲ್ಲವೇ? ಅವುಗಳಲ್ಲಿ ಶ್ರೀರಂಗಂ, ಶ್ರೀಮುಷ್ಣಂ, ತೋತಾದ್ರಿ, ಸಾಲಗ್ರಾಮ, ನೈಮಿಷ, ಬದರಿಕಾಶ್ರಮ, ಕಾಂಚೀಪುರ, ವೇಂಕಟಾಚಲ ಮುಂತಾದ 8 ಕ್ಷೇತ್ರಗಳಲ್ಲಿ ಸ್ವಯಂಭೂ ಕ್ಷೇತ್ರಗಳೆಂದು ಹಿರಿಯರು ಹೇಳಿದ್ದಾರೆ. ಈ 8 ಕ್ಷೇತ್ರಗಳಲ್ಲಿ ಸರ್ವಶ್ರೇಷ್ಠವಾದುದು ಯಾವುದೆಂದು ತಿಳಿಯುವ ಜಿಜ್ಞಾಸೆಯಾಗಿದೆ. ಈ ಅಷ್ಟಕ್ಷೇತ್ರಗಳಲ್ಲಿ ಆ ಬಾಲಗೋಪಾಲನಾಗಿ, ಜನಸಾಮಾನ್ಯರ ವಿವಿಧ ಕೋರಿಕೆಗಳನ್ನು ಈಡೇರಿಸುವ ಕ್ಷೇತ್ರ ಯಾವುದೆಂದು ತಿಳಿಯುವ ಕುತೂಹಲ ಉಂಟಾಗಿದೆ. ದಯಮಾಡಿ ತಾವು ಅಂತಹ ದಿವ್ಯ ಕ್ಷೇತ್ರದ ಕುರಿತು ತಿಳಿಸಿ ಕೊಡಬೇಕೆಂದು ಕೋರುತ್ತೇವೆ. ನಮ್ಮ ಕೋರಿಕೆಯನ್ನು ಮನ್ನಿಸಬೇಕು ಎಂದರು.

"ಅಷ್ಟೇ ಅಲ್ಲದೇ ಅವತರಿಸಿದ ಮೂರ್ತಿಗಳಿಗೆ ಸಂಬಂಧಿಸಿದ ವೃತ್ತಾಂತವನ್ನು ಕೂಡಾ ನಿಮ್ಮಿಂದ ತಿಳಿಯಬೇಕೆಂದಿದ್ದೇವೆ". ಎಂದರು.

ಸೂತರು ಶೌನಕಾದಿ ಮಹಾಮುನಿಗಳನ್ನು ದೃಷ್ಟಿಸಿದರು. ಅವರ ಕಣ್ಣುಗಳಲ್ಲಿನ ಜಿಜ್ಞಾಸೆಯನ್ನು ಗುರುತಿಸಿದರು.

ಆ ನಂತರ "ತಪಸ್ವಿಗಳೇ ! ಅನಂತವಾದ ದೇವಾಧಿದೇವರ ಚರಿತ್ರೆಗಳನ್ನು ನಾನೊಬ್ಬನೇ ಹೇಳಲಾಗುವುದೇ? ನಾನ್ಯಾರು? ನನ್ನ ಶಕ್ತಿ ಎಷ್ಟು? ಆದರೂ ಶ್ರೀವೇದವ್ಯಾಸರ ಅವ್ಯಾಜಮಯವಾದ ಕರುಣೆಯಿಂದ ನನಗೆ ತೋಚಿದ ರೀತಿ



ಯಲ್ಲಿ ನಿಮಗೆ ಖಂಡಿತವಾಗಿ ಹೇಳುತ್ತೇನೆ. ನೀವು ಹೇಳಿದ ಸ್ವಯಂ ಭೂ ಕ್ಷೇತ್ರಗಳಲ್ಲಿ ವೇಂಕಟಾಚಲವೇ ಸರ್ವಶ್ರೇಷ್ಠವಾಗಿದೆ. ಆ ಕ್ಷೇತ್ರ ಒಂದೇ ಲೌಕಿಕ-ಅಲೌಕಿಕ ಫಲಗಳನ್ನು ಪ್ರಸಾದಿಸುತ್ತದೆ. ಇದರಲ್ಲಿ ಯಾವ ಸಂದೇಹವೂ ಇಲ್ಲ.

ಒಮ್ಮೆ ಶ್ವೇತವರಾಹ ಕಲ್ಪದಲ್ಲಿ ಮಹಾವಿಷ್ಣುವು ವೈಕುಂಠವನ್ನು ತ್ಯಜಿಸಿ, ಶೇಷಾದ್ರಿಯಲ್ಲಿ ನೆಲೆಸಿದ ಆ ವೃತ್ತಾಂತವನ್ನು ಹೇಳುತ್ತೇನೆ. ಕೇಳಿ.

ಶ್ರೀಮನ್ನಾರಾಯಣ ನಾಭಿ ಕಮಲದಿಂದ ನಾಲ್ಕು ಮುಖದ ಬ್ರಹ್ಮನು ಅವತರಿಸಿದನು. ಸರ್ವಲೋಕಪಾಲಕನಾದ, ಸ್ಥಿತಿಕರ್ತನಾದ ಸ್ವಾಮಿ ಸೃಷ್ಟಿಯನ್ನು ಪ್ರಾರಂಭಿಸಿದನು. ಅದಲ್ಲದೇ ಒಂದು ಕ್ಷಣವೂ ಬಿಡುವಿಲ್ಲದೇ ಸ್ಥಾವರ ಜಂಗಮ ರೀತಿಯಲ್ಲಿ ಸೃಷ್ಟಿಯನ್ನೇ ಧ್ಯೇಯ ವಾಗಿಟ್ಟುಕೊಂಡು ಕಾರ್ಯಮಗ್ನನಾದನು. ಈ ಸೃಷ್ಟಿ ನಡೆಯುವಷ್ಟು ಕಾಲವೂ ಸೂರ್ಯನಾಗಲೀ, ವಾಯುವಾಗಲೀ, ಅಗ್ನಿಯಾಗಲೀ, ವರುಣನಾಗಲೀ ಅವರವರ ಕ್ಷೇತ್ರಗಳಲ್ಲಿ ನೆಲೆಸುವಂತೆ ಕಟ್ಟೆ ಹಾಕುದುದಲ್ಲದೇ, ಅವರನ್ನು ರಕ್ಷೆಯಾಗಿರುವಂತೆ ನೋಡಿಕೊಂಡನು. ಹೀಗೆ ಸೃಷ್ಟಿ ಕಾರ್ಯವು ಅವಿಚ್ಛಿನ್ನವಾಗಿ ಹದಿನಾಲ್ಕು ಮನ್ವಂತರಗಳು ನಡೆದವು. ಇಷ್ಟು ವರ್ಷಗಳಲ್ಲಿ ಒಂದು ಹಗಲು ಕಳೆದ ನಂತರ ರಾತ್ರಿಯಾಗುತ್ತಿದ್ದರಿಂದ ಬ್ರಹ್ಮನಿಗೆ ವಿಶ್ರಮಿಸಬೇಕೆಂದು ಎನಿಸಿತು. ಆ ದೇವಾದಿ ದೇವನನ್ನು ನಿದ್ರಾ ದೇವತೆಯು ಆವರಿಸಿದಳು. ಬ್ರಹ್ಮನು ನಿದ್ರೆಯಲ್ಲಿ ಜಾರಿದನು.

(ಮುಂದುವರೆಯುತ್ತದೆ)

**ತೆಲುಗು ಮೂಲ – ಆಚಾರ್ಯ ಕೆ. ಸರ್ವೋತ್ತಮ ರಾವ್,**
**ಅನುವಾದ – ಶ್ರೀಮತಿ. ಎನ್. ಪಾರ್ವತಿ**






## ವಸಂತೋತ್ಸವ

ಚಿತ್ತರೈ ನಕ್ಷತ್ರದಿನದಲ್ಲಿ ಪೌರ್ಣಮಿಯ ಜೊತೆಗೆ ಬರುವಂತೆ ಚಿತ್ರಾಮಾಸದಲ್ಲಿ ಮೂರು ದಿನಗಳ ಕಾಲ ವಸಂತೋತ್ಸವವನ್ನೇ ಪ್ರತ್ಯೇಕ ಉತ್ಸವವಾಗಿ ಆಚರಿಸಿದ ಘಟನೆಯು ಉಂಟು.(105 ತಿ.ತಿ.) ಅಚ್ಯುತರಾಯನ ಕಾಲದಲ್ಲಿ ಶಕ 1460, ವಿಳಂಬಿ ಸಂವತ್ಸರದಲ್ಲಿ ಮೂರು ಸಾವಿರ ನರ್ಪಣಗಳು ಠೇವಣಿಯಾಗಿಟ್ಟು ತಿರುಮಲೆಯಲ್ಲಿ ಆಲಯದ ಲೆಕ್ಕಿಗರೊಬ್ಬರ ಮಗನಾದ ಪೆರಿಯ ಶೋಲೈ ಎನ್ನುವಾತ ಒಂದು ಹೊಸ ವಸಂತೋತ್ಸವವನ್ನು ಆರಂಭಿಸಿದನು.ಇಲ್ಲಿ ಪಂಗುಣಿ ಮಾಸದ ಉತ್ತರಾಭಾದ್ರ ನಕ್ಷತ್ರದಲ್ಲಿ ಅಂಕುರಾರ್ಪಣೆ ಆಗಬೇಕಾಗಿತ್ತು. ಹಾಗೂ ನಾಲ್ಕು ದಿನಗಳ ಉತ್ಸವಾಚರಣೆಯ ನಂತರ ಕೃತ್ತಿಕಾ ನಕ್ಷತ್ರದ ದಿನ ಶಾತ್ತುಮೊರೈ ಆಗಬೇಕಾಗಿದ್ದಿತು. ವಸಂತೋತ್ಸವವು ಬ್ರಹ್ಮೋತ್ಸವದಲ್ಲಿ ಒಂದು ಅಂಗವಾಗಿ ರುವುದಿಂದಲೂ ಬ್ರಹ್ಮೋತ್ಸವದ ಆರನೆಯ ದಿನದಂದು ನಡೆಯುವುದರಿಂದಲೂ ಹದಿಮೂರನೆಯ ಶತಮಾನದಿಂದ ಹದಿನಾರನೆಯ ಶತಮಾನದವರೆಗೆ ಬ್ರಹ್ಮೋತ್ಸವಗಳು ಎರಡು ಹೆಚ್ಚಾಗಿ ಸೇರಿದ್ದರಿಂದ ಇದನ್ನೂ ಬ್ರಹ್ಮೋತ್ಸದ ಅಂಗವೆಂದೇ ಹೇಳಿ ಹೆಚ್ಚಿಸಿದ್ದನ್ನು ಕಾಣಬಹುದು.

# ಉಪನಿಷದ್ ಸಂದೇಶ

ಪ್ರೊ॥ ಪದ್ಮನಾಭರಾವ್
9916173302

## ರೈಕ್ವ ಮುನಿಯ ಕತೆ



ನಮ್ಮ ವೈದಿಕ ಋಷಿಗಳು ತೀರಾ ಸಾಮಾನ್ಯರಂತೆ ಬದುಕಿದವರು, ಅವರಲ್ಲಿ ಅನೇಕರು ಕೃಷಿಕ, ರಥಕಾರ, ಬಡಗಿ, ನೇಯ್ಗೆ ವೃತ್ತಿಗಳಲ್ಲಿ ತೊಡಗಿದ್ದವರು. ಅವರಲ್ಲಿ ಹಲವಾರು ಬ್ರಾಹ್ಮಣ ವರ್ಣದವರೂ ಇದ್ದರು. ಉಪನಿಷತ್ತುಗಳಲ್ಲಿ ಕಾಣಬರುವ ಋಷಿಗಳಲ್ಲಿ ರೈಕ್ವ ಎಂಬ ಹೆಸರಿನ ಋಷಿಯ ಹೆಸರು ಛಾಂದೋಗ್ಯ ಉಪನಿಷತ್ತಿನಲ್ಲಿ ಬರುತ್ತದೆ. ಅವರು ಒಬ್ಬ ರಥಕಾರ, ಎಂದರೆ ಗಾಡಿಕಾರರು, ರಥಗಳನ್ನು ತಾವೇ ತಯಾರಿಸಿ ಯಾರಿಗೆ ಪ್ರಯಾಣದ ಅಗತ್ಯವಿದೆಯೋ ಅವರನ್ನು ಅವರ ಊರಿಗೆ ತಲಪಿಸುತ್ತಿದ್ದವರು.

ರೈಕ್ವರ ತಪಸ್ಸು, ವೃತ್ತಿಪರತೆ ಆಗಿನ ಎಲ್ಲರಿಗೂ ತಿಳಿದಿತ್ತು. ಆ ಕಾಲ ದಲ್ಲಿ ಮೃಗ ಪಕ್ಷಿಗಳೂ ಮಾನವ ಭಾಷೆಯನ್ನು ಅರ್ಥಮಾಡಿಕೊಳ್ಳುತ್ತಿದ್ದವು. ಅದೇ ರೀತಿ ಮಾನವರಿಗೂ ಆ ಪ್ರಾಣಿ-ಪಕ್ಷಿಗಳ ಮಾತು ಅರ್ಥವಾಗುತ್ತಿತ್ತು. ಆ ಪ್ರಾಂತವನ್ನು ಜಾನಶ್ರುತಿ ಎಂಬ ಬುದ್ದಿವಂತ ದೊರೆ ಆಳುತ್ತಿದ್ದ. ಅವನು ಜ್ಞಾನಿ ಉದಾರಿ,ದಯಾಪರ ಮತ್ತು ಜನಾನುರಾಗಿಯಾಗಿದ್ದವನು. ಆತನಿಗೆ ತನ್ನ ಉದಾರಿ, ಜ್ಞಾನಿ, ಕರುಣಾಳು ಆ ಸುತ್ತಲಿನಲ್ಲೇ ಯಾರು ಇಲ್ಲ ಎನ್ನುವ ಹಮ್ಮು ಆಗಾಗ ತಲೆ ಹಾಕುತ್ತಿತ್ತು. ಅದನ್ನು ತನ್ನ ಮಂತ್ರಿಗಳಿಗೆ, ವಿದ್ವಾಂಸರಿಗೆ ಮತ್ತು ಅರಮನೆಯ ಸಿಬ್ಬಂದಿಗೆ ಹೇಳಿಕೊಳ್ಳುತ್ತಿದ್ದ. ಅವರು ಹೌದು ಹೌದು ರಾಜನ್ ಎಂದು ತಲೆಯಾಡಿಸಿ ಆತನನ್ನು ಮತ್ತಷ್ಟು ಹೊಗಳುತ್ತಿದ್ದರು.

ಆ ದೊರೆಯು ತಾನು ತನ್ನ ರಾಜ್ಯದ ಪ್ರಜೆಗಳಿಗೆ ಎಷ್ಟು ಸಹಾಯ ಮಾಡಿದೆ ಎಂದು ಲೆಕ್ಕವನ್ನೂ ಇಡುತ್ತಿದ್ದವನು ಮತ್ತೊಂದು ಸಂಗತಿ ಎಂದರೆ ಆತನಿಗೆ ಪಶು-ಪಕ್ಷಿಗಳ ಭಾಷೆಯೂ ಅರ್ಥವಾಗುತ್ತಿತ್ತು. ಒಂದು ದಿನ ರಾತ್ರಿ ಆ ದೊರೆ ತನ್ನ ಉಪ್ಪರಿಗೆಯ ಮೇಲಿನ ಮಲಗುವ ಕೋಣೆಯಲ್ಲಿ ನಿದ್ರೆ ಮಾಡುತ್ತಿದ್ದ. ಆಹಾ! ಎಂತಹ ಬೆಳುದಿಂಗಳು,ತಂಪು ಗಾಳಿ, ಎಲ್ಲಿಯೋ ಪಕ್ಷಿಗಳ ಕಲರವ ಎಂದು ರಾತ್ರಿಯ ಸೊಬಗನ್ನು ಸವಿಯುತ್ತಿದ್ದ. ಆಗ ಆತನ ಕೋಣೆಯ ಪಕ್ಕದಲ್ಲಿ ಎರಡು ಪಕ್ಷಿಗಳು ಪುರ್ರನೆ ಹಾರುವ ಮೊದಲು, ಒಂದು ಪಕ್ಷಿ ತನ್ನ ಸಂಗಾತಿಯನ್ನು ಕೇಳಿತು. ಪ್ರಿಯೇ! ಕೋಣೆಯಲ್ಲಿ ಆ ರಾಜನ ಪ್ರಕಾಶ ಎಷ್ಟು ಚೆನ್ನಾಗಿ ಹೊಮ್ಮುತ್ತಿದೆಯಲ್ಲವೇ? ಅದರ ಹತ್ತಿರ ಸುಳಿಯಬೇಡ, ಸುಟ್ಟು ಬೂದಿಯಾಗುವೆ, ಆತನಷ್ಟು ಧರ್ಮಾತ್ಮ ಉದಾರಿ ಯಾರೂ ಇಲ್ಲ, ನೆನಪಿರಲಿ , ಆಗ ಮತ್ತೊಂದು ಪಕ್ಷಿ ಉತ್ತರಿಸಿತು. ಅಯ್ಯೋ ಪುಣ್ಯಾತ್ಮ! ಅವನೇನು ನಮ್ಮ ಗಾಡಿಕಾರ ರೈಕ್ವರಿಗಿಂತ ದೊಡ್ಡವನೇ? ಈ ರಾಜನೊಬ್ಬ ಹುಚ್ಚ, ಸದಾ ಆತ್ಮ ಪ್ರಶಂಸೆಯಲ್ಲಿ ತೇಲಿ ಮುಳುಗುವವನು. ಅವನು ದಾನಿಯಾಗಿರಬಹುದು. ಆದರೆ ತಾನು ಅದು ಕೊಟ್ಟೆ ಇದು ಕೊಟ್ಟೆ ಎನ್ನುವ ಜಂಬ ಅವನಿಗೆ ಸದಾ ಇದೆಯಲ್ಲ ಸದಾ ಯಾರಾದರೂ ಹೊಗಳಿಯಾರು ಎಂದು ಹಾತೊರೆಯುತ್ತಿರುತ್ತಾನೆ. ಏನು ಪುಣ್ಯ ಬಂತು ಇದರಿಂದ? ಆಗ ಮೊದಲ ಪಕ್ಷಿಗೆ ಆಶ್ಚರ್ಯವಾಯಿತು. ಯಾರೀ ರೈಕ್ವರು? ಅವರು ಗಾಡಿಕಾರರು ಎನ್ನುತ್ತೀಯ ರಾಜನಿಗಿಂತ ಉತ್ತಮರೇ ಆತ? ಎಂದು ಕೇಳಿತು.

ಪಕ್ಷಿಗಳ ಭಾಷೆ ಅರ್ಥವಾದ ರಾಜನು ನಿದ್ರೆಯಿಂದ ಎದ್ದು ಕುಳಿತ. ಅಷ್ಟರಲ್ಲಿ ಆ ಪಕ್ಷಿಗಳ ಜೋಡಿ ಹಾರಿ ಮರೆಯಾಗಿದ್ದವು. ರಾಜನಿಗೆ ನಿದ್ದೆ ಹಾರಿ ಹೋಯಿತು. ಯಾರೀ ರೈಕ್ವ? ನನಗಿಂತ ದಾನಿಯೇ? ಉದಾರಿಯೇ? ಆತ ಎಲ್ಲಿದ್ದಾನೋ? ಹೀಗೆಲ್ಲಾ ಯೋಚಿಸತೊಡಗಿದ. ಈ ರೈಕ್ವ ಯಾರು? ಯಾವ ಪ್ರಸಿದ್ಧಿ. ಹೆಸರಿಗೂ ಸಿಲುಕದೆ ಇರುವ ಈತ ಯಾರು? ಆತನನ್ನು ತಾನು ಕಾಣಲೇಬೇಕು ಎಂದು ನಿರ್ಧರಿಸಿದ.ಅದೇ ಅವನಿಗೆ ಸದಾ ಯೋಚನೆಯ ವಿಷಯವಾಯಿತು.

ಆಗ ಮಹಾರಾಜ ಜಾನಶ್ರುತಿಯು ಈ ವ್ಯಕ್ತಿಯನ್ನು ಹುಡುಕಿತರಲು ತನ್ನ ಬುದ್ಧಿವಂತ ಮಂತ್ರಿಯನ್ನು ಇದೇ ಕೆಲಸಕ್ಕಾಗಿ ಕಳುಹಿಸಿದ. ಎಲ್ಲಿದ್ದರೂ ಸರಿ, ಆ ರೈಕ್ವರನ್ನು ನೀನು ಹುಡುಕಿ ತರಲೇಬೇಕು ಎಂದು ಆಜ್ಞೆ ಮಾಡಿ ಕಳುಹಿಸಿದನು. ಆ ಮಂತ್ರಿ ಎಲ್ಲಿ ಸಾಧ್ಯವೋ, ಜನವಸತಿ ಇದೆಯೋ, ಋಷಿಗಳ ಆಶ್ರಮ ಇದೆಯೋ ಎಲ್ಲ ಕಡೆ ರೈಕ್ವರಿಗಾಗಿ ಹುಡುಕಿದ ಹೀಗೆಯೇ ದಿನಗಳು ಕಳೆದವು. ಈ ಕೆಲಸ ಅಷ್ಟು ಸುಲಭ ಸಾಧ್ಯವಾಗಿರಲಿಲ್ಲ. ರೈಕ್ವ ಯಾವ ದೊಡ್ಡ ಮನುಷ್ಯನೂ ಅಲ್ಲವಷ್ಟೆ? ಆತನೊಬ್ಬ ಗಾಡಿಕಾರ ಯಾರು ಎಂದು ಗುರುತಿಸಿ ಹುಡುಕುವುದು? ಎಂದು ಚಿಂತೆಗೀಡಾದ. ಆ ದಾರಿಯಲ್ಲಿ ಒಬ್ಬ ದಾರಿಹೋಕ ಸಿಕ್ಕವನು.


ಅದೋ ನೋಡಿ. ಆ ಗಾಡಿಯ ಕೆಳಗೆ ನುಸುಳಿ ಮೈ ಕೆರೆದುಕೊಳ್ಳುತ್ತಿದ್ದಾನಲ್ಲ, ಅವನೇ ರೈಕ್ವ ಇರಬಹುದು. ಅವನ ಹೆಸರೂ ಅದೇ ಎಂದು ಸೂಚಿಸಿದ. ಮಂತ್ರಿಯು ಅಳುಕಿನಿಂದಲೇ ಅಯ್ಯ! ನಿನ್ನ ಹೆಸರು ರೈಕ್ವನೇ? ಎಂದಾಗ ಹೌದು ಸ್ವಾಮಿ ನನ್ನನ್ನು ರೈಕ್ವ ಎಂದು ಜನರು ಕರೆಯುತ್ತಾರೆ ಎಂದು ನುಡಿದ. ಆ ಮಂತ್ರಿಯು ಕೂಡಲೇ ಅರಮನೆ ತಲುಪಿ. ರಾಜನ್! ನೀವು ಹೇಳಿದ ರೈಕ್ವ ಎಂಬಾತನನ್ನು ಗುರುತಿಸಿದ್ದೇನೆ ಎಂದು ಸುದ್ದಿ ತಲಪಿಸಿದ ರಾಜಾ ಜಾನಶೃತಿಗೆ ಸಂತೋಷವಾಯಿತು.

ಆಗ ರಾಜನು ತನ್ನ ಅತಿಥಿಯಾಗಿ ಆಗಮಿಸಲಿರುವ ರೈಕ್ವ ಮುನಿಗೆ ಅದ್ದೂರಿಯ ಅತಿಥ್ಯವನ್ನೇ ಏರ್ಪಾಡಿಸಿದ. ಆತನನ್ನು ಎದಿರುಗೊಳ್ಳಲು 600 ಹಸುಗಳು, ಅದನ್ನು ಕಟ್ಟಲು ಚಿನ್ನದ ಸರಪಳಿ, ಮತ್ತು ಕುದುರೆಯ ರಥವನ್ನು ತೆಗೆದುಕೊಂಡು ತನ್ನ ಅರಮನೆಯ ಮಹಾ ದ್ವಾರದಲ್ಲಿ ಕಾದು ನಿಂತ. ರೈಕ್ವ ಮುನಿಯು ಅಲ್ಲಿಗೆ ಬಂದೊಡನೆ ಅವನ್ನೆಲ್ಲಾ ಆತನಿಗೆ ಭಕ್ತಿಯಿಂದ ಅರ್ಪಿಸಿ. ಸ್ವಾಮಿ! ತಾವು ಇದನ್ನು ಕೃಪೆಯಿಟ್ಟು ಸ್ವೀಕರಿಸಿ ನನಗೆ ಬ್ರಹ್ಮಜ್ಞಾನವನ್ನು ಉಪದೇಶಿಸಿ ಎಂದು ವಿನಯದಿಂದ ಪ್ರಾರ್ಥಿಸಿದ.

ಆಗ ರೈಕ್ವನು ರಾಜನ್! ಮೊದಲು ಈ ಹಸುಗಳು, ಚಿನ್ನದ ಸರಪಳಿ, ರಥ ಎಲ್ಲವನ್ನೂ ವಾಪಸು ತೆಗೆದುಕೋ ನನ್ನ ಬ್ರಹ್ಮ ವಿದ್ಯೆಯು ಮಾರಾಟಕ್ಕಲ್ಲ ಎಂದು ನೇರವಾಗಿ ತಿಳಿಸಿದನು. ಆಗ ರಾಜನು ಹಿಂತಿರುಗಿ ಬಂದು ತನ್ನ ಜೊತೆಯಲ್ಲಿ 1000 ಹಸುಗಳು, ಗಟ್ಟಿ ಚಿನ್ನದ ಹಗ್ಗ, ಮತ್ತು ತನ್ನ ಮಗಳನ್ನು ಪತ್ನಿಯಾಗಿ ಸ್ವೀಕರಿಸಿ ಎಂದು ಬಳುವಳಿಯಾಗಿ ರೈಕ್ವರಿಗೆ ತಂದು ಒಪ್ಪಿಸಿದ ಮತ್ತೆ ರಾಜನು. ಆರ್ಯ, ನನಗೆ ಆತ್ಮವಿದ್ಯೆ ಕಲಿಯಲು ಆಸೆಯಾಗಿದೆ ದಯಮಾಡಿ ಅದನ್ನು ಉಪದೇಶಿಸಿ ಎಂದು ಮತ್ತೆ ಮತ್ತೆ ಪ್ರಾರ್ಥಿಸಿದ. ರೈಕ್ವರಿಗೆ ರಾಜನ ಯಾವ ಉಡುಗೊರೆಯಿಂದಲೂ ಆಸೆ ಹುಟ್ಟುಲಿಲ್ಲ. ಆದರೆ ಜಾನಶೃತಿ ರಾಜನ ಜ್ಞಾನದಾಹ ಮತ್ತು ಸಹನೆಯಿಂದ ಆತನಿಗೆ ಸಂತೋಷವಾಗಿತ್ತು ಈ ಎರಡು ಗುಣಗಳು ಒಬ್ಬ ಸಾಧಕನಿಗೆ ಅತ್ಯವಶ್ಯ ಎಂದು ಮನಗಂಡ ರೈಕ್ವರು ರಾಜನನ್ನು ತಮ ಶಿಷ್ಯರಾಗಿ ಸ್ವೀಕರಿಸಿದರು.

ಆಗ ರೈಕ್ವರು ನುಡಿದರು, ಅಯ್ಯಾ ರಾಜ! ಈ ಜಗತ್ತಿನಲ್ಲಿ ನಾವು ಅನೇಕ ಶಕ್ತಿಗಳನ್ನು ದೈವ ಶಕ್ತಿ ಎಂದು ಪೂಜೆ ಆರಾಧನೆಗಳನ್ನು ನಡೆಸುತ್ತೇವೆ. ಈ ಗಾಳಿ ನೋಡು, ಎಲ್ಲವನ್ನೂ ಹಾರಿಸಿಕೊಂಡು ಒಯ್ಯುತ್ತದೆ. ಬೆಂಕಿ ತನ್ನ ಹತ್ತಿರ ಬರುವ ವಸ್ತುಗಳನ್ನು ಸುಡುತ್ತದೆ. ನಾವು ಉಸಿರಾಟ ನಡೆಸುವುದರಿಂದ ಬದುಕಿದ್ದೇವೆ ಎಂದು ತಿಳಿಯುತ್ತೇವೆ. ಆದರೆ, ಇವೆಲ್ಲವನ್ನೂ ಒಳಗೆ ನಿಯಂತ್ರಿಸುವ ಒಂದು ಮಹಾನ್ ಶಕ್ತಿ ಇದೆ. ಈ ಮಹಾ ಶಕ್ತಿಯನ್ನು ಯಾರೂ ನಿರ್ಮಿಸಲು ಸಾಧ್ಯವಿಲ್ಲ. ಅದು ತನಗೆ ತಾನೇ ಜನಿಸುತ್ತದೆ. ಅದು ಉಳಿದೆಲ್ಲವನ್ನೂ ಸೃಜಿಸಿ ನಿಯಂತ್ರಿಸುತ್ತದೆ. ಹೀಗಾಗಿ ನಮ್ಮ ಇಡೀ ಸೃಷ್ಟಿಯೇ ಈ ದಿವ್ಯ ಶಕ್ತಿಯಿಂದ ಹೊರಟದ್ದು. ಆದರೆ ಅದು ತುಂಬಾ ಜಟಿಲವಾದದ್ದು ಯಾರಿಗೂ ಅರ್ಥವಾಗದ್ದು. ಎಲ್ಲವೂ ಈ ಮೂಲ ಶಕ್ತಿಯ ಸೃಷ್ಟಿಯಾಗಿ ಅದರ ನಿರ್ದೇಶ ದಿಂದಲೇ ತನ್ನ ಕಾರ್ಯವನ್ನು ಮಾಡುತ್ತದೆ. ಜಗತ್ತಿನ ಎಲ್ಲಾ ಆಗುಹೋಗುಗಳೂ ಇದರ ಆದೇಶದಿಂದಲೇ ನಡೆಯುತ್ತವೆ ಎಂದು ರೈಕ್ವರು ತಿಳಿಸಿದರು. ರಾಜನ್ ನೀನು ದಾನ ಮಾಡಿದ ವಸ್ತುಗಳನ್ನು ನೀನು ನಿರ್ಮಿಸಿದೆಯಾ, ನೋಡು. ಯಾವುದೂ ನಿನ್ನದಾಗಿ ಇರಲ್ಲಿಲ್ಲ. ಮುಂದೆಯೂ ಇಲ್ಲದಿರಬಹುದು.

ನೀನು ಈಗ ನಿನ್ನ ಅರಮನೆಗೆ ತೆರಳು ದಾನ ಮಾಡು, ಪರೋಪಕಾರ ಮಾಡು , ಆದರೆ ನಾನು ಕೊಟ್ಟೆ ಎನ್ನುವ ಅಹಂಕಾರ ನಿನಗೆ ಬಾರದಿರಲಿ ಕೀರ್ತಿಗಾಗಿ ದಾನ ಮಾಡಬೇಡ. ಆ ವಸ್ತು ನಿನ್ನದು, ಅದನ್ನು ಮತ್ತೊಬ್ಬರಿಗೆ ನಾನು ಕೊಡುತ್ತಿದ್ದೇನೆ ಎನ್ನುವ ಅಹಂಕಾರ, ನನ್ನದೆನ್ನುವ ಹಮ್ಮು ನಿನಗೆ ಬರಬಾರದು. ಅದು ಆ ಪರಮಾತ್ಮ ನಿನಗೆ ಕೊಟ್ಟದ್ದು ಅದನ್ನು ಮತ್ತೊಬ್ಬರ ಕೈಗೆ ನಿನ್ನಿಂದ ಕೊಡ ಮಾಡಿಸುವುದು ಅಷ್ಟೇ. ಇದರಲ್ಲಿ



ನಿನ್ನದೆನ್ನುವುದು ಯಾವುದೂ ಇಲ್ಲ. ಇದು ನಿಜ ವಾದ ಜೀವನ ಸತ್ಯ ಯಾರು ಈ ಸತ್ಯವನ್ನು ಅರಿತಿದ್ದಾ ನೆಯೋ ಅವನು ಜ್ಞಾನಿ ಉಳಿದವರು ಹಾಗೆ ಭಾವಿಸುವವರು ಅಷ್ಟೇ. ಈ ರೀತಿ ವಸ್ತುಗಳ ಮೇಲೆ ನಿರ್ಭಾವುಕತೆಯಿಂದ ನೋಡುವವನು ನಿತ್ಯ ಸುಖಿ, ಸಂತೋಷ ಚಿತ್ತನು ಆತನೇ ಋಷಿ ಎನಿಸುತ್ತಾನೆ. ಉಳಿದವರು ಈ ಸುಖವನ್ನು ಅನುಭವಿಸಲಾರರು. ಅವರಿಗೆ ಶಾಶ್ವತ ಸುಖವೆಂದರೇನು ಎಂದು ತಿಳಿಯುವುದೇ ಇಲ್ಲ.

ರಾಜನಿಗೆ ರೈಕ್ವರ ಉಪದೇಶದಿಂದ ಒಳಗಣ್ಣು ತೆರೆಯಿತು. ಆತನು ಇನ್ನೂ ಹೆಚ್ಚು ಪ್ರಜಾ ವಾತ್ಸಲ್ಯದಿಂದ ಉದಾತ್ತ ರಾಜನಾಗಿ ಯಶಸ್ಸು, ಕೀರ್ತಿ ಮತ್ತು ಬ್ರಹ್ಮಜ್ಞಾನಿಗಳನ್ನು ಗಳಿಸಿ ಧನ್ಯನಾದ ಈ ಬಾರಿ ರೈಕ್ವರು ರಾಜನು ಕೊಟ್ಟ ಉಡುಗೊರೆಗಳನ್ನು ಸ್ವೀಕರಿಸಿ, ಆಶೀರ್ವದಿಸಿದರು. ಆಗ ಜಾನಶೃತಿಯು ರಾಜರ್ಷಿ ಎನಿಸಿ, ಪ್ರಜಾವತ್ಸಲನಾದ.

ಛಾಂದೋಗ್ಯ ಉಪನಿಷತ್ತಿನ ಈ ಪ್ರಸಂಗದಿಂದ ನಮಗೆ ತಿಳಿದು ಬರುವ ಸತ್ಯವೆಂದರೆ, ನಮಗೆ ಬರುವ, ಬಂದಿರುವ ಸಂಪತ್ತು, ಐಶ್ವರ್ಯಗಳು ದೈವ ದತ್ತವಾದವು ಇದರ ಮೇಲಿನ ಪೂರ್ಣ ಸ್ವಾಮ್ಯ ನಮ್ಮದಲ್ಲ ನಮ್ಮ ಸ್ವತ್ತಿನ ಸ್ವಲ್ಪ ಭಾಗವನ್ನಾದರೂ ಅರ್ಹರಿಗೆ, ಯೋಗ್ಯರಿಗೆ, ಅಗತ್ಯ ವಿರುವವರಿಗೆ ಕೊಡಬೇಕು. ಆಗ ಮಾತ್ರನಾವು ನಮಗೆ ಇದನ್ನು ಕೊಡ ಮಾಡಿದ ಆ ಪರಮಾತ್ಮನಿಗೆ ಕೃತಜ್ಞತೆ ಅರ್ಪಿಸಿದಂತಾಗುತ್ತದೆ.





# ಸೂರ್ಯಘಾತ ಸನಾತನ ವೈದ್ಯ

ತೆಲುಗು ಮೂಲ -ಡಾ.ಸಿ.ಮಧುಸೂದನ್ ಶರ್ಮ
90007 61390
ಅನುವಾದ- ಶ್ರೀಮತಿ

**ಬೇ**ಸಿಗೆಯಲ್ಲಿ ಬೆವರು ಸಾಲೆ, ಉಷ್ಣ ತಾಪ, ಮೈಯುರಿ ಧಗೆಗಳನ್ನು ತಾಳಲಾಗದೇ ಉಷ್ಣವನ್ನು ಭರಿಸಲಾಗದೇ ಆರೋಗ್ಯವು ತೊಂದರೆಗೊಳಗಾಗುವ ಅವಕಾಶವಿರುತ್ತದೆ. ಈ ಸಮಸ್ಯೆಯನ್ನು ಅತಿ ಕ್ರಮಿಸಲು ಆರೋಗ್ಯ ರಕ್ಷಣೆಯನ್ನು ಗಮನದಲ್ಲಿಟ್ಟುಕೊಂಡು ಆವಿರ್ಭವಿಸಿರುವ ಆಯುರ್ವೇದ ಶಾಸ್ತ್ರವು ಉತ್ತಮವಾದ ಪರಿಷ್ಕಾರವನ್ನು ಸೂಚಿಸುತ್ತದೆ.

ಬೇಸಿಗೆಯಲ್ಲಿ ಕಾಣಿಸಿಕೊಳ್ಳುವ ಸರ್ವೇಸಾಮಾನ್ಯ ಆಡಚಣೆ ಸೂರ್ಯಾಘಾತ ಅಂದರೆ ಸನ್‌ಸ್ಟ್ರೋಕ್, ಹೊರಗೆ ಬಿಸಿಲಲ್ಲಿ ತಿರುಗುವುದರಿಂದ ಈ ಸೂರ್ಯಾಘಾತ ಉಂಟಾಗುವುದೆಂದು ಬಹಳ ಜನ ಭಾವಿಸುತ್ತಾರೆ. ಆದರೆ ಸೂರ್ಯನ ತೀಕ್ಷ್ಣ ಕಿರಣಗಳ ಪ್ರಭಾವದಿಂದ ಬಿಸಿಲು ಧಗೆಯ ಕಾರಣದಿಂದಾಗಿ ಮನೆಯಲ್ಲಿ ಮಹಡಿ,ಮಾಳಿಗಿ,ಗೋಡೆಗಳು, ಮನೆಯ ಕಟ್ಟಡಗಳು ಇತ್ಯಾದಿ ತಾಪವೇರುವುದರಿಂದ ಕೂಡಾ ಸೂರ್ಯಾಘಾತ ಉಂಟಾಗಬಹುದೆಂಬುದು ವಿಸ್ಮಯವನ್ನುಂಟು ಮಾಡುವ ವಾಸ್ತವಿಕ ಸತ್ಯ.

ಸೂರ್ಯಾಘಾತವಾದಾಗ ಶರೀರವು ತಾಪದಿಂದ ಉರಿಯೇರಿರುತ್ತದೆ. ಜ್ವರ ತೀವ್ರಗತಿಯಲ್ಲಿರುತ್ತದೆ. ಮೆದುಳಿನಲ್ಲಿ ಶರೀರದ ಉಷ್ಣವನ್ನು ನಿಯಂತ್ರಿಸುವ ವ್ಯವಸ್ಥೆ ಘಾಸಿಗೊಳ್ಳುವುದರಿಂದ ಹೀಗಾಗುತ್ತದೆ. ಬಿಸಿಲ ಧಗೆಯನ್ನು ನಿಭಾಯಿಸಲು ದೇಹವು ಬೆವರನ್ನು ಹೊರಹಾಕುವ ಪ್ರಯತ್ನದಲ್ಲಿರುವುದರಿಂದ ರಕ್ತ ಪ್ರವಾಹ ತೀವ್ರವಾಗಿದ್ದು ಚರ್ಮವು ಕೆಂಪಾಗುತ್ತದೆ.ಮುಖ,ಕಣ್ಣುಗಳು ಕೆಂಪಾಗಿರುತ್ತವೆ. ಅಧಿಕದಾಹ, ಅತಿಯಾದ ತಲೆನೋವು, ಮೈಕೈ ನೋವು, ಮಾಂಸಖಂಡಗಳ ಸೆಳೆತ, ಕೀಲುನೋವು ಇರುತ್ತವೆ. ಚರ್ಮ ಬಿರುಕಿನಿಂದ ಕೂಡಿರುತ್ತದೆ. ಜಡತೆ, ತಲೆ ಸುತ್ತುವುದು, ಎಚ್ಚರ ತಪ್ಪುವುದು ಇಂತಹವು ಉಂಟಾಗುವ ಸಂಭವವೂ ಇರುತ್ತದೆ.





**ಕೆಳಗೆ ಕೊಟ್ಟಿರುವ ಔಷಧಗಳು ಸ್ಟ್ರೋಕ್‌ನಿಂದ ರಕ್ಷಿಸುವುದೇ ಅಲ್ಲದೇ ಅದರಿಂದ ಶೀಘ್ರ ಗುಣವಾಗಲು ಸಹಕರಿಸುತ್ತವೆ.**

- ದಿನವೂ ಒಂದು ಬಾರಿ 200 ಮಿ.ಲೀ. ಹಾಲಿನಲ್ಲಿ ಒಂದು ಟೀಸ್ಪೂನ್ ಸುಗಂಧಿ ಬೇರಿನ ಪುಡಿಯನ್ನು ಕಲಿಸಿ ಮರಳಿಸಿ, ಕೆಳಗಿಳಿಸಿ, ಶೋಧಿಸಿ ತಕ್ಕಷ್ಟು ಸ್ಪಟಿಕ ಬೆಲ್ಲ ಕಲಿಸಿ ಸೇವಿಸುತ್ತಿರಬೇಕು.
- ದಿನವೂ ಒಂದು ಬಾರಿ 50 ಮಿ.ಲೀ. ಹಾಲಲ್ಲಿ ಒಂದು ಟೀ ಸ್ಪೂನ್ ಶುದ್ಧ ಗುಲಾಬಿ ಜಲ ಕಲಿಸಿ ಕುಡಿಯಬೇಕು.
- ಪ್ರತಿನಿತ್ಯ ರಾತ್ರಿ 50 ಮೀ.ಲೀ ಹಾಲನ್ನು ಬಿಸಿ ಮಾಡಿ 30-50 ಗ್ರಾಂ ಈರುಳ್ಳಿ ತುಂಡುಗಳನ್ನು ಹಾಕಿಟ್ಟುಕೊಂಡು ಬೆಳಗ್ಗೆ ಅದನ್ನು ತಿನ್ನುತ್ತಿರಬೇಕು.
- ದಿನವೂ ಒಂದೆರಡು ಬಾರಿ 100 ಮೀ.ಲೀ ಬಿಸಿನೀರಿನಲ್ಲಿ 2 ಗ್ರಾಂ ಧನಿಯಾ ಪುಡಿ, 2 ಗ್ರಾಂ ಕಲ್ಲು ಸಕ್ಕರೆ ಹಾಕಿ ಒಂದು ಗಂಟೆ ನೆನೆಸಿ ಶೋಧಿಸಿ ಆ ನೀರನ್ನು ಕುಡಿಯುತ್ತಿದ್ದರೆ ಉತ್ತಮ ಫಲಿತಾಂಶ ಪಡೆಯಬಹುದು.









**ಈ ಸೂರ್ಯಾಘಾತಕ್ಕೆ ಗುರಿಯಾಗದಿರಲು ಹಲವು ಎಚ್ಚರಿಕೆಗಳನ್ನು ಅನುಸರಿಸುವುದು ವಿಹಿತ.**

- ಹೊರಗೆ ಹೋಗಬೇಕಾಗಿ ಬಂದ ಸಂದರ್ಭದಲ್ಲಿ ಆದಷ್ಟೂ ಬೆಳಗ್ಗೆ 11 ಗಂಟೆಯೊಳಗೆ ಸಾಯಂಕಾಲ 4 ಗಂಟೆ ನಂತರ ಹೋಗಿ ಕೆಲಸ ಮಾಡಿಕೊಳ್ಳುವುದು ಉತ್ತಮ.
- ಬೇಸಿಗೆಯಲ್ಲಿ ಉಪ್ಪು, ಖಾರ, ಮಸಾಲೆಗಳಿಂದ ತಯಾರಿಸಿದ ಆಹಾರ ಪದಾರ್ಥಗಳು, ಅತಿಯಾದ ಎಣ್ಣೆ ಪದಾರ್ಥಗಳನ್ನು ಬಳಸಲೇಬಾರದು.
- ಮಣ್ಣಿನ ಪಾತ್ರೆಯಲ್ಲಿ ಇಟ್ಟುಕೊಂಡ ತಂಪು ಪಾನೀಯಗಳು ಅತ್ಯುತ್ತಮ.



- ಸಾತ್ವಿಕ ಆಹಾರಗಳಾದ, ಸರಾಗವಾಗಿ ಜೀರ್ಣವಾಗ ಬಲ್ಲ ಆಹಾರಗಳನ್ನು ಸೇವಿಸಬೇಕು.
- ಕಾಲಕ್ಕನುಗುಣವಾಗಿ ಸಹಜವಾಗಿ ದೊರಕುವ ಪ್ರಾಕೃತಿಕ ಪದಾರ್ಥಗಳನ್ನು ಬಳಸುವುದಕ್ಕೆ ಪ್ರಾಧಾನ್ಯತೆ ನೀಡಬೇಕು.
- ಸನ್‌ಸ್ಟ್ರೋಕ್ ಸಮಸ್ಯೆಯನ್ನು ಮಟ್ಟ ಹಾಕಲು ನೀರಿನೊಂದಿಗೆ ಮಜ್ಜಿಗೆಯಂಥ ದ್ರವಾಹಾರಗಳನ್ನು ಸೇವಿಸುವುದು ಒಳ್ಳೆಯದು.



- ಮಜ್ಜಿಗೆ ದೇಹವನ್ನು ತಂಪಾಗಿರಿಸುತ್ತದೆ. ಆಂಧ್ರರಾಜ್ಯದಲ್ಲಿ ಈ ಮಜ್ಜಿಗೆಯನ್ನು ಚಲ್ಲ ಎಂದು ಕರೆಯ ಲಾಗುತ್ತದೆ. ಇದರಿಂದ ನಮಗೆ ವಿವಿಧ ಲವಣಗಳು, ವಿಟಮಿನ್‌ಗಳು ಹಾಗೂ ಪುಷ್ಟಿ ದೊರಕುತ್ತದೆ. ಇದರಲ್ಲಿ ಹಾಕಲಾಗುವ ಉಪ್ಪು,ಶುಂಠಿ, ಕೊತ್ತಂಬರಿ,ಪುದಿನಾ,ನಿಂಬೆರಸದಂಥವು ಶರೀರದಲ್ಲಿ ನೀರಿ ನಂಶವನ್ನು ಚೆನ್ನಾಗಿ ಅಧಿಕೃತಗೊಳಿಸಿ ಎಲೆಕ್ಟ್ರೋಲೈಟ್ ಆಗಿ ಕಾರ್ಯನಿರ್ವಹಿಸುವುದರೊಂದಿಗೆ ನಿರ್ಜ ಲೀಕರಣ (ಡಿಹೈಡ್ರೇಷನ್) ಆಗದಂತೆ ತಡೆಗಟ್ಟುತ್ತದೆ. ಹಾಗೆಯೇ ಎಳನೀರು, ಕಬ್ಬಿನಹಾಲು, ಹಣ್ಣಿನ ರಸಗಳಂಥವು ಸಹಾ ಬಹಳಾ ಉಪಯುಕ್ತವಾಗಿದೆ.



- ಏಲಕ್ಕಿ, ಲವಂಗ, ಪಚ್ಚಕರ್ಪೂರ, ಕರಿಮೆಣಸು, ಸ್ಫಟಿಕ ಬೆಲ್ಲ ಇತ್ಯಾದಿಗಳನ್ನು ನೀರಿನಲ್ಲಿ ಕಲಿಸಿ ತಯಾರಿಸಿದ ಶರ್ಕರೋದಕವನ್ನು ದಿನವೂ ಸೇವಿಸುವುದು ಸಹಾ ಬೇಸಿಗೆಯ ಕಾಲದಲ್ಲಿ ನಮ್ಮ ಆರೋಗ್ಯ ಸಂರಕ್ಷಣೆಗೆ ಉತ್ತಮವಾದದ್ದು.



- ದಿನವೂ ಒಳ್ಳೆಯ ಗಂಧ ಅಂದರೆ ಸಾಣೆಕಲ್ಲಿನ ಮೇಲೆ ತೇದು ತೆಗೆದ ಗಂಧ ಒಂದು ಚಮಚ ಒಂದು ಲೋಟ ನೀರಿನಲ್ಲಿ ಕಲಿಸಿ ತೆಗೆದುಕೊಂಡರೆ ಸೂರ್ಯಾಘಾತವನ್ನು ಬಹಳಾ ಕಾಲದವರೆಗೆ ನಿಭಾಯಿಸಬಹುದು.
- ಸ್ಟ್ರೋಕ್ ಆದಾಗ ತಂಪಾದ ನೀರಿನಲ್ಲಿ ಬಟ್ಟೆಯನ್ನು ಮುಳುಗಿಸಿ, ಹಿಂಡಿ ದೇಹದ ಮೇಲೆ ಸುತ್ತಬೇಕು ಮತ್ತು ತಣ್ಣೀರನ್ನು ಮೈ ಮೇಲೆ ಚೆಲ್ಲುತ್ತಿರಬೇಕು.



- ಈರುಳ್ಳಿ ರಸದಲ್ಲಿ ಬಟ್ಟೆ ಅಥವಾ ಹತ್ತಿಯನ್ನು ಅದ್ದಿ, ಹಿಂಡಿ ತಲೆಯ ಮೇಲೆ, ಹಣೆಯ ಮೇಲೆ ಹಾಕುತ್ತಿರಬೇಕು. ಬಟ್ಟೆ ಶಾಖ ಹೀರಿಕೊಂಡು ಬಿಸಿಯಾದಲ್ಲಿ ಮತ್ತೆ ಮತ್ತೆ ಈರುಳ್ಳಿ ರಸದಲ್ಲಿ ಬಟ್ಟೆಯನ್ನು ಅದ್ದಿ ಹಣೆಯ ಮೇಲಿಡುತ್ತಿರಬೇಕು.
- ಹಿಡಿಯಷ್ಟು ಲಾವಂಚದ ಬೇರನ್ನು ತಕ್ಕಷ್ಟು ನೀರಿನಲ್ಲಿ ಒಂದೆರಡು ಗಂಟೆಗಳ ಕಾಲ ನೆನೆಸಿ ಆ ನೀರಿನಿಂದಲೂ ಸಹಾ ಮೇಲೆ ಹೇಳಿದ ವಿಧಾನದಲ್ಲಿ ಬಳಸಬಹುದು.









ಧಾರಾವಾಹಿ

ಶ್ರೀ ಪ್ರಸನ್ನವೆಂಕಟ ದಾಸಾರ್ಯವಿರಚಿತ

# "ಜೋಗಿಯ ಕಂಡೆ ಪರಮ ಯೋಗಿಯ ಕಂಡೆ"

## ಕೀರ್ತನೆಯ ಒಳನೋಟ

– ಡಾ॥ ಸುಭಾಸ ಕಾಖಂಡಕಿ

79754 42458

ಜೋಗಿಯ ಕಂಡೆ ಪರಮಯೋಗಿಯ ಕಂಡೆ
ಭೋಗಿಶಯನ ಗಂಬೂರ ಚರ್ಚಿತಾಂಗ
ವೆಂಕಟೇಶ ॥ಪ॥

ದಾಸರು ಭಗವಂತನಲ್ಲಿ ಜೋಗಿ-ಯೋಗಿಯ ಎರಡು ಮುಖಗಳನ್ನು ಕಂಡಂತೆ ಅತ್ಯಂತ ಅರ್ಥಪೂರ್ಣವಾಗಿ ವರ್ಣಿಸಿದ್ದಾರೆ. ಜೋಗಿಯ ಕಂಡೆ ಎನ್ನುವಲ್ಲಿ ದಾಸರು ಭಗವಂತನಲ್ಲಿ ಪರಮ ಯೋಗಿಯನ್ನು ಕಂಡಿದ್ದಾರೆ. ಗಂಬೂರ ಚರ್ಚಿತಾಂಗ ಕರ್ಪೂರ ಲೇಪಿತನಾದ ಯೋಗಿಯಲ್ಲಿ, ಭೋಗಿ ಶಯನನಾದ ಜೋಗಿಯನ್ನು ಕಾಣುವಲ್ಲಿ, ದಾಸರಿಗೆ ಭಗವಂತನ ವಿಶಿಷ್ಟತೆಯ ರೂಪ ಕಂಡಂತಿದೆ. ಇದರ ಜೊತೆ-ಜೊತೆಗೆ ದಾಸರು ಶ್ರೀ ಹರಿಯ ದಶಾವತಾರದ ವಿಶಿಷ್ಟತೆಯನ್ನು ಕೂಡ ವರ್ಣಿಸುತ್ತಾ ಹೋಗಿದ್ದಾರೆ.

**ನುಡಿ - 1 ರಲ್ಲಿ**

ವೇದವ ಕದ್ದೊಯ್ದವನ ಕೊಂದ ಜೋಗಿಯ ಕಂಡೆ।
ಭೂಧರ ಧರನಾದ ಜೋಗಿಯ ಕಂಡೆ॥
ಭೇದಿಸಿ ಪಾತಾಳ ಪೊಕ್ಕು ಗರ್ಜಿಪ ಜೋಗಿಯ ಕಂಡೆ।
ಆದರದಿ ಕಂದನ ನುಡಿಯನಾಲಿಸಿ ಬಂದ॥1॥

ಎನ್ನುವಲ್ಲಿ ದಾಸರು ಮತ್ಸ್ಯಾವತಾರ, ಕೂರ್ಮಾವತಾರ, ಮತ್ತು ಕಂದನ ನುಡಿಯ ನಾಲಿಸಿ ಬಂದ ನರಸಿಂಹ ಅವತಾರದ ವರ್ಣನೆಯನ್ನು ಮಾಡುತ್ತ, ಅಂಥಹ ಮನಮೋಹಕರೂಪವುಳ್ಳ ಜೋಗಿಯನು ಕಂಡೆ ಎಂದಿದ್ದಾರೆ.

**ನುಡಿ - 2 ರಲ್ಲಿ**

"ಅಂಗುಟದಿ ಬೊಮ್ಮಾಂಡವ ಸೀಳಿದ ಜೋಗಿಯ ಕಂಡೆ
ಹೆಂಗಳ ತಲೆಯನರಿದ ಜೋಗಿಯ ಕಂಡೆ॥
ಅಂಗನೆಗೋಸುಗಾರಣ್ಯ ಸಂಚಾರಿ ಜೋಗಿಯ ಕಂಡೆ
ಪೊಂಗೊಳಲನೂದಿ ಮುಜಗವನು ಮೋಹಿಸುವ ॥2॥

ಇಲ್ಲಿ ದಾಸರು - ತನ್ನ ಅಂಗುಟದಿಂದ ಬೊಮ್ಮಾಂಡವನಳಿದ ವಾಮನಾವತಾರದ ಜೋಗಿ, ಹೆಂಗಳ ತಲೆನುರಿದ ಎನ್ನುವಲ್ಲಿ ಕ್ಷತ್ರಿಯರನ್ನು ನಾಶ ಮಾಡಿದ ಪರಶುರಾಮಾವತಾರ ಅಂಗನೆಗೋಸುಗಾರಣ್ಯಸಂಚಾರಿ ಎನ್ನುವಲ್ಲಿ ವನವಾಸದಲ್ಲಿ ಅಡವಿ- ಅಡವಿ ಸಂಚರಿಸಿದ ರಾಮಾವತಾರ,। ಪೊಂಗಳಲನೂಡಿ ಮೂಜಗವನು ಮೋಹಿಸುವ - ಎನ್ನುವಲ್ಲಿ ತನ್ನ ಮೋಹಕ ಕೊಳಲಿನ ಇಂಪಿನಿಂದ ಮೂರು ಲೋಕವೇ ಮೋಹಗೊಳ್ಳುವಂತೆ ಮಾಡಿದ ಕೃಷ್ಣಾವತಾರದ ವರ್ಣನೆ ಮಾಡುತ್ತ, ಇಂಥ ವಿಶಿಷ್ಟ ಅವತಾರ ಪುರುಷ ಜೋಗಿಯನು ಕಂಡೆ ಎಂದಿದ್ದಾರೆ.

**ಇನ್ನು ಕೊನೆಯ ನುಡಿಯಲ್ಲಿ -**

"ಕನ್ಯೆರ ವ್ರತಗೇಡಿ ದಿಗಂಬರ ಜೋಗಿಯ ಕಂಡೆ।
ಉನ್ನತ ವಾಜಿಯೇರಿದ್ದ ಜೋಗಿಯ ಕಂಡೆ॥
ಪನ್ನಗಾದ್ರಿ ವರದ ಪ್ರಸನ್ನವೆಂಕಟೇಶನೆಂಬ।
ತನ್ನ ನಂಬಿದವರನು ಬಿಡದೆ ಪಾಲಿಸುವ ॥3॥

ಇಲ್ಲಿ ಬೌದ್ಧಾವತಾರ- ಕಲ್ಕಿ ಅವತಾರಗಳ ಉಲ್ಲೇಖ ಮಾಡಿರುವ ದಾಸರು ವಿಷ್ಣುವಿನ ಹತ್ತು ಅವತಾರಗಳನ್ನು ವರ್ಣಿಸುತ್ತ ಇಂಥ ಅವತಾರ ಪುರುಷನಾದ ಶ್ರೀಹರಿ ವೆಂಕಟೇಶನ ರೂಪದಲ್ಲಿ ಬೆಟ್ಟದೊಡೆಯನಾಗಿ ನಿಂತು, ತನ್ನನ್ನು ನಂಬಿದ ಭಕ್ತರನ್ನು ಪಾಲಿಸುತ್ತಿದ್ದಾನೆ. ಇಂಥಾ ಮಹಾಮಹಿಮೆ ಯುಳ್ಳ ಜೋಗಿಯನು ಕಂಡೆ ಎಂಬ ದಾಸರ ವರ್ಣನೆ ವಿಶಿಷ್ಟ ಪೂರ್ಣ ವಾಗಿದೆ. ದಾಸರ ಈ ಕೀರ್ತನೆಯ ಸಾಹಿತ್ಯವನ್ನು ವಿಶೇಷವಾಗಿ ಗಮನಿಸಿದರೆ ಶ್ರೀನಿವಾಸನೇ ಜೋಗಿಯ ರೂಪದಲ್ಲಿ ಬಂದು ತನ್ನ ಎಲ್ಲ ಅವತಾರಗಳ ದರ್ಶನವನ್ನು ದಾಸರಿಗೆ ಮಾಡಿಸಿದನೋ ಎನ್ನುವಂತಿದೆ.

ಶ್ಲೋ - ಆದನೂರ್ ನಗರೇ ದಿವ್ಯ ಸೂರ್ಯ ಪುಷ್ಕರಿಣಿ ಯುತೇ
ಶ್ರೀರಂಗನಾಯಕೀ ನಾಥಃ ಪ್ರಣವಾಖ್ಯ ವಿಮಾನಗಃ
ಅಂಡಾಳಕ್ಕುಂ ಮೆಯ್ಯಿನಾಖ್ಯಃ ಪ್ರಾಗ್ ಪ್ರಾನ್ಮುಖೋ ಭುಜಗೇಶಯಃ
ರಾಜತೇ ಕಾಮಧೇನ್ವಕ್ಷಿ ಗೋಚರೋ ಕಲಿಜಿನ್ನುತಃ॥

ವೈಷ್ಣವ ದಿವ್ಯಕ್ಷೇತ್ರಗಳಲ್ಲಿ ತಿರುವಾದನೂರ್ ಪ್ರಖ್ಯಾತಿಗಳಿಸಿರುವ ಕ್ಷೇತ್ರವಾಗಿದೆ. ಹಾಗೇ ತಿರುಪುಳ್ಳಂಬೂದಂಗುಡಿ ಎಂಬ ಕ್ಷೇತ್ರಗಳಂತೆ ಕಾವೇರಿ ನದೀತೀರದಲ್ಲಿ ಎರಡು ಪುಣ್ಯತೀರ್ಥಗಳ ನಡುವೆ, ಎರಡು ಪ್ರಾಕಾರಗಳೊಂದಿಗೆ ರಾಜಗೋಪುರಗಳೊಂದಿಗೆ ಅತ್ಯದ್ಭುತವಾಗಿ ನೆಲೆಸಿದೆ. ಈ ದಿವ್ಯ ದೇಶವು ಸ್ವಾಮಿಯ ಗುಡಿಯಿಂದ 3 ಕಿ.ಲೋ ಮೀಟರ್ ದೂರದಲ್ಲಿದೆ. ಪುಳ್ಳಂಬೂದಂಗುಡಿ ಎಂಬ ಕ್ಷೇತ್ರದ ಸಮೀಪದಲ್ಲಿ ಅತ್ಯದ್ಭುತವಾದ ಶೋಭಾಯಮಾನವಾದ ಪ್ರಕೃತಿಯ ನಡುವೆ, ಅಹೋಬಿಲ ಮಠದವರ ಅಧೀನದಲ್ಲಿ ಈ ಕ್ಷೇತ್ರವು ವಿರಾಜಿಸುತ್ತಿದೆ.

ಕ್ಷೇತ್ರಾಧಿಪತಿಯಾದ ಭಗವಂತನು ಭುಜಂಗಶಯನನಾಗಿ ''ಆಂಡಾಳುಕ್ಕುಮೆಯ್ಯನ್'' ಎಂಬ ಹೆಸರಿನಿಂದ ರಾರಾಜಿಸುತ್ತಿದ್ದಾನೆ. ವಿಶೇಷವಾಗಿ ಈ ಸ್ವಾಮಿ ತನ್ನ ಶಿರಸ್ಸಿನಲ್ಲಿ ಧಾನ್ಯಗಳನ್ನು ಅಳೆಯುವಂತಹಾ ಸೊಲಗೆಯಿಂದಾಗಿ ಹಾಗೇ ಒಂದು ಕೈಯಲ್ಲಿ ತಾಳಪತ್ರವನ್ನು ಹಿಡಿದು ಬರೆಯುತ್ತಿರುವಂತೆ ಪೂರ್ವಮುಖದಲ್ಲಿ ನೆಲೆಸಿದ್ದಾನೆ. ಈ ಸ್ವಾಮಿಯನ್ನು ತಿರುಮಂಗೈಆಳ್ವಾರು ತಮ್ಮ ಮಂಗಳಾಶಾಸನದಿಂದ ಸ್ತುತಿಸಿದ್ದಾರೆ. ಶ್ರೀರಂಗದಲ್ಲಿ ನೆಲೆಸಿರುವ ರಂಗನಾಥನಂತೆ ಇಲ್ಲೂ ಭಗವಂತನು ನೆಲೆಗೊಂಡಿದ್ದಾನೆ. ಮೂಲಮೂರ್ತಿಯ ಪಾದಗಳಲ್ಲಿ ಕಾಮಧೇನುವು ನಂದಿನಿಯೊಂದಿಗೆ ಹಾಗೇ ತಿರುಮಂಗೈಯಾಳ್ವಾರರು, ಅಗ್ನಿದೇವ ಇವರೆಲ್ಲರೂ ಆ ಸ್ವಾಮಿಯನ್ನು ಸೇವಿಸುತ್ತಾ ಅಲ್ಲೇ ನೆಲೆಸಿದ್ದಾರೆ.

ಸ್ವಾಮಿಯ ಉತ್ಸವ ಮೂರ್ತಿಯ ಹೆಸರು ''ಅಳಗಿಯಣ ವಾಳನ್'' ಅಮ್ಮನವರು ಶ್ರೀರಂಗನಾಯಕಿ ಎಂದು ಕರೆಯಲ್ಪಡುತ್ತಿದ್ದಾರೆ. ಕಮಲ ವಾಸಿನಿ ಎಂದೂ ಅಮ್ಮನವರನ್ನು ಕರೆಯುತ್ತಾರೆ. ಭಕ್ತರು ಉತ್ಸವ ಮೂರ್ತಿಯನ್ನು ಶ್ರೀಚಕ್ರನಿವಾಸಿನಿ, ಭಾರ್ಗವಿ ಎಂದೂ ಪೂಜಿಸುತ್ತಾರೆ. ನಮಗೆ ವಿಶೇಷವಾಗಿ ಈ ಸ್ಥಳ ಪುರಾಣ ಅತ್ಯದ್ಭುತವೆಂದೆನಿಸುತ್ತಿದೆ. ಸ್ಥಳ ಪುರಾಣಗಳು ಎಷ್ಟೇ ಇದ್ದರೂ ಮುಖ್ಯವಾದದ್ದನ್ನು ಇಲ್ಲಿ ವಿವರಿಸಲಾಗಿದೆ.

ಬ್ರಹ್ಮದೇವನ ಐದನೆಯ ತಲೆಯನ್ನು ಪರಶಿವನು ಖಂಡಿಸಿದಾಗ, ಬ್ರಹ್ಮಹತ್ಯಾದೋಷವು ಆತನಿಗೆ ಉಂಟಾಯಿತು. ಬ್ರಹ್ಮಕಪಾಲವು ಶಿವನ ಅಂಗೈಗೆ ಅಂಟಿಕೊಂಡಿತು. ಆದರಿಂದ ಬಿಡಿಸಿಕೊಳ್ಳಲು ಶಿವನು ವಿಶ್ವ ಪ್ರಯತ್ನ ಮಾಡಿದ. ಆದರೆ ಶಿವನ ಪ್ರಯತ್ನ ವಿಫಲವಾಯಿತು. ಆಗ ಶಿವನು ಆ ಕಪಾಲವನ್ನು ದಹಿಸಿಬಿಡಬೇಕೆಂದೂ ಪ್ರಯತ್ನಿಸಿದ . ಆದರೆ ಅದು ಸುಡಲೇ ಇಲ್ಲ. ಆ ದೋಷವು ಅಗ್ನಿದೇವನಿಗೆ ತಗುಲಿದಾಗ, ಅಗ್ನಿ ತನ್ನ ಬ್ರಹ್ಮಹತ್ಯಾ ದೋಷವನ್ನು ಕಳೆದುಕೊಳ್ಳಬೇಕೆಂದು ಈ ದಿವ್ಯ ಕ್ಷೇತ್ರಕ್ಕೆ ಬಂದು ತಪಸ್ಸು ಮಾಡಿ ತನ್ನ ದೋಷವನ್ನು ಕಳೆದುಕೊಂಡನೆಂದು ಇತಿಹಾಸವಿದೆ. ಆದ್ದರಿಂದ ಗರ್ಭ ಗುಡಿಯ ಮೂಲಮೂರ್ತಿಯ ಪಾದಗಳ ಕೆಳಗೆ ಅಗ್ನಿದೇವನು ನೆಲೆಸಿದ್ದಾನೆ, ಇದು ಒಂದು ಚರಿತ್ರೆ.

ಇನ್ನೊಂದು ಸ್ಥಳ ಪುರಾಣದ ಪ್ರಕಾರ ಒಮ್ಮೆ ಭಗವಂತನು ಏಕಾಂತವಾಗಿರಬೇಕೆಂದು ನಿರ್ಧರಿಸಿ ಆದನೂರ್ ದಿವ್ಯಕ್ಷೇತ್ರಕ್ಕೆ ಬಂದನಂತೆ ಆ ಸಮಯದಲ್ಲಿ ಆದಿಶೇಷನು ಭಗವಂತನನ್ನು ಹುಡುಕುತ್ತಾ ಅಲ್ಲಿಗೆ ಬಂದನಂತೆ. ಆಗ ಭಗವಂತನು ಅವನನ್ನು ನೋಡಿ ಏನೂ ಅರಿಯದವನಂತೆ ನೀನು



ಯಾರು? ಎಂದು ಕೇಳಿದನಂತೆ ಆದಿಶೇಷನು ಭಗವಂತನಿಗೆ ಉತ್ತರಿಸುತ್ತಾ ಸ್ವಾಮೀ ನಾನು ಆದಿಶೇಷ ನಿಮಗಿದು ತಿಳಿಯದೇ? ಎಂದು ಕೇಳಿದಾಗ, ನೀನು ಆದಿಶೇಷನೆನ್ನುವುದಕ್ಕೆ ಏನಾದರೂ ಆಧಾರವಿದೆಯೇ? ಎಂದು ಕೇಳಿದನಂತೆ. ಆಗ ಆದಿಶೇಷನು ಹಲವಾರು ವಿಧಗಳ ಆಧಾರಗಳನ್ನು ತೋರಿದಾಗ ಭಗವಂತನು ನಸುನಗುತ್ತಾ, ಆದಿಶೇಷನಿಗೆ ಶಂಖಚಕ್ರಾಂಕಿತವನ್ನು ಸಮಾಶ್ರಯಣ ಮಾಡಿದನಂತೆ. ಇಂದಿಗೂ ಇಲ್ಲಿ ಆದಿಶೇಷನ ಭುಜಗಳ ಮೇಲೆ ಚಕ್ರಾಂಕಿತವು ಕಂಡು ಬರುತ್ತವೆ.

ತಮಿಳಭಾಷೆಯಲ್ಲಿ "ಆ'' ಎಂಬ ಶಬ್ದಕ್ಕೆ "ಪಶು'' ಎಂದರ್ಥ ಬರುತ್ತದೆ. ಪಶುಗಳನ್ನು ಹೊಂದಿರುವ ಕ್ಷೇತ್ರವಾದ್ದರಿಂದ "ಆದನೂರ್'' ಎಂಬ ಹೆಸರಿನಿಂದ ಈ ಕ್ಷೇತ್ರವು ಹೆಸರುವಾಸಿಯಾಗಿದೆ. ಈ ಕ್ಷೇತ್ರದ ವೈಭವ ವನ್ನು ನೋಡಿದಾಗ, ಕ್ಷೀರಸಾಗರದಿಂದ ಮಹಾಲಕ್ಷ್ಮಿ ಆವತರಿಸುವ ಮೊದಲೇ ಕಾಮಧೇನು ಇಲ್ಲಿಗೆ ಬಂದಿತಂತೆ. ಕಾಮಧೇನುವು ಭಗವಂತನನ್ನು ಕುರಿತು. ಸ್ವಾಮಿ! ನಾನು ಮಹಾಲಕ್ಷ್ಮಿಗಿಂತಲೂ ಉತ್ತಮಳೆಂಬ ಎಂಬ ಹೆಸರು ಪ್ರಸಿದ್ಧಿಯನ್ನು ಕರುಣಿಸು ಎಂದು ಕೇಳಿತಂತೆ .ಆಗ ಸ್ವಾಮಿಯು ಪ್ರತ್ಯಕ್ಷನಾಗಿ ನಾನು ಎಲ್ಲರಿಗೂ ಅವರವರ ಬೇಡಿಕೆಗಳನ್ನು ನೀಡುತ್ತೇನೆ, ಅದೇ ಪ್ರಕಾರವಾಗಿ ನೀನೂ ಯಾರು ಏನೇ ಕೇಳಿದರೂ ಕೊಡುವಂತಹಾ ಶಕ್ತಿಯನ್ನು ನಿನಗೆ ನೀಡುತ್ತೇನೆ, ಎಂದು ಹೇಳಿದನಂತೆ. ಆಗ ಕಾಮಧೇನುವು"ಅದಲ್ಲಾ ಸ್ವಾಮೀ! ನನಗೆ ಮಹಾಲಕ್ಷ್ಮೀಗಿಂತಲೂ ಹೆಚ್ಚಿನ ಪ್ರಾಮುಖ್ಯತೆಯನ್ನು ಅನುಗ್ರಹಿಸಿ'' ಎಂದು ಕೇಳಿತಂತೆ. ಆಗ ಸ್ವಾಮಿಯು ಸರೀ ಹಾಗಾದರೆ ನಾನು ನಿನಗೆ ಒಂದು ಸೊಲಗವನ್ನು ಕೊಡುತ್ತೇನೆ.

ಈ ಪಾತ್ರೆಯನ್ನು ಧಾನ್ಯಗಳಿಂದ ತುಂಬಿಸು ಎಂದು ಹೇಳಿದ. ಆಗ ಕಾಮಧೇನುವು ಸರಿ ಎಂದು ಹೇಳಿ, ಧಾನ್ಯಗಳಿಂದ ಅಲ್ಲಿಟ್ಟಿದ್ದ ಪಾತ್ರೆಯನ್ನು ಭಗವಂತನು ನೀಡಿದ ಸೊಲಗೆಯಿಂದ ಅಳೆದು ತುಂಬಿಸಿತೊಡಗಿತು. ಆದರೆ ಎಷ್ಟೇ ಪ್ರಯತ್ನಿಸಿದರೂ ಆ ಪಾತ್ರೆಯು ತುಂಬಲಿಲ್ಲ ಕಾಮಧೇನು ಇದು ತನ್ನಿಂದ ಸಾಧ್ಯವಾಗುವುದಿಲ್ಲ ಎಂದು ಒಪ್ಪಿ ಕೊಂಡಿತು. ಆಗ ಭಗವಂತನು ಮಹಾಲಕ್ಷ್ಮೀದೇವಿಗೆ ಆ ಕೆಲಸವನ್ನು ಮಾಡಲು ಹೇಳಿದ ಆಗ ಆ ಮಹಾ ತಾಯಿ ಭಗವಂತನಿಗೆ ನಮಸ್ಕರಿಸಿ, ಭಗವಂತನು ಧರಿಸಿದ್ದ ತುಳಸೀ ಮಾಲೆಯಲ್ಲಿನ ಒಂದು ತುಳಸೀದಳವನ್ನು ತೆಗೆದುಕೊಂಡು ಆ ಸೊಲಗದಲ್ಲಿಟ್ಟು ಅದನ್ನು ಧಾನ್ಯದಿಂದ ಪಾತ್ರೆಯನ್ನು ತುಂಬಿಸಿದಾಗ ಕೂಡಲೇ ಆ ಪಾತ್ರೆಯು ತುಂಬಿತು. ಆಗ ಭಗವಂತನು ಕಾಮಧೇನುವನ್ನು ನೋಡಿ, "ಕಾಮಧೇನೂ ಭಕ್ತಿ ಒಂದೇ ಎಲ್ಲ ಕ್ಕಿಂತಲೂ ಮುಖ್ಯವಾದದ್ದು ಅಹಂಕಾರವು ಒಳಿತಲ್ಲ'' ಎಂದು ತಿಳಿ ಹೇಳಿದ. ಆಗ ಕಾಮಧೇನುವು ತನ್ನ ತಪ್ಪಿಗೆ ಕ್ಷಮೆಯಾಚಿಸಿತು. ಅದರ ಮೇಲೆ ಕರುಣೆ ತೋರಿದ ಭಗವಂತ ಕಾಮಧೇನುವಿನೊಂದಿಗೆ ನಂದಿನಿ ಧೇನುವನ್ನೂ ಅನುಗ್ರಹಿಸಿದ.

ಅದೇ ರೀತಿಯಲ್ಲಿ ಒಮ್ಮೆ ತಿರುಮಂಗೈ ಆಳ್ವಾರರು ಶ್ರೀರಂಗದಲ್ಲಿನ ರಂಗನಾಥಸ್ವಾಮಿಯ ಪ್ರಾಕಾರಗಳನ್ನು ನಿರ್ಮಿಸುತ್ತಿದ್ದ ಸಂದರ್ಭದಲ್ಲಿ, ಹಣದ ಅಭಾವದಿಂದ ಆ ಕೆಲಸ ಅರ್ಧಕ್ಕೆ ನಿಂತು ಹೋಗಿತ್ತು. ಆಗ ಆಳ್ವಾರರು ರಂಗನಾಥಸ್ವಾಮಿಯನ್ನು ಪ್ರಾರ್ಥಿಸುತ್ತಾ"ಸ್ವಾಮೀ ರಂಗನಾಥಾ!ಹೇಗಾದರೂ ನೀವೇ ನನಗೆ ದಾರಿ ತೋರಬೇಕು'' ಎಂದು ಬೇಡಿಕೊಂಡರು. ಅದೇ ರಾತ್ರಿ ರಂಗನಾಥನು ಆಳ್ವಾರರ ಕನಸಿನಲ್ಲಿ ಕಾಣಿಸಿಕೊಂಡು, "ಇಲ್ಲಿಂದ ಸ್ವಲ್ಪ ದೂರದಲ್ಲಿ ಒಬ್ಬ ವ್ಯಾಪಾರಿ ಇದ್ದಾನೆ ನೀವು ಹೋಗಿ ಅವನಲ್ಲಿ ಹಣವನ್ನು ಕೇಳಿದರೆ ಆತ ನೀಡುತ್ತಾನೆ ಎಂದು ಹೇಳಿದ ಅದರಂತೆ ಆಳ್ವಾರರು ಇವೆಲ್ಲವೂ ಭಗವಂತನ ಅನುಗ್ರಹವೆಂದೂ ಭಾವಿಸಿ, ಕಾವೇರಿ ನದೀತೀರಕ್ಕೆ ಹೋಗಿ ನೋಡಿದಾಗ ಅಲ್ಲಿ ಅತ್ಯಂತ ಹಿರಿದಾದ ರೂಪವನ್ನು ಹೊಂದಿದ್ದ ಒಬ್ಬ ವ್ಯಕ್ತಿ ತನ್ನ ಒಂದು ಕೈಯಲ್ಲಿದ್ದ ಸೊಲಗವನ್ನೂ ಮತ್ತೊಂದು ಕೈಯಲ್ಲಿ ತಾಳಪತ್ರವನ್ನು ಹಿಡಿದುಕೊಂಡು ಕುಳಿತಿದ್ದ ಅವನನ್ನು ಮಾತನಾಡಿಸಿದಾಗ ಆತ ಆಳ್ವಾರರನ್ನು ನಿಮಗೇನುಬೇಕು ಎಂದು ಕೇಳಿದ ಆಗ ಆಳ್ವಾರರು, ತಮ್ಮ ಸ್ಥಿತಿಯನ್ನು ವಿವರಿಸಿದರು. ಆತ ತನ್ನ ಕೈಯಲ್ಲಿದ್ದ ಸೇರಿನಿಂದ ಆ ಕಾವೇರಿ ನದಿಯ ಮರಳನ್ನು ತಂದು ಅವರಿಗೆ ನೀಡಿದಾಗ ಅದು ಬಂಗಾರವಾಯಿತು.

ಯಾರು ಶ್ರದ್ದೆಯಿಂದ ಸೇವೆ ಮಾಡುತ್ತಾರೋ ಅವರಿಗೆ ಆ ಮರಳು ಬಂಗಾರದಂತೆ, ಉಳಿದವರಿಗೆ ಮರಳಿನಂತೆಯೇ ಕಂಡು ಬಂದಿತಂತೆ ಆದ್ದರಿಂದ ಉಳಿದವರು ಆ ವ್ಯಕ್ತಿಯ ಮೇಲೆ ಕೋಪಿಸಿಕೊಂಡು ಆತನನ್ನು ಹಿಡಿಯಲು ಬಂದಾಗ, ಆ ವ್ಯಾಪಾರಿ ತಿರುವಾದನೂರು ಕ್ಷೇತ್ರದತ್ತ ಓಡಿದನಂತೆ ತಿರುಮಂಗೈ ಆಳ್ವಾರರೂ ಕೂಡಾ ಆ ವ್ಯಕ್ತಿಯ ಹಿಂದೆ ಓಡಿದಾಗ, ಅಲ್ಲಿ ಭಗವಂತನು ಆದಿಶೇಷನ ಮೇಲೆ ಪವಡಿಸಿ ತನ್ನ ಶಿರಸ್ಸಿನ ಕೆಳಗೆ ಸೊಲಗವನ್ನು ಹಿಡಿದುಕೊಂಡಿದ್ದು, ತನ್ನ ಎಡಗೈಯಲ್ಲಿ ಒಂದು ಸುಂದರವಾದ ತಾಳಪತ್ರವನ್ನು ಧರಿಸಿ ದರ್ಶನವನ್ನು ನೀಡಿದನಂತೆ ಆದ್ದರಿಂದ ಈ ಕ್ಷೇತ್ರದಲ್ಲಿ ಇಂದಿಗೂ ಭಗವಂತನ ಆ ಸ್ವರೂಪವನ್ನೇ ನೋಡಬಹುದಾಗಿದೆ. ಇದೇ ತಿರುವಾದನೂರು ಕ್ಷೇತ್ರದ ಮಹಿಮಾವೈಭವವಾಗಿದೆ.

ಭಗವಂತನ ಮೂಲಮೂರ್ತಿ ಆಂಡಳುಕ್ಕು ಮೆಯ್ಯೆನ್ ಉತ್ಸವಮೂರ್ತಿ "ಅಳಗಿಯಣವಾಳನ್ ಎಂದೂ ಕರೆಯುತ್ತಾರೆ. ದೇವಿಯರು, "ರಂಗನಾಯಕಿ'' ಮತ್ತು ಕಮಲವಾಸಿನಿ'' ಉತ್ಸವ ಮೂರ್ತಿಯನ್ನು ಶ್ರೀಚಕ್ರವಾಹಿನಿ, ಭಾರ್ಗವಿ ಎಂದೂ ಕರೆಯುತ್ತಾರೆ. ಅಲ್ಲಿ ಸೂರ್ಯ ಪುಷ್ಕರಿಣಿ, ತೀರ್ಥ ಚಂದ್ರಪುಷ್ಕರಿಣಿ, ಪ್ರಣವಕಾರದ ವಿಮಾನವಿದೆ. ಪುನ್ನಾಗ ವೃಕ್ಷವು ಅಲ್ಲಿನ ಸ್ಥಳದ ವೃಕ್ಷವೆಂದು ಹೆಸರುವಾಸಿಯಾಗಿದೆ. ಅಲ್ಲಿ ಭಗವಂತನು, ಭೃಗುಮಹರ್ಷಿ,ಕಾಮಧೇನು,ಅಗ್ನಿಗೆ ತಿರುಮಂಗೈ ಆಳ್ವಾರರಿಗೆ ಪ್ರತ್ಯಕ್ಷ ದರ್ಶನವನ್ನು ನೀಡಿದ್ದಾನೆ. ತಿರುಮಂಗೈ ಆಳ್ವಾರರಿಂದ ಸ್ವಾಮಿಯು ಪಾಂಚರಾತ್ರ ಆಗಮೋಕ್ತವಾದ ಆರಾಧನೆಗಳನ್ನು ಸ್ವೀಕರಿಸಿದ ಇಂತಹಾ ಸ್ವಾಮಿಯನ್ನು ನಾವು ದರ್ಶಿಸಿಕೊಂಡು, ನಮ್ಮೆಲ್ಲಾ ಸಮಸ್ತ ಪಾಪಗ ಳನ್ನು ಕಳೆದು ಕೊಂಡು ದೇವದೇವನ ಅನುಗ್ರಹಕ್ಕೆ ಪಾತ್ರರಾಗೋಣ.

"ಅನ್ನವನ್ನೆ ಆಡನೂರ್ ಆಂಡಾಳುಕ್ಕು ಮೆಯ್ಯನ್ನೆ''

**ತೆಲುಗುಮೂಲ : ಆಚಾರ್ಯ ಚಕ್ರವರ್ತಿ ರಂಗನಾಥನ್**
**ಕನ್ನಡ ಅನುವಾದ : ಸೂರ್ಯವಂಶಿ**



# ಭಾಗವತ ಪ್ರಿಯ ಶ್ರೀ ವಿಜಯಧ್ವಜ ತೀರ್ಥರು

- ಓಂ ಪ್ರಕಾಶ್‌ಭಟ್
99640 25922

ತುಳುನಾಡು, ಆಚಾರ್ಯಮಧ್ವರು ಅವತರಿಸಿದ ನಾಡು. ತತ್ವವಾದ ಎಂಬ ಹೊಸ ಬೆಳಕನ್ನು ದರ್ಶನ ಪ್ರಪಂಚಕ್ಕೆ ನೀಡಿ, ಉಡುಪಿಯಲ್ಲಿ ಕೃಷ್ಣನನ್ನು ಸಜ್ಜನರ ಉದ್ಧಾರಕ್ಕಾಗಿ ಪ್ರತಿಷ್ಠೆಗೈದರು. ಕೃಷ್ಣ ಪೂಜೆಗೆಂದು ಮತ್ತು ತತ್ತ್ವವಾದದ ತತ್ವಜ್ಞಾನ ಪ್ರಸಾರಕ್ಕಾಗಿ ತಮ್ಮ ಅಷ್ಟ ಯತಿ ಶಿಷ್ಯರನ್ನು ನೇಮಿಸಿದರು. ಈ ಅಷ್ಟ ಯತಿಗಳಲ್ಲಿ ಮೊದಲನೆಯವರು ಶ್ರೀಹೃಷೀಕೇಶ ತೀರ್ಥರಾದರೆ ಕೊನೆಯವರು ಶ್ರೀಅಧೋಕ್ಷಜತೀರ್ಥರು. ಈ ಅಧೋಕ್ಷಜ ತೀರ್ಥ ಪರಂಪರೆಯೇ ಮುಂದೆ ಪೇಜಾವರ ಮಠವೆಂದು ಪ್ರಸಿದ್ಧಿ ಹೊಂದಿತು. ಈ ಪರಂಪರೆಯ ಏಳನೆಯ ಪೀಠಾಧಿಪತಿಗಳೇ ಶ್ರೀವಿಜಯಧ್ವಜ ತೀರ್ಥರು. ಭಾಗವತಕ್ಕೆ ಅದ್ಭುತವಾದ ವ್ಯಾಖ್ಯಾನ ಎನಿಸಿದ 'ಪದರತ್ನಾವಲೀ' ಯನ್ನು ವಾಙ್ಮಯ ಪ್ರಪಂಚಕ್ಕೆ ನೀಡಿದ ಭಾಗವತ ಶಿರೋಮಣಿಗಳು.

ಕಾಸರಗೋಡು ಸಮೀಪದ 'ಕಣ್ವತೀರ್ಥ'ವು ಕಣ್ವ ಮಹರ್ಷಿಗಳ ತಪೋಭೂಮಿಯೂ, ಶ್ರೀಮಧ್ವಾಚಾರ್ಯರಿಗೂ ಪ್ರಿಯವೆನಿಸಿದ ಪವಿತ್ರಸ್ಥಾನವೂ ಆಗಿದೆ. ಶ್ರೀಮಧ್ವರು ಇಲ್ಲಿ ಹಲವಾರು ಲೀಲೆಗಳನ್ನು ಪ್ರಕಟಿಸಿದಂತೆ ಶ್ರೀವಿಜಯಧ್ವಜರೂ ಲೀಲೆಗಳನ್ನು ಪ್ರಕಟಿಸಿದ್ದಾರೆ. ಆದ್ದರಿಂದ ಈ ಕ್ಷೇತ್ರವು ಸಾಧನಾ ಕ್ಷೇತ್ರ ಎನಿಸಿ ಸಜ್ಜನರನ್ನು ಅನುಗ್ರಹಿಸುತ್ತಿದೆ. ಈ ಕ್ಷೇತ್ರ ಸಮುದ್ರದ ಬದಿಯಲ್ಲಿ ಇರುವ ಕ್ಷೇತ್ರ. ಅಶ್ವತ್ಥವೃಕ್ಷ ಇಲ್ಲಿ ಇತ್ತು. ಶ್ರೀವಿಜಯಧ್ವಜರು ಪಾಠ ಪ್ರವಚನದಲ್ಲಿ ನಿರತರಾಗಿರುತ್ತಿದ್ದಾಗ ಸಮುದ್ರದ ಗಾಳಿಯಿಂದ ವೃಕ್ಷದ ಎಲೆಗಳು ವಿಪರೀತ ಶಬ್ದ ಮಾಡಿದಾಗ ಶ್ರೀಪಾದರು ಕೈಯೆತ್ತಿ ಗಾಳಿ ಬೀಸುವುದನ್ನು ನಿಲ್ಲಿಸುತ್ತಿದ್ದರು ಅಶ್ವತ್ಥವೃಕ್ಷ ಸ್ತಬ್ಧವಾಗುತ್ತಿತ್ತು.

ಇಂತಹ ಮಹಾಮಹಿಮರಾದ ಶ್ರೀ ವಿಜಯಧ್ವಜರ ಬಾಲ್ಯ - ವಿದ್ಯಾಭ್ಯಾಸದ ವಿವರಗಳು ಸಿಗುವುದಿಲ್ಲವಾದರೂ ಅವರಿಗೆ ಆಶ್ರಮ ನೀಡಿದವರು ಆರನೆಯವರಾದ ಶ್ರೀಮಹೇಂದ್ರತೀರ್ಥರು. ಜ್ಞಾನಿಗಳೂ, ತಪಸ್ವಿಗಳೂ ಆದ ಶ್ರೀ ವಿಜಯಧ್ವಜತೀರ್ಥರು ಕಣ್ವತೀರ್ಥದಲ್ಲಿ ಸದಾ ಭಗವದ್ಧ್ಯಾನದಲ್ಲಿ ತೊಡಗಿರುತ್ತಿದ್ದರು. ಅದರ ಫಲವೇ ಪ್ರಪ್ರಥಮ, ಸಮಗ್ರ ವೈಷ್ಣವ ವ್ಯಾಖ್ಯಾನೋಪೇತವಾದ "ಪದರತ್ನಾವಲೀ" ಎಂಬ ಭಾಗವತ ವ್ಯಾಖ್ಯಾನ ಗ್ರಂಥ.

ಮಂಗಳೂರಿನ ಸುರತ್ಕಲ್ಲಿನ ಸಮೀಪದ ಚಿತ್ರಾಪುರ ಗ್ರಾಮದಲ್ಲಿರುವ ಚಿತ್ರಾಪುರ ಮಠಕ್ಕೆ ಮೂಲಯತಿಗಳು ಶ್ರೀವಿಜಯಧ್ವಜ ತೀರ್ಥರು. ದೇವಿ ದೇವಾಲಯವನ್ನು ಹೊಂದಿರುವ ಮಠವು ಯತಿ ಪರಂಪರೆಯನ್ನೂ ಹೊಂದಿದೆ. ಈಗಿನ ಪೀಠಾಧಿಪತಿಗಳಾದ ತರುಣ ಯತಿ ಶ್ರೀವಿದ್ಯೆಂದ್ರತೀರ್ಥರು ದೇವಾಲಯ, ಮಠದ ಜೀರ್ಣೋದ್ಧಾರದೊಂದಿಗೆ ಶ್ರೀವಿಜಯಧ್ವಜ ತೀರ್ಥರ ಮೃತ್ತಿಕಾ ವೃಂದಾವನವನ್ನೂ ಸ್ಥಾಪಿಸಿದ್ದಾರೆ. ಇವರೂ ಭಾಗವತದ ವಿಶೇಷ ಅಧ್ಯಯನವನ್ನು ನಡೆಸುತ್ತಿದ್ದಾರೆ. ವಿಜಯಧ್ವಜ ತೀರ್ಥರು ಬರೆದಿರುವ 'ದಶಾವತಾರ ಹರಿಗಾಥಾ' ಎಂಬ ಕೃತಿಯು ಬಹಳ ಪ್ರಸಿದ್ಧಿಯನ್ನು ಹೊಂದಿದೆ. "ಕಮಲಾಕಾಂತಮಖಂಡಿತ ವಿಭವಾಬ್ಧಿಂ ಹರಿಮೀಡೇ" ಎಂಬ ಪಲ್ಲವಿಯೊಂದಿಗೆ ದಶಾವತಾರದ ವರ್ಣನೆಯನ್ನು ಮಾಡಿದ್ದಾರೆ. ಪೇಜಾವರ ಮಠ ಪರಂಪರೆಯ ಶ್ರೀವಿಶ್ವಪತಿ ತೀರ್ಥರು "ವಿಜಯಧ್ವಜಾಷ್ಟಕ" ಎಂಬ ಗುರುಸ್ತುತಿಯನ್ನು ಬರೆದಿದ್ದು ಅದರಲ್ಲಿ ವಿಜಯಧ್ವಜತೀರ್ಥರ ಹಲವಾರು ಸಾಧನೆಗಳನ್ನು ಸ್ತುತಿಸಿದ್ದಾರೆ.

## ಅಪೂರ್ವ ಭಾಗವತ ವ್ಯಾಖ್ಯಾನ ಕೃತಿ 'ಪದರತ್ನಾವಲೀ'

ಬೇರೆ ಬೇರೆ ಪಂಥ, ಮತದವರು ಭಾಗವತಕ್ಕೆ ವ್ಯಾಖ್ಯಾನ ಬರೆದಿದ್ದಾರೆ. ಆದರೂ ಅಲ್ಲಲ್ಲಿ ಹಲವು ಜಟಿಲತೆ, ಮೂಲಕ್ಕೆ ವಿರೋಧ,

ಪಾಠಶುದ್ಧಿ ಮುಂತಾದ ಸಮಸ್ಯೆಗಳು ಇತ್ತು. ಇದಕ್ಕಾಗಿಯೇ ಶ್ರೀಮಧ್ವರು "ಭಾಗವತ ತಾತ್ಪರ್ಯ ನಿರ್ಣಯ"ವನ್ನು ಬರೆದರು. ಆದರೆ ಶ್ರೀಮಧ್ವರು ಪ್ರತಿ ಶ್ಲೋಕಕ್ಕೆ ವ್ಯಾಖ್ಯಾನ ಬರೆಯಲಿಲ್ಲ, ಬದಲಾಗಿ ಭಾಗವತದ ತಾತ್ಪರ್ಯವನ್ನು ನಿರ್ಣಯಿಸಿಕೊಟ್ಟಿದ್ದಾರೆ. ಅಂದರೆ ವ್ಯಾಖ್ಯಾನದ ದಾರಿಯನ್ನು ತೋರಿಸಿದ್ದಾರೆ. ಆ ದಾರಿಯಲ್ಲಿ ನಡೆಯಬೇಕಿತ್ತು. ಹಾಗಾಗಿ ಶ್ರೀಮಧ್ವರ ಭಾಗವತ ತಾತ್ಪರ್ಯ ನಿರ್ಣಯಕ್ಕೆ ಅನುಗುಣವಾಗಿ ಮೂಲ ಭಾಗವತದ ಪ್ರತೀ ಶ್ಲೋಕಕ್ಕೂ ಹೊಸದೊಂದು ವ್ಯಾಖ್ಯಾನ ಶ್ರೀವಿಜಯಧ್ವಜರು ಬರೆದರು. ಈ ಕೃತಿಯಲ್ಲಿ ಪ್ರತೀ ಸ್ಕಂಧಕ್ಕೆ ಇವರು ಬರೆದಿರುವ ಅವತಾರಿಕೆಗಳು ಆ ಭಾಗದ ಸಮಗ್ರ ಸಾರಾಂಶವನ್ನು ಸೆರೆಹಿಡಿದು ಅಧ್ಯಯನಕ್ಕೆ ಬಹಳ ಅನುಕೂಲಕರವಾಗಿದೆ.

ವಿನೂತನ ಶೈಲಿಯ ಪ್ರಾಮಾಣಿಕ ನಿರೂಪಣೆ, ಪ್ರಮಾಣ ಗ್ರಂಥಗಳ ಪರಿಶೀಲನೆ ಮತ್ತು ಉದಾಹರಣೆ, ವೈಶಿಷ್ಟ್ಯಪೂರ್ಣ ಅರ್ಥ ವಿವರಣೆ, ಕ್ಲಿಷ್ಟ ಪದ- ಕ್ಲಿಷ್ಟ ಶ್ಲೋಕಗಳ ಬಗ್ಗೆ ಸಾಕಷ್ಟು ವ್ಯಾಖ್ಯಾನ, ನಿರ್ವಚನ ಕೌಶಲ, ಆಚಾರ - ವಿಚಾರ - ಧರ್ಮ ಅಧ್ಯಾತ್ಮ ಜಿಜ್ಞಾಸೆಗಳು, ನೀತಿ - ಸೂಕ್ತಿಗಳು ಮುಂತಾದವುಗಳನ್ನೊಳಗೊಂಡಿರುವ ಈ ಕೃತಿಯಲ್ಲಿ ಶ್ರೀವಿಜಯಧ್ವಜ ತೀರ್ಥರ ಅಪೂರ್ವ ಸಂಗ್ರಹಣ ಕೌಶಲವನ್ನು ಕಾಣಬಹುದು. ಕೃತಿಯ ಕೊನೆಯಲ್ಲಿ ಶ್ರೀ ವಿಜಯಧ್ವಜರು ಬೇಡಿಕೊಳ್ಳುವ ಮೂರು ವರಗಳು ಸಾಧಕರನ್ನು ಎಚ್ಚರಿಸುತ್ತದೆ. ಅಲ್ಲದೆ ಪ್ರತೀ ಸ್ಕಂಧದ ಆದ್ಯಂತ ಶ್ಲೋಕಗಳಲ್ಲಿ ಅವರು ಮಾಡಿರುವ ಭಗವತ್ ಸ್ತುತಿಗಳು ಮಂತ್ರತುಲ್ಯವಾಗಿದೆ.

**ಆರಾಧನೆ - ಸಂಸ್ಮರಣೆ :**

ಶ್ರೀವಿಜಯಧ್ವಜತೀರ್ಥರ ಕಾರ್ಯಕ್ಷೇತ್ರ ಕಣ್ವತೀರ್ಥ. ಅಲ್ಲಿಯೇ ಅವರು ಅಕ್ಷಯ ತೃತೀಯದಂದು ವೃಂದಾವನಸ್ಥರಾದರು. ಅಲ್ಲಿಯೇ ಅವರ ಭವ್ಯ ವೃಂದಾವನವಿದೆ. ಪ್ರತೀ ವರ್ಷದಲ್ಲಿ ಪೇಜಾವರ ಶ್ರೀಪಾದರ ನೇತೃತ್ವ ದಲ್ಲಿ ಅಕ್ಷಯತೃತೀಯದಂದು ಆರಾಧನೆಯು ವೈಭವದಿಂದ ನಡೆಯುತ್ತದೆ. ಭಾಗವತಪ್ರಿಯರಾದ ಶ್ರೀವಿಜಯಧ್ವಜ ತೀರ್ಥರು ಪ್ರಾತಃಸ್ಮರಣೀಯರು. ಜೀವನದಲ್ಲೊಮ್ಮೆಯಾದರೂ ಕಣ್ವ ತೀರ್ಥಕ್ಕೆ ಭೇಟಿ ಕೊಟ್ಟು ಅವರ ಅನು ಗ್ರಹವನ್ನು ಪಡೆಯಬೇಕು. ಕಡೆಯ ಪಕ್ಷ ಅವರನ್ನು ಈ ಶ್ಲೋಕದೊಂದಿಗೆ ಸ್ಮರಣೆ ಮಾಡೋಣ,

ಅಂಜನಾಸೂನುಸಾನ್ನಿಧ್ಯಾದ್ವಿಜಯೇನ ವಿರಾಜಿತಮ್।
ಅಜಿತಪ್ರೀತಿಜನಕಂ ಭಜೇಽಹಂ ವಿಜಯಧ್ವಜಮ್॥

ಅವರ ಅನುಗ್ರಹ ವಿಶೇಷ ಪಡೆಯಲು ಯಥಾಶಕ್ತಿ ಭಾಗವತದ ಪಾರಾಯಣ, ಅಧ್ಯಯನ ಮಾಡೋಣ. ತನ್ಮೂಲಕ ಭಗವದನುಗ್ರಹವನ್ನೂ ಪಡೆಯೋಣ.

**ಮಾತಾ ರುದ್ರಾಣಾಂ, ದುಹಿತಾ ವಸೂನಾಂ, ಸ್ವಸಾಽದಿತ್ಯಾನಾ ಮಮೃತಸ್ಯ ನಾಭಿಃ।**
**ಪ್ರ ನು ವೋಚಮ್ ಚಿಕುತುಷೇ ಜನಾಯ ಮಾ ಗಾ ಮನಾಗಾ ಮದಿತಂ ವಧಿಷ್ಟ॥**

**(ಋಗ್ವೇದ)**

**ಗೋವು ರುದ್ರರಿಗೆ ತಾಯಿ, ವಸುಗಳಿಗೆ ಮಗಳು, ಆದಿತ್ಯರಿಗೆ ಸೋದರಿ, ಸರ್ವ ಮಾನವರಿಗೆ ಅಮೃತದಂತಹ ಹಾಲನ್ನು ನೀಡಿ ಪೋಷಿಸುತ್ತಿರುವ ತಾಯಿ, ಅಂತಹ ಗೋವನ್ನು ನಮ್ಮ ಭಾರತೀಯ ಸಂಸ್ಕೃತಿ, ಸಂಪ್ರದಾಯಗಳಲ್ಲಿ ತಾಯಿಯೆಂದೂ, ಸರ್ವದೇವತಾ ಸ್ವರೂಪಿಣಿಯೆಂದು ಆರಾಧಿಸುತ್ತಿದ್ದೇವೆ.**

# ಗೋಮಾತೆ

**ದೇವತಾ ಸ್ವರೂಪಳಾದ ಮಹಾಲಕ್ಷ್ಮಿ ಗೋವಿನಲ್ಲಿ ಸ್ಥಿತಳಾಗಿರುವಳೆಂದು ಹಿಂದೂಗಳ ನಂಬಿಕೆ. ಗೋವಿನ ಪಂಚಗವ್ಯಗಳಾದ ಹಾಲು, ಮೊಸರು, ತುಪ್ಪಗಳನ್ನು ಆಹಾರ ದ್ರವ್ಯಗಳಾಗಿಯೂ, ಮೂತ್ರ ಮತ್ತು ಸಗಣಿಯನ್ನುಆರೋಗ್ಯಕಾರಕಗಳಾಗಿಯೂ ಉಪಯೋಗಿಸಲಾಗುತ್ತದೆ.**

**ಶ್ರೀವಿಷ್ಣುವು ಗೋವನ್ನು ಮಹಾಲಕ್ಷ್ಮೀ ರೂಪವಾಗಿಯೂ, ಮಹಾದ್ಭಾಗವತ ದೇವತೆಯಾಗಿಯೂ ಈ ಭೂಲೋಕಕ್ಕೆ ಅನುಗ್ರಹಿಸಿದ್ದಾರೆ.**





# ಚಿತ್ರಾಪೂರ್ಣಿಮಾ ಕರಗದ ಆಚರಣೆ

- ಡಾ॥ಗುರುರಾಜ ಪೋಶೆಟ್ಟಿಹಳ್ಳಿ 9739 369621



ಚೈತ್ರ ಪೂರ್ಣಿಮಾ ಹಿಂದೂ ಸಮುದಾಯಕ್ಕೆ ಅತ್ಯಂತ ಪವಿತ್ರ ಪೂರ್ಣಿಮಾ.ಇದು ಹಿಂದೂ ಪಂಚಾಂಗದ ಪ್ರಕಾರ ಮೊದಲ ಮಾಸದ ಮೊದಲ ಪೌರ್ಣಿಮೆ. ಚೈತ್ರ ಮಾಸವು ಚಾಂದ್ರಮಾನ ಪದ್ಧತಿಯ ಪ್ರಕಾರ ಪ್ರಥಮ ತಿಂಗಳು.ಇಂಗ್ಲೀಷ್ ತಿಂಗಳುಗಳ ಪ್ರಕಾರ ಏಪ್ರಿಲ್ ತಿಂಗಳಲ್ಲಿ ಬರುವ ಈ ಹುಣ್ಣಿಮೆಯು ಯುಗಾದಿಯ ನಂತರ ಬರುತ್ತದೆ. ವಸಂತ ಚೈತ ನ್ಯದ ಫಲ್ಲವಿತ ಪ್ರಕೃತಿಯಲ್ಲೇ ಅರಳುವ ಚೈತ್ರದ ಪೌರ್ಣಿಮೆ ತನ್ನದೇ ಆದ ಮಹತ್ವ ಹೊಂದಿದೆ. ಇದನ್ನು ಕರಗದ ಹುಣ್ಣಿಮೆ, ದವನದ ಹುಣ್ಣಿಮೆ, ಚಿತ್ರಾ ಪೂರ್ಣಿಮಾ ಎಂದೂ ಕರೆಯುತ್ತಾರೆ. ಈ ಪೌರ್ಣಿಮೆಯ ವಿಶೇಷವೆಂದರೆ ಈ ತುಂಬು ತಿಂಗಳಿನ ಮಹಿಮಾತೀತ ದಿನದಂದು ಅನೇಕ ಮಹಿಮಾತೀತರ ಜನ್ಮವಾಗಿದೆ. ಅಕ್ಕಮಹಾದೇವಿಯ ಜನನ, ರಾಮಬಂಟ-ರಾಮಭಕ್ತ ಹಾಗೂ ರಾಮಕಥಾ ಇರುವ ತನಕ ತಾನು ಬದುಕಿರಬೇಕೆಂದು ವರ ಪಡೆದ ಚಿರಂಜೀವಿ ಹನುಮಂತನ ಜನನ, ಭೂಲೋಕದ ಜನರ ಪಾಪ ಪುಣ್ಯಗಳ ಲೆಕ್ಕ ಇಡುವ ಚಿತ್ರಗುಪ್ತನ ಜನನ, ದೇವರ ಸೇನಾಧಿಪತಿ ಇಂದ್ರನ ಆರಾಧನೆ, ಸತ್ಯನಾರಾಯಣನ ಆರಾಧನೆ. ಇನ್ನೂ ಅನೇಕ ದೇವಾನುದೇವತೆಗಳ ಜನ-ಜಯಂತಿ-ಆರಾಧನೆಗೆ ಸಾಕ್ಷಿಯಾಗಿ ಭಯ ಭಕ್ತಿಯಿಂದ ಆಚರಿಸಲ್ಪಡುವ ಹುಣ್ಣಿಮೆಯೇ ಚೈತ್ರದ ಹುಣ್ಣಿಮೆ. ಅದಕ್ಕೆ ಈ ಹುಣ್ಣಿಮೆಯ ದಿನವನ್ನು ''ದೊಡ್ಡ ದಿನ''ಎಂದು ಕರೆಯುತ್ತಾರೆ.

## ಕರಗದ ಹುಣ್ಣಿಮೆ

ಚೈತ್ರದ ಹುಣ್ಣಿಮೆಗೆ ಇನ್ನೊಂದು ಹೆಸರು ''ಕರಗದ ಹುಣ್ಣಿಮೆ'' ಈ ದಿನ ಕರ್ನಾಟಕದ ಹಲವೆಡೆ ಕರಗದ ಉತ್ಸವಗಳು ನಡೆಯುತ್ತವೆ.ಇವುಗಳಲ್ಲಿ ಬೆಂಗಳೂರಿನ ''ಧರ್ಮರಾಯಸ್ವಾಮಿ ಕರಗ'' ಅತ್ಯಂತ ಪ್ರಸಿದ್ಧವಾದುದು.ಇದು ಬೆಂಗಳೂರು ಕರಗ ಎಂದೇ ಪ್ರಸಿದ್ಧ. ಇದು ರಥೋತ್ಸವಕ್ಕೆ ಪವಿತ್ರ ದಿನವಾಗಿದ್ದು ಈ ಪೌರ್ಣಿಮೆಯೆಂದು ಅನೇಕ ರಥೋತ್ಸವಗಳೂ ನಡೆಯುತ್ತವೆ. ಬೆಂಗಳೂರಿನ ಪರಂಪರಾಗತ ಉತ್ಸವಗಳಲ್ಲಿ ''ಕರಗ'' ಪ್ರಮುಖವಾದುದು. ದ್ವಾಪರ ಯುಗದೊಂದಿಗೆ ಸಂಬಂಧ ಹೊಂದಿರುವ ಬೆಂಗಳೂರಿನ ಕರಗವು ''ಪಾಂಡವರು ಧರ್ಮರಾಜನ ನಾಯಕತ್ವದಲ್ಲಿ ಕುರುಕ್ಷೇತ್ರ ಯುದ್ಧದಲ್ಲಿ ಜಯ ಸಾಧಿಸಿದ ಸಂಕೇತ'' ಎಂದು ಹೇಳುತ್ತಾರೆ. ಈ ಕರಗದ ಅಧಿದೈವ ಸ್ತ್ರೀ ಪುರುಷ ಶಕ್ತಿಗಳ ಸಮ್ಮಿಲನ ಎಂಬ ನಂಬಿಕೆ ಇದೆ. ಅದಕ್ಕೆ ಇದನ್ನು ''ಧರ್ಮರಾಯ-ದ್ರೌಪದಿ ಕರಗ'' ಎಂದೂ ಕರೆಯುತ್ತಾರೆ. ಕರಗದ ಉತ್ಸವ ರಾತ್ರಿಯಲ್ಲಿ ನಡೆಯುತ್ತದೆ. ಇದು ಚೈತ್ರ ಹುಣ್ಣಿಮೆಯಿಂದ ಆರಂಭವಾಗಿ 9 ದಿನಗಳ ಕಾಲ ಮುಂದುವರೆಯುತ್ತದೆ. ಕರಗವು ಕರ್ನಾಟಕದ ಸಾಂಸ್ಕೃತಿಕ ಮತ್ತು ಪರಂಪರೆಯ ಪ್ರತೀಕ. ಇದು ಅತ್ಯಂತ ಪ್ರಾಚೀನ ಉತ್ಸವವಾಗಿದ್ದು, ಚೈತ್ರದ ಹುಣ್ಣಿಮೆಯ ದಿನ ವೈಶಿಷ್ಟ್ಯಪೂರ್ಣವಾಗಿ ನಡೆಯುತ್ತದೆ. ಹೂವಿನಿಂದ ಅಚ್ಛಾದಿತವಾದ ದೇವಿಯ ಮೂರ್ತಿಯನ್ನು ತಲೆಯ ಮೇಲೆ ಹೊತ್ತು ನರ್ತಿಸುವ ಪರಿ ನೋಡಿಯೇ ಅನುಭವಿಸಬೇಕು. ಪ್ರತಿವರ್ಷ ಚೈತ್ರದ ಪೌರ್ಣಿಮೆಯಂದು ಬೆಂಗಳೂರಿನ ಧರ್ಮರಾಯ ಸ್ವಾಮಿ ದೇವಾಲಯದಲ್ಲಿ ಈ ಉತ್ಸವ ನಡೆಯುತ್ತದೆ. ಕರಗದ ಉತ್ಸವದುದ್ದಕ್ಕೂ ಚಿತ್ರಾನ್ನದ ಊಟ ಮಾಡುವುದು ವಿಶೇಷ.

ಚೈತ್ರದ ಹುಣ್ಣಿಮೆಯನ್ನು ''ಮುತ್ತೈದು ಹುಣ್ಣಿಮೆ''ಎಂದು ಕರೆಯುತ್ತಾರೆ. ಕರಗದ ಕೆಲವು ಕಾರ್ಯಕರ್ತರು ಅಂದರೆ ದೇವಿಯನ್ನು ಹೊತ್ತು ನರ್ತಿಸುವವರು ಪರಿಶುದ್ಧರಾಗಿಬೇಕು.ಅದಕ್ಕಾಗಿ ಅವರು ಕರಗದೋತ್ಸವ ಇನ್ನೂ 15 ದಿನ ಮುಂದಿರುವಾಗಲೇ ಮನೆಯನ್ನು ತೊರೆದು ದೇವಸ್ಥಾನದಲ್ಲಿ ವಾಸಿಸತೊಡಗುತ್ತಾರೆ. ಕರಗ ಮುಗಿಯುವವರೆಗೂ ಅವರು ಮನೆಗೆ ಹೋಗುವುದಿಲ್ಲ. ಅವರು ಮನೆಬಿಟ್ಟು ಬರುವಾಗ ತಮ್ಮ ಹೆಂಡಂದಿರ ಕೊರಳಿಲ್ಲಿನ ಮಂಗಳಸೂತ್ರ, ಬಳೆ ತೆಗೆದುಕೊಂಡು ಬರುತ್ತಾರೆ. ಉತ್ಸವ ಮುಗಿ ಯುವವರೆಗೂ ಅವರು ಗಂಡನ ಮುಖವನ್ನಾಗಲಿ, ಉತ್ಸವವನ್ನಾಗಲಿ ನೋಡುವ ಹಾಗಿಲ್ಲ. ನಂತರ ಉತ್ಸವ ಮುಗಿದ ಮೇಲೆ ತಮ್ಮ ಗಂಡಂದಿರಿಂದ ತಾಳಿ ಕಟ್ಟಿಸಿಕೊಳ್ಳುತ್ತಾರೆ.ಅದಕ್ಕಾಗಿಯೇ ಈ ಉತ್ಸವದಲ್ಲಿ ಮುತ್ತೈದೆಯರಿಗೆ ಕುಂಕುಮ,ಅರಿಶಿನ,ಹೂವು ಮುಂತಾದ ಮಂಗಳದ್ರವ್ಯಗಳನ್ನು ದಾನ ಮಾಡುವ ಪದ್ಧತಿ ಇದೆ.ಆ ಕಾರಣ ಇದನ್ನು ಮುತ್ತೈದೆ ಹುಣ್ಣಿಮೆ ಎಂದು ಕರೆಯುತ್ತಾರೆ.

## ಚಿತ್ರಾ ಪೂರ್ಣಿಮಾ

ಚೈತ್ರ ಪೂರ್ಣಿಮಾ ಚಿತ್ರಗುಪ್ತನ ಜನ್ಮದಿನ. ಚಿತ್ರಗುಪ್ತ ನಾವು ನಮ್ಮ ಬದುಕಿನುದ್ದಕ್ಕೂ ಮಾಡಿದ ಪಾಪ - ಪುಣ್ಯಗಳ ಲೆಕ್ಕ ಇಡುವ ಕರಣಿಕದೇವ. ಪಾರ್ವತಿ-ಪರಮೇಶ್ವರರ ಮುದ್ದಿನ ಮಗ. ಚೈತ್ರ ಪೂರ್ಣಿಮಾದಂದು ತಾಯಿ ಪಾರ್ವತಿ ಮನೆಯಂಗಳದಲ್ಲಿ ಸುಂದರ ಚಿತ್ರ ಬಿಡಿಸಿ,ಅದನ್ನೇ ತದೇಕ ಚಿತ್ತದಿಂದ ನೋಡುತ್ತ ನಿಂತಿದ್ದಳು. ಆಗ ಅಲ್ಲಿ ಶಿವ ಬರುತ್ತಾನೆ. ಶಿವೆಯು ಮಂತ್ರ ಮುಗ್ಧಳಾಗಿ ಚಿತ್ರ ನೋಡುತ್ತಿರುವುದನ್ನು ಕಂಡು, ಆ ಚಿತ್ರಕ್ಕೆ ಜೀವ ತುಂಬಿದ ಶಿವನ ಆ ಕಾರ್ಯ ಶಿವೆಗೆ ಖುಷಿ ನೀಡಿತು. ಆದರೆ ಜೀವ ಬಂದ ತಕ್ಷಣವೇ ಅದು ಅಲ್ಲಿಯೇ ನಿಂತಿದ್ದ ಕಾಮಧೇನುವಿನ ಗರ್ಭಪ್ರವೇಶ ಮಾಡಿ ಅಲ್ಲಿಯೇ ಬೆಳೆದು, ಮುಂದಿನ ಚೈತ್ರ ಪೂರ್ಣಿಮಾ ದಿನ ಜನಿಸುತ್ತದೆ. ಶಿವ-ಪಾರ್ವತಿಯರು ಅವನಿಗೆ 'ಚಿತ್ರಗುಪ್ತ'ನೆಂದು ಹೆಸರಿಟ್ಟು ಬೆಳೆಸಿದರು. ನಂತರ ಚಿತ್ರಗುಪ್ತನು ಯಮಲೋಕದಲ್ಲಿ ಸಾವಿನ ದೇವರು ಯಮಧರ್ಮರಾಯನ ಉಪಅಧಿಕಾರಿಯಾಗಿ ಸೇರಿಕೊಳ್ಳುತ್ತಾನೆ. ಅವನ ಕೆಲಸ ಪ್ರತಿಯೊಬ್ಬ ಮಾನವನ ಪಾಪ-ಪುಣ್ಯಗಳನ್ನು ನಿಖರವಾಗಿ ಎಣಿಸಿ ಲೆಕ್ಕ ಇಡುವುದು. ಸತ್ತ

ಮಾನವನ ಆತ್ಮವನ್ನು ಯಮಧರ್ಮ ಯಮಲೋಕಕ್ಕೆ ಕರೆದೊಯ್ಯುತ್ತಾನೆ. ಅಲ್ಲಿ ಚಿತ್ರಗುಪ್ತನು ಆ ಮನುಷ್ಯನ ಪಾಪ-ಪುಣ್ಯಗಳ ವಿವ ರಣೆ ನೀಡುತ್ತಾನೆ. ಹೆಚ್ಚು ಪುಣ್ಯ ಮಾಡಿದ್ದರೆ ಸ್ವರ್ಗ ಇಲ್ಲವೆ ನರಕ. ಇಂತಹ ಚಿತ್ರಗುಪ್ತನ ಪೂಜೆ ಚೈತ್ರ ಪೂರ್ಣಿಮೆಯಂದು ಭಯ-ಭಕ್ತಿಗಳಿಂದ ನಡೆಯುತ್ತದೆ. ತಮಿಳು ನಾಡಿನ ಕಾಂಚಿಪುರಂದಲ್ಲಿ ಚಿತ್ರಗುಪ್ತನ ದೇವಸ್ಥಾನವಿದೆ. ಅಲ್ಲಿ ಚಿತ್ರಗುಪ್ತನ ಪೂಜೆ ಅತಿ ಸಂಭ್ರಮದಿಂದ ನಡೆಯುತ್ತದೆ. ನಮ್ಮ ಪಾಪ- ಪುಣ್ಯಗಳ ಲೆಕ್ಕ ಇಡುವ ದೇವನಿಗೆ ಭಯ ಭಕ್ತಿಯಿಂದ ಪೂಜೆ ಸಲ್ಲಿಸದಿದ್ದರೆ ಹೇಗೆ ? ಚೈತ್ರ ಪೂರ್ಣಿಮಾಯಂದು ಚಿತ್ರಗ್ತುಪನನ್ನು ಶ್ರದ್ಧಾಪೂರ್ವಕವಾಗಿ ಆರಾಧಿಸಿದರೆ ನಾವು ಮಾಡಿದ ಕೆಲವು ಪಾಪಗಳನ್ನು ಕ್ಷಮಿಸುತ್ತಾನೆ ಎಂಬ ನಂಬಿಕೆಯೂ ಇದೆ.

ಹಿಂದೂ ಪಂಚಾಂಗದ ರೀತ್ಯ ಪ್ರತಿ ಹುಣ್ಣಿಮೆಯ ದಿನ ಇರುವ ನಕ್ಷತ್ರದ ಹೆಸರನ್ನೇ ಆಯಾ ಮಾಸದ ಹೆಸರುಗಳನ್ನಾಗಿ ಕರೆಯುತ್ತಾರೆ. ಚಿತ್ತ ನಕ್ಷತ್ರ ಇರುವ ಹುಣ್ಣಿಮೆಯ ದಿನದ ಹಿಂದಿನ ಹದಿನೈದು ದಿನ ಹಾಗೂ ಮುಂದಿನ ಹದಿನೈದು ದಿನಗಳು ಸೇರಿ ಚೈತ್ರಮಾಸ ಎಂದು ಕರೆಯಲಾಗುತ್ತಿದೆ. ಚೈತ್ರ ಮಾಸದಲ್ಲಿ ಬರುವ ಹುಣ್ಣಿಮೆಯನ್ನು ಚಿತ್ತ ಪೌರ್ಣಿಮೆ ಎನ್ನುತ್ತಾರೆ. ಈ ಚಿತ್ತ ಪೌರ್ಣಿಮಾ ದಿನದಂದೇ ಬೆಂಗಳೂರಿನಲ್ಲಿ ಬೃಹತ್ ಪ್ರಮಾಣದಲ್ಲಿ ಕರಗ ಉತ್ಸವವನ್ನು ಮಾಡುತ್ತಾರೆ. ಮನುಜನ ಮನಸ್ಸಿನಲ್ಲಿ ಅಚ್ಚಳಿಯದೆ ಅರ್ಥಾತ್ ಆ ನೆನಪುಗಳು ಕರಗದೆ ಇರಲಿ ಎಂತಲೂ ಬಹು ವಿಜೃಂಭಣೆಯಿಂದ ಕರಗದ ಉತ್ಸವವನ್ನು ಆಚರಿಸಲಾಗುತ್ತದೆ. ಈ ಹುಣ್ಣಿಮೆಯನ್ನು ಅಕ್ಕನ ಹುಣ್ಣಿಮೆ, ದವನದ ಹುಣ್ಣಿಮೆಯೆಂತಲೂ ಕರೆಯುತ್ತಾರೆ. ಈ ದಿನವೇ ಶ್ರೀ ಹನು ಮಂತನು ಅಂಜನಾದೇವಿಯಲ್ಲಿ ಅವತರಿಸಿದ ದಿನವಾಗಿದ್ದು ಈ ದಿನ ಹನು ಮಜಯಂತಿಯನ್ನು ಆಚರಿಸಿ ವಿಶೇಷ ಪೂಜೆಗಳಿಂದ ಹನುಮಂತನುನ್ನು ಆರಾಧಿಸುತ್ತಾರೆ.

ಪರಮೇಶ್ವರನಿಂದ ದಮನ ಹೊಂದಿದ ಕಾಮನ ಭಸ್ಮದಿಂದ ಜನ್ಮ ತಾಳಿ, ರತಿಯ ಕಣ್ಣೀರಿನಿಂದ ಬೆಳೆದದ್ದು ದವನ. ಈ ದವನದಿಂದ ಫಾಲ್ಗುಣ ಮಾಸದಿಂದ ಆರಂಭಿಸಿ ಚೈತ್ರಮಾಸದ ಪೂರ್ಣಿಮಾ ತಿಥಿಯವರೆಗೂ ದೇವತೆ ಗಳನ್ನು ಪೂಜಿಸಿದರೆ ಪರಮೇಶ್ವರ ಸಂತುಷ್ಟರಾಗುವರೆಂದು ವರವಿದೆ.

'ಪೂರ್ಣಿಮಾ ಸರ್ವದೇವನಾಂ, ಶ್ರೇಷ್ಠಾ ದಮನಾರ್ಪಣೇ ಎನ್ನುವಂತೆ ಪೂರ್ಣಿಮ ದಿನದಂದು ಸಮಸ್ತ ದೇವತೆಗಳಿಗೂ ದವನದಿಂದ ಪೂಜಿಸು ವುದು ಅತಿಪ್ರಿಯವಾಗಿದೆ. ಚೈತ್ರ ಪೂರ್ಣಿಮೆಯು ಚಿತ್ತಾ ನಕ್ಷತ್ರದಿಂದ ಯುಕ್ತ ವಾಗಿದ್ದರೆ ಬ್ರಾಹ್ಮಣರಿಗೆ ಚಿತ್ರಾನ್ನ ಪ್ರಧಾನವಾಗಿರುವ ಭೋಜನವನ್ನು ಮಾಡಿಸಿ ಬಣ್ಣ ಬಣ್ಣದ ವಸ್ತ್ರಗಳನ್ನು (ಚಿತ್ರ ವಿಚಿತ್ರವಾದ) ದಾನ ಮಾಡ ಬೇಕು. ಇದರಿಂದ ಸೌಭಾಗ್ಯವುಂಟಾಗುತ್ತದೆ. ದಾರಿದ್ರ್ಯನಾಶವಾಗುವುದು ಮೊಸರನ್ನು ಕೂಡ ಅಷ್ಟೇ ವಿಶೇಷತೆಯಿಂದ ಕೂಡಿದೆ. ಈ ಬಾರಿ ಚಿತ್ತ ನಕ್ಷತ್ರವು ಹುಣ್ಣಿಮೆಯಂದೇ ಇದ್ದು ಆ ದಿನ ಮಾಡುವ ಪೂಜೆ ದಾನ ಸ್ನಾನಾದಿಗಳು ಅತ್ಯಂತ ಫಲಪ್ರದವಾಗಿದ್ದು, ಫಲವು ಹತ್ತು ಪಟ್ಟು ಹೆಚ್ಚಿನದಾಗಿರುತ್ತದೆ.

ಚೈತ್ರ ಪೌರ್ಣಿಮೆಯು ಮನ್ವಾದಿಯೂ ಆಗಿದ್ದು ಇಂದು ಚಂದ್ರನ ಪ್ರೀತಿಗಾಗಿ ಹಸಿ ಧಾನ್ಯಗಳನ್ನು ಜಲಪೂರ್ಣವಾದ ಕುಂಭವನ್ನು ದಾನ ಮಾಡುವುದು ಒಳಿತು. ಶ್ರೀಕೃಷ್ಣ ಪರಮಾತ್ಮನು ಚೈತ್ರ ಮಾಸದ ಪೂರ್ಣಿಮೆ ಯಲ್ಲಿಯೇ ರಾಸಕ್ರೀಡೆ ಮಾಡಿದ್ದು ಎಂದು ಪುರಾಣಗಳಿಂದ ತಿಳಿದು ಬರುವುದು.

ಯಾವುದೇ ಮಾಸದ ಕಡೆಯ ಮೂರು ದಿನಗಳು ಅಂದರೆ ತ್ರಯೋ ದಶಿ,ಚತುರ್ದಶಿ,ಹುಣ್ಣಿಮೆಗಳು (ಹುಣ್ಣಿಮೆಯಿಂದ ಮತ್ತೊಂದು ಹುಣ್ಣಿಮೆ ಯವರೆಗೆ ಮಾಸವನ್ನು ಪರಿಗಣಿಸಲಾಗಿದೆ) ಅಂತ್ಯ ಪುಷ್ಕರಿಣಿ ಎನಿಸುತ್ತದೆ. ಫಾಲ್ಗುಣ ಮಾಸ ಪೌರ್ಣಿಮಿಯಿಂದ ಚೈತ್ರ ಪೌರ್ಣಿಮೆವರೆಗೂ ಒಂದು ತಿಂಗಳು ಚೈತ್ರಮಾಸ ಸ್ನಾನವನ್ನು ಮಾಡಬೇಕು. ಮಾಸ ಪೂರ್ತಿಯಾಗಿ ನದ್ಯಾ ದಿಗಳಲ್ಲಿ ಸ್ನಾನ ಮಾಡಲು ಅಗತ್ಯವಾದಾಗ ಅಂತ್ಯ ಪುಷ್ಕರಣೆಯಲ್ಲಾದರೂ 3 ದಿನಗಳು ನದಿಗಳಲ್ಲಿ ಸ್ನಾನ ಮಾಡಬೇಕು. ಇದರಿಂದ ಗಂಗಾಧಿ ತೀರ್ಥಗಳ ಸ್ನಾನ ಮಾಡಿದಂತೆ ಆಗುವುದು. ಚೈತ್ರ ಮಾಸದಲ್ಲಿಯೇ ಸೂರ್ಯನ ತಾಪವು ಆರಂಭವಾಗುತ್ತದೆ.ಇತರ ಮಾಸಗಳಿಗಿಂತಲೂ ಈ ಮಾಸದಲ್ಲಿಯೇ ಬಾಯಾ ರಿಕೆ ಅಧಿಕವಾಗುವುದರಿಂದ, ಬಾಯಾರಿಕೆಯನ್ನು ಹೋಗಲಾಡಿಸಲು ನೀರನ್ನು ಯಾತ್ರಿಕರಿಗೆ ಕೊಡುವುದರಿಂದಲೂ ಪುಣ್ಯ ಸಂಚಯವನ್ನು ಮಾಡಿ ಕೊಳ್ಳಬಹುದಾಗಿದೆ.

### ಹನುಮಾನ್ ಜಯಂತಿ

ಚೈತ್ರ ಮಾಸದ ಇನ್ನೊಂದು ಜನಪ್ರಿಯ ಹಾಗೂ ಭಕ್ತಿ ಪೂರ್ವಕ ಹಬ್ಬ ಎಂದರೆ ಶ್ರೀರಾಮಭಕ್ತ ಹನುಮಾನನ ಜಯಂತಿ. ರಾಮಬಂಟ ಹನುಮಂತ ನೆಂದರೆ ಎಲ್ಲರಿಗೂ ವಿಶ್ವಾಸ, ಪ್ರೀತಿ, ಭಯ, ಭಕ್ತಿ, ಹನುಮಂತ, ಮಾರುತಿ, ಆಂಜನೇಯ, ವಾಯುಪುತ್ರ, ಕೇಸರಿಪುತ್ರ, ಪ್ರಾಣದೇವರು ಇತ್ಯಾದಿ ಹೆಸರು ಗಳಿಂದ ಅಸಂಖ್ಯ ಭಕ್ತರ ಮನದಲ್ಲಿ ವಿರಾಜಮಾನವಾಗಿರುವ ಆಂಜನೇಯ ಜಯಂತಿ ಚೈತ್ರ ಪೂರ್ಣಿಮೆಯೆಂದು ಎನ್ನುವುದೇ ಆ ಹುಣ್ಣಿಮೆಗೊಂದು ಹಿರಿಮೆ. ಹನುಮಂತನ ದೈವನಾದ ಪುರುಷೋತ್ತಮ ಶ್ರೀರಾಮಚಂದ್ರನ ಶ್ರೀರಾಮ ನವಮಿ ಚೈತ್ರ ಮಾಸದಲ್ಲಿ ಆಚರಿಸುವ ಪ್ರಧಾನ ಭಕ್ತಿರಸದ ಹಬ್ಬ ವಾದರೆ, ಅವನ ಭಕ್ತನಾದ ಹನುಮಂತನ ಜಯಂತಿಯೂ ಚೈತ್ರದ ಪೂರ್ಣಿ ಮೆಯಂದು ನಡೆಯುವುದು ವಿಶೇಷ. ಅದರಲ್ಲೂ ಹನುಮಂತ ಗ್ರಾಮೀಣರ ಅಚ್ಚುಮೆಚ್ಚಿನ ದೇವರು. ಹನುಮನ ಗುಡಿಗಳಿಲ್ಲದ ಗ್ರಾಮಗಳನ್ನು ನೆನಪಿಸಿ ಕೊಳ್ಳುವುದೇ ಕಷ್ಟ. ಹನುಮಂತ ಶೌರ್ಯ- ಧೈರ್ಯಗಳ ಮೂರ್ತಿ. ಭಕ್ತಿ- ಶಕ್ತಿಗಳ ಸಂಗಮ. ವೀರತ್ವ-ವಿನಯಗಳ ಸಾಕಾರಮೂರ್ತಿ. ರುದ್ರಾಂಶ ಸಂಭೂತ ನ್ಯಾಯ -ನೀತಿಗಳ ನೆಲೆಗಟ್ಟು ವಾನರರಾಜ ಸುಗ್ರೀವ ಸೇನಾಪತಿ- ಅಪ್ತ ಮಿತ್ರ, ಅವನು ಒಂದೆಡೆ ಶೌರ್ಯದ ಸಿರಿ, ಇನ್ನೊಂದೆಡೆ ಭಕ್ತಿಯ ಝರಿ ಚೈತ್ರ ಪೌರ್ಣಿಮೆಯ ಉದಯ ಕಾಲದಲ್ಲಿ ಜನಿಸಿದ ಹನುಮಂತ ಅದೇ ಆಗ ಆಗಸದಲ್ಲಿ ಉದಯವಾಗುತ್ತಿರುವ ಕೆಂಪಾದ ಸೂರ್ಯನನ್ನು ಹಣ್ಣೆಂದು ಭ್ರಮಿಸಿ, ಸೂರ್ಯಮಂಡಲಕ್ಕೆ ಹಾರಿ ಸೂರ್ಯನ ಮೆಚ್ಚುಗೆಗೆ ಪಾತ್ರನಾಗಿ, ಅವನಿಂದ ವರ ಪಡೆದು ವಜ್ರದೇಹಿಯಾದವ. ಭೂಲೋಕದಲ್ಲಿ ರಾಮನ ಸ್ಮರಣೆ ಇರುವ ತನಕ ತಾನು ಬದುಕಿರಬೇಕೆಂಬ ವರ ಪಡೆದು ಕಲಿ ಕಾಲದ ಜೀವಂತ ದೇವರೆನಿಸಿದವ. ಸಮುದ್ರಲಂಘನ, ಸೀತಾನ್ವೇಷಣ, ರಾಕ್ಷಸ ನಿಗ್ರಹ, ಲಂಕಾದಹನ, ಪರ್ವತಾರೋಹಣಗಳಲ್ಲೆಲ್ಲ ಅಪ್ರತಿಮನಾಗಿದ್ದು, ದೇವಾನು ದೇವತೆಗಳಿಂದ ವರ ಪಡೆದು ಬಲಾಢ್ಯನಾಗದ್ದಿರೂ ಎಂದೂ ಅಹಂ ಕಾರ ತೋರಿದವನಲ್ಲ. ಇಷ್ಟಿದ್ದರೂ ತನ್ನನ್ನು ರಾಮನದಾಸನೆಂದು ಕರೆ ಯಿಸಿಕೊಳ್ಳುವುದರಲ್ಲೇ ಸುಖಿಸುವ ದಾಸಶ್ರೇಷ್ಠ ವಾನರರಾಜ ಸುಗ್ರೀವನ ಸಚಿವ ಹಾಗೂ ಆಪ್ತನಾದ ಕೇಸರಿ ಎಂಬ ವಾನರನಾಯಕ ಮತ್ತು ಅಂಜನಾ ದೇವಿಯ ಪುತ್ರ. ಕೃತಯುಗದ ಹನುಮಂತ ಮುಂದೆ ದ್ವಾಪರಯುಗದಲ್ಲಿ ಪಾಂಡು ಪುತ್ರರಾದ ಅರ್ಜುನ, ಭೀಮರಿಗೂ ಸಹಾಯ ಮಾಡಿದ ಉಲ್ಲೇಖ ಮಹಾಭಾರದಲ್ಲಿ ಸಿಗುತ್ತವೆ. ರಾಮನ ಸ್ಮರಣೆಯೊಂದಿಗೆ ಹನುಮಂತ ಈಗಲೂ ಜೀವಂತ ಆಗಿದ್ದಾನೆ ಎಂದೇ ನಂಬಲಾಗಿದೆ. ಅದಕ್ಕೆ ಹನುಮಂತ ಕಲಿಯುಗದ 'ಜಾಗೃತ ದೇವರು' ಎಂದು ಹೇಳುತ್ತಾರೆ. ಎಲ್ಲ ಹದಿನೆಂಟೂ ಪುರಾಣಗಳು ರಾಮಭಕ್ತ ಹನುಮಂತನ ಗುಣಗಾನ ಮಾಡಿವೆ. ಚೈತ್ರ ಪೂರ್ಣಿಮಾ ಈ ಎಲ್ಲ ರೀತಿಗಳಿಂದ ಒಂದು ವಿಶೇಷ ಹುಣ್ಣಿಮೆ ಆಗಿದೆ.



ಏಪ್ರಿಲ್ ತಿಂಗಳ

# ರಾಶಿ ಫಲಗಳು



ಮೂಲ- ಬ್ರಹ್ಮಶ್ರೀ ತಂಗಿರಾಲ ವೆಂಕಟಕೃಷ್ಣ ಪೂರ್ಣಪ್ರಸಾದ್ ಸಿದ್ಧಾಂತಿ
ಅನುವಾದ- ಕೆ.ಎನ್.ಎಸ್

**ಮೇಷ**

ತಿಳುವಳಿಕೆ, ಪ್ರತಿಭೆ ತಕ್ಕ ಅವಕಾಶಗಳನ್ನು ಬಳಸಿಕೊಂಡು ಅಂದುಕೊಂಡದ್ದನ್ನು ಸಾಧಿಸುತ್ತೀರಿ. ಶುಭಕಾರ್ಯಗಳಿಗಾಗಿ ಧನವ್ಯಯ ಮಂಗಳಕರವಾದ ವಾತಾವರಣ, ಉನ್ನತ ಉದ್ಯೋಗದಲ್ಲಿ ಬಡ್ತಿ, ಕುಟುಂಬ ವಿಷಯಗಳು ಪ್ರೋತ್ಸಾಹಕರವಾಗಿದ್ದು ಸಂತಾನವೃದ್ದಿಯಾಗಲಿದೆ. ಸುಬ್ರಮಣ್ಯ ಆರಾಧನೆಯಿಂದ ಆದಾಯ ಗೌರವಗಳು ಹೆಚ್ಚಳವಾಗಲಿವೆ.

**ವೃಷಭ**

ಈ ರಾಶಿಯವರಿಗೆ ಜನ್ಮರಾಶಿಯಲ್ಲಿ ಶುಕ್ರಸಂಚಾರ ಪ್ರಭಾವದಿಂದ ಅನುಕೂಲ. ಕವಿತ್ವ ಲೇಖಕ ವಿದ್ಯೆಗಳಲ್ಲಿ ರಾರಾಜಿಸುವಿರಿ. ಕಲಾ ಪೋಷಣೆ, ಶೃಂಗಾರ ಮೊದಲಾದ ವಿಷಯಗಳಲ್ಲಿ ಮುನ್ನಡೆ ಸೃಜನಾತ್ಮಕ ಪ್ರವಾಹ ಉಕ್ಕಿ ಓದಿನ ವಿಷಯದಲ್ಲಿ ವಿದ್ಯಾರ್ಥಿಗಳು ಉತ್ತಮವಾಗಿ ಮುನ್ನುಗ್ಗುವಿರಿ. ಅನೇಕ ವಿಧಾನಗಲ್ಲಿ ಆದಾಯ ಹೆಚ್ಚಳವಾಗಲಿದೆ ಭೂ ಯೋಗ ಒದಗಿ ಬರಲಿದೆ.

**ಮಿಥುನ**

ಸಂತೃಪ್ತಿಕರವಾದ ಆದಾಯವಿರಲಿದೆ . ನೂತನ ವ್ಯವಹಾರಗಳಿಗಾಗಿ ಹಣ ಹೂಡಿಕೆ ಸಲ್ಲದು. ದೇಹದಲ್ಲಿ ಸೋಂಕು ಪೀಡೆಯುಂಟಾಗಲಿವೆ. ನಿಮ್ಮ ಸಂಪದಗಳು ವೃದ್ಧಿಯಾಗಲಿವೆ. ಕೀರ್ತಿ ವಿಸ್ತಾರಗೊಳ್ಳಲಿದೆ. ಸ್ನೇಹಿತರಿಂದ ಪರಿಹಾರ ಸಿಗುತ್ತದೆ ಮತ್ತು ಎಲ್ಲಾ ಪ್ರಯತ್ನಗಳಲ್ಲಿ ವಿಜಯ ಹೊಂದುವಿರಿ.

**ಕರ್ಕಾಟಕ**

ಶುಭಕಾರ್ಯಕ್ಕೆ ಶ್ರೀಕಾರ ಹಾಡಲಿದ್ದೀರಿ. ಆರ್ಥಿಕ ಕೊರತೆಗಳನ್ನು ತುಂಬಿಲಿದ್ದೀರಿ. ಆಧ್ಯಾತ್ಮದಿಂದ ಹಾಗೂ ಆನಂದದಿಂದ ಜೀವನ ಸಾಗಲಿದೆ. ನೀವು ವೃತ್ತಿ ವ್ಯವಹಾರಗಳಲ್ಲಿ ಅಧಿಕ ಆದಾಯ ಹಾಗೂ ಪ್ರಗತಿಯನ್ನು ಹೊಂದುತ್ತೀರಿ. ಸಂಗಾತಿಯೊಂದಿಗೆ ನಿಮ್ಮ ಸಂಬಂಧವು ಸಹ ಮಧುರವಾಗಿರಲಿದೆ. ನಿಮ್ಮ ಸಾಮಾಜಿಕ ಸ್ಥಾನಮಾನಗಳು ಸಹಾ ಉತ್ತಮ ಮಟ್ಟಕ್ಕೇರಲಿವೆ.

**ಸಿಂಹ**

ನಿಂದೆ - ಆರೋಪಗಳು ಬರುವ ಸಂಭವವಿದೆ. ಆರ್ಥಿಕವಾಗಿಯೂ ಸ್ವಲ್ಪ ತೊಂದರೆಯಿರುವ ಕಾಲವೇ. ಖರ್ಚಗಳನ್ನು ಕಡಿಮೆ ಮಾಡಿದರೆ ಒಳಿತು. ಮಾಸದ ದ್ವಿತೀಯಾರ್ಥ ಅನುಕೂಲ. ಅಭಿವೃದ್ಧಿ ಮತ್ತು ಲಾಭಗಳನ್ನು ಅನುಭವಿಸುವ ಶುಭ ಕಾಲವಾಗಲಿದೆ. ವೃತ್ತಿ ಉದ್ಯೋಗಗಳಲ್ಲಿ ಅನುಕೂಲವಾಗಲಿದೆ. ನಂಬಿದ ಸಿದ್ಧಾಂತಕ್ಕೆ ಕಟ್ಟುಬೀಳುವಿರಿ. ರಾಜಕೀಯದಲ್ಲಿ ಅತ್ಯುನ್ನತವಾಗಿರುವಿರಿ.

**ಕನ್ಯ**

ಸಮಯ ಸಾಮಾನ್ಯಕರವಾಗಿದೆ. ವಾಗ್ವಾದಕ್ಕಿಳಿಯುವುದು ಒಳ್ಳೆಯದಲ್ಲ. ಶತ್ರು ವೃದ್ಧಿಯಾಗಲಿದೆ. ಮನಸ್ಸಿನಲ್ಲಿ ಆರೋಗ್ಯದ ಕುರಿತು ನಿರಂತರವಾದ ಭಯ ಉಂಟಾಗಲಿದೆ. ಇದು ನಿಮ್ಮ ಸಂಗಾತಿಗೆ ತಾಪತ್ರಯ ಇಲ್ಲವೇ ಬೇಸರಕ್ಕೆ ಕಾರಣ ವಾಗಲೂ ಬಹುದು. ವ್ಯವಹಾರ ಪ್ರತಿಬಂಧಗಳಿಂದ ಶಥಪಥವಾಗಲಿದ್ದೀರಿ.

**ತುಲಾ**

ಪ್ರೇಮ ವಿಚಾರಗಳಲ್ಲಿ ಆಸಂತೃಪ್ತಿ. ಉದ್ಯೋಗದಲ್ಲಿರುವ ಅಧಿಕಾರ, ಪ್ರಭುತ್ವಗಳಿಂದ ಸ್ವಲ್ಪ ಮಟ್ಟಿಗೆ ಗುರುತಿಸಿಕೊಳ್ಳಲು ಸಾಧ್ಯವಾಗುತ್ತದೆ. ಕೋರ್ಟಕೇಸುಗಳಲ್ಲಿಯೂ ಸಹ ಶೀರ್ಘ ನಿಮ್ಮ ಪರವಾಗಲಿದೆ. ಈ ಸಮಯದಲ್ಲಿ ನಿಮ್ಮ ಆರೋಗ್ಯವು ಸಹಾ ಉತ್ತಮವಾಗಿರಲಿದೆ.

**ವೃಶ್ಚಿಕ**

ಜೀವನದ ಎಲ್ಲಾ ಮಜಲುಗಳಲ್ಲಿಯೂ ಪ್ರಗತಿಯನ್ನು ಹೊಂದಲಿದ್ದೀರಿ. ಪ್ರೀತಿ ವಿಶ್ವಾಸ ವೃದ್ಧಿಯಾಗಲಿವೆ. ನಿಮ್ಮ ಮಕ್ಕಳು ಸಮಯಕ್ಕೆ ಸರಿಯಾಗಿ ಒದಗಿ ಬರಲಿದ್ದಾರೆ. ಸಮಾಜದಲ್ಲಿ ನಿಮ್ಮ ಸ್ಥಾನಮಾನ ವೃದ್ಧಿಸಲಿದೆ. ಮನೋಕಾಮನೆಗಳು ಪೂರ್ಣಗೊಳ್ಳಲಿವೆ. ನಿಮ್ಮ ಆಧ್ಯಾತ್ಮಿಕ ಆಸಕ್ತಿ ಬೆಳೆಯಲಿದೆ.

**ಧನಸ್ಸು**

ಪ್ರತಿಯೊಂದು ಕಾರ್ಯವನ್ನು ಯುಕ್ತಿಯಿಂದ ಮಾಡುವಿರಿ ಮತ್ತು ಇತರರನ್ನು ಮರ್ಯಾದೆಯಿಂದ ಕಾಣುವಿರಿ. ನಿಮ್ಮ ವ್ಯಾವಹಾರಿಕ ಪಾಲುದಾರರು ನಿಮಗೆ ದ್ರೋಹವೆಸಗುವ ಸಾಧ್ಯತೆಯಿರುವುದರಿಂದ ಜಾಗ್ರತೆಯಿಂದಿರಬೇಕು. ಆದಾಯ ಸ್ವಲ್ಪ ಮಟ್ಟಿಗೆ ತಗ್ಗುವುದು. ಆದ್ದರಿಂದ ನಿಮ್ಮ ಹಣವನ್ನು ಉತ್ತಮವಾಗಿ ನಿರ್ವಹಿಸಿಕೊಳ್ಳಿ ಆರೋಗ್ಯ ಸಾಮಾನ್ಯವಾಗಿರುವುದು.

**ಮಕರ**

ವಿದ್ಯಾರ್ಥಿಗಳಿಗೆ ಇದು ಪ್ರಗತಿಶೀಲ ಸಮಯ. ವ್ಯವಹಾರಸ್ಥರಿಗೆ ಪ್ರಮುಖವಾಗಿ ಲೋಹಗಾರಿಕೆಗಳಲ್ಲಿ ಇರುವವರಿಗೆ ಲಾಭವಾಗಲಿದೆ. ಇದು ಸಂಪಾದಾನುಕೂಲಗಳನ್ನು ಉಂಟುಮಾಡಲಿದೆ. ನಿಮ್ಮ ಕಾರ್ಯತೀವ್ರತೆಯಿಂದ ನೀವು ಬಹು ಪ್ರಶಂಸೆಯನ್ನು ಸಹಾ ಪಡೆಯುತ್ತೀರಿ.

**ಕುಂಭ**

ಇದು ನಿಮ್ಮ ಆದಾಯದ ಉತ್ತಮ ಪ್ರಗತಿಯನ್ನು ಸೂಚಿಸುತ್ತದೆ. ಇದು ನಿಮ್ಮ ಪ್ರಶಾಂತತೆಯನ್ನು ಹೊಂದಲು ಹಾಗೂ ಸ್ನೇಹಿತರು, ಕುಟುಂಬ ಸದಸ್ಯರೊಂದಿಗೆ ಸಂಬಂಧಗಳನ್ನು ಗಟ್ಟಿಗೊಳಿಸುವುದಕ್ಕೆ ಸಕಾಲ ನಿಮ್ಮ ಆಹಾರ ಪದ್ಧತಿಗಳ ಮೇಲೂ ನಿಘಾ ಇರಲಿ. ಕುಟುಂಬದ ವೆಚ್ಚಗಳು ಜಾಸ್ತಿಯಾಗಲಿದೆ.

**ಮೀನ**

ಜನ್ಮರಾಶಿಯಲ್ಲಿನ ರವಿ - ಗುರುವಿನಿಂದಾಗಿ ಅಹಂಭಾವವನ್ನು ಆಕಸ್ಮಿಕವಾಗಿ ಯಾವಾಗಲಾದರೂ ಕೋಪವಾಗಿ ಹೊರಹಾಕಬಲ್ಲದು. ಆದ್ದರಿಂದ ಮಾನವೀಯತೆಯನ್ನು ಹದ್ದು ಬಸ್ತಿನಲ್ಲಿಟ್ಟು ಕೊಂಡೇ ಸ್ನೇಹಿತರೊಂದಿಗೆ, ಕುಟುಂಬ ಸದಸ್ಯರೊಂದಿಗೆ ಉದ್ರಿಕತೆಯಿಂದ ಮಾತನಾಡಬಾರದು ಆದಾಯಕ್ಕೇನು ಕುಂದಿರಲಾರದು.



# ಕನ್ಯಾಕಾಪರಮೇಶ್ವರಿ ಆದಿಶಕ್ತಿ ಅವತಾರ

ಡಾ ॥ ಸೂತ್ರಂ ಕಿರಣ್ ಕುಮಾರ್ ಶಾಸ್ತ್ರಿ
98454 65646

ಕೃತೇತು ರೇಣುಕಾದೇವಿಂ । ತ್ರೇತಾಯಾಂ ಜನಕಾತ್ಮಜಾಂ।
ದ್ವಾಪರೇ ದ್ರೌಪದೀ ದೇವಿಂ। ಕೃತೇ ವಾಸವ ಕನ್ಯಕಾಂ॥
ನಿರಂತರ ಭಜಾಮ್ಯೇವ। ಸಾಕ್ಷಾತ್ರಿಪುರ ಸುಂದರಿಂ।
ಧರ್ಮಾರ್ಥ ಕಾಮ ಮೋಕ್ಷಾರ್ಥಂ ತ್ರಿಲೋಕ ಜನನಿಂ ಶಿವಾಂ॥

ಇತಿಹಾಸವೇ ಹಾಗೆ, ಹೆಣ್ಣಿನ ಔನ್ನತ್ಯವನ್ನು ಪ್ರಬಲವಾದ ನಿದರ್ಶನಗಳ ಮೂಲಕ ಸಾರಿ ಹೇಳುತ್ತದೆ. ತ್ರೇತಾಯುಗದಲ್ಲಿ ಸೀತೇ ರಾವಣನನ್ನು ಧಿಕ್ಕರಿಸಿ, ಮೌನ ಪ್ರತಿಭಟನೆಯಿಂದ ಅಶೋಕ ವನದಲ್ಲಿ ಒಂಟಿಯಾಗಿ ಕಳೆದು,ರಾಮಾಯಣದ ಯುದ್ಧ ಕಾಂಡಕ್ಕೆ ಮುನ್ನುಡಿ ಹಾಡಿ, ಅಸುರ ಸಂಹಾರಕ್ಕೆ ಪ್ರೇರಣೆಯಾದಳು. ದ್ವಾಪರಯುಗದಲ್ಲಿ ದ್ರೌಪದಿ ಛಲ ಮತ್ತು ಹೋರಾಟ ವ್ಯಕ್ತಿತ್ವದಿಂದ ಕುರುಕ್ಷೇತ್ರ ಯುದ್ಧಕ್ಕೆ ನಾಂದಿ ಹಾಡಿ ದುಷ್ಟ ಸಂಹಾರಕ್ಕೆ ಕಾರಣಳಾದಳು.

ವ್ಯಾಪರೋದ್ಯಮವನ್ನೇ ಪ್ರಧಾನ ವೃತ್ತಿಯಾಗಿ ಹೊಂದಿರುವ ಆರ್ಯವೈಶ್ಯರ ಕುಲದೇವತೆ ಕನ್ಯಕಾ ಪರಮೇಶ್ವರಿ.'ವಾಸವಿ' ಲೋಕ ಮಾತೆಯಾಗಿ ಬೆಳಗಿದ ಅನುಪಮ ತ್ಯಾಗಶೀಲೆ, ಸತ್ಯ ಅಹಿಂಸೆಗಳ ಸಾಕಾರ ಮೂರ್ತಿ. ಸ್ಕಂದಪುರಾಣದಲ್ಲಿ ವಾಸವಿ ಚರಿತ್ರೆಯು ಉಲ್ಲೇಖಗೊಂಡಿದೆ. ನ್ಯಾಯ, ನೀತಿ ಧರ್ಮಗಳ ಅಡಿಗಲ್ಲುಗಳ ಮೇಲೆ ನಿಂತ ಹದಿನೆಂಟು ನಗರಗಳ ರಾಜ್ಯ ರಾಜಧಾನಿ ಪೆನುಗೊಂಡ (ಈಗಿನ ಆಂಧ್ರಪ್ರದೇಶ, ಪಶ್ಚಿಮ ಗೋದಾವರಿ ಜಿಲ್ಲೆ) ಸಂಪದ್ಭರಿತ ಪದ್ಮಶಯನ ಪುರದ ರಾಜ ವಿಷ್ಣುವರ್ಧನನ ಸಾಮಂತನಾಗಿದ್ದ, ಕುಬೇರವಂಶದ ಕುಸುಮ ಶ್ರೇಷ್ಠ ಪ್ರಜೆಗಳನ್ನು ಮಕ್ಕಳಂತೆ ನೋಡಿಕೊಳ್ಳುತ್ತಿದ್ದ. ರಾಜನಿಗೆ ಮಕ್ಕಳಿಲ್ಲದ ಕೊರಗು, ವ್ರತ - ನಿಯಮ, ದಾನ-ಧರ್ಮ, ಹರಕೆ-ತೀರ್ಥಯಾತ್ರೆಗಳನ್ನೂ ಮಾಡಿದರೂ ಒಡಲು ಬರಿದು ಕೊನೆಯ ಕುಲ ಗುರು ಭಾಸ್ಕರಾಚಾರ್ಯರ ನೇತೃತ್ವದಲ್ಲಿ ಪುತ್ರಕಾಮೇಷ್ಠಿ ಯಾಗದ ಫಲವಾಗಿ ಅವನ ಪತ್ನಿ ಕುಸುಮಾಂಬೆಯಲ್ಲಿ ವೈಶಾಖಮಾಸದ ಶುಕ್ಲ ಪಕ್ಷದ ದಶಮಿ ಶುಕ್ರವಾರ ಸಂಧ್ಯಾ ಕಾಲದಲ್ಲಿ ವಿಶಿಷ್ಠ ಲಕ್ಷಣದಿಂದ ಕೂಡಿದ 'ವಾಸವಿ ವಿರೂಪಾಕ್ಷ' ರೆಂಬ ಅವಳಿ ಮಕ್ಕಳ ಜನನ.

ವಾಸವಿಗೆ ಚಿಕ್ಕಂದಿನಿಂದಲೇ ಆಧ್ಯಾತ್ಮ ವಿದ್ಯೆಯಲ್ಲಿ ಅಭಿರುಚಿ ಹೆಚ್ಚು. ಲೌಕಿಕವಾದ ಭೋಗ ಭಾಗ್ಯಗಳಲ್ಲಿ ಅನಾಸಕ್ತಿ. ಯೌವ್ವನಕ್ಕೆ ಕಾಲಿರಿಸಿದರೂ ಯಾವುದೇ ರಾಜಕುಮಾರನ ಕೈಹಿಡಿದು ಸುಖ ಸಂಸಾರವನ್ನು ಸಾಗಿರಸುವ ಕನಸು ಕಾಣದೆ ಏಕಾಂತ ವ್ಯಾಕುಲತೆ ಅಲೌಕಿಕ ಚಿಂತನೆಗಳಲ್ಲಿಯೇ ಮುಳುಗಿದಳು. ಹೀಗಿರಲು ಶಿವನು ಕನಸಿನಲ್ಲಿ ಕಂಡು 'ನೀನು ಪಾರ್ವತಿಯ ಅಂಶ. ಮಾನವ ಕುಲಕೋಟಿಯನ್ನು ಧರ್ಮ ಮಾರ್ಗದಲ್ಲಿ ನಡೆಸಲು ಜನಿಸಿದ್ದೀಯೇ. ಅಗ್ನಿ ಮುಖದಿಂದ ಹುಟ್ಟಿದ ನೀನು ಅಗ್ನಿಮುಖದಲ್ಲಿಯೇ ನನ್ನನ್ನು ಸೇರುತ್ತಿಯೇ, ಮಾನವಳಾಗಿ ಜನಿಸಿದ ನಿನ್ನ ಅವತಾರ ಸಾರ್ಥಕವಾಗಬೇಕಾದರೆ ಸಂಶಯಗ್ರಸ್ತ ಜನರ ಮಂಜಿನ ಪೊರೆ ಕಳಚಿ ಸನ್ಮಾರ್ಗದಲ್ಲಿ ನಡೆಸುವ ಹೊಣೆ ನಿನ್ನದು ಎಂದು ಹೇಳಿ ಅಂತರ್ಧಾನನಾಗುತ್ತಾನೆ.

ಒಮ್ಮೆ ವಿಜಯ ಯಾತ್ರೆ ಕೈಗೊಂಡು ಪೆನುಗೊಂಡಕ್ಕೆ ಬರುವ ವಿಷ್ಣು ವರ್ಧನ ಮಹಾರಾಜ, ಅಪರಿಮಿತ ಸೌಂದರ್ಯವತಿ ವಾಸವಿಯನ್ನು ಕಂಡು ಅವಳಲ್ಲಿ ಅನುರಕ್ತನಾಗುತ್ತಾನೆ. ವಾಸವಿಯಷ್ಟು ವಯೋಮಾನದ ಮಗನಿದ್ದರೂ ಅವಳನ್ನು ವಿವಾಹವಾಗಲು ಅಪೇಕ್ಷಿಸುತ್ತಾನೆ. ವರ್ಣಾಂತರ ಮತ್ತೇ ವಯಸ್ಸಿನ ಅಂತರವಿದ್ದುದರಿಂದ ಕುಸುಮ ಶ್ರೇಷ್ಠಿಯು ವಿಷ್ಣುವರ್ಧನನಿಗೆ ಮಗಳನ್ನು ಕೊಡಲು ನಯವಾಗಿ ನಿರಾಕರಿಸುತ್ತಾನೆ.

ವಾಸವಿ ಸಾಮಾನ್ಯ ಕನ್ಯೆಯಲ್ಲಿ ಇಂದ್ರಿಯ ನಿಗ್ರಹದಿಂದ ಮನಸ್ಸು ಅಂತಃಕರಣಗಳೆಲ್ಲಾ ಪರಿಶುದ್ಧವಾಗಿದೆ. ತಪಸ್ಸಿನ ತಾಪದಿಂದ ದೇಹ ಪ್ರಜ್ವಲಿಸುತ್ತದೆ. ಅಹಂಭಾವ ಸಂಪೂರ್ಣವಾಗಿ ಅಸ್ತಮಿಸಿ ಸಾಧಕಳಾಗಿ ಸಿದ್ಧಿ ಹೊಂದಿದವಳನ್ನು ಬಯಸುವುದು ಮಹಾಪಾಪ ಎಂದು ಎಚ್ಚರಿಸುತ್ತಾರೆ. ಆದರೆ ಯಾರು ಎಷ್ಟು ಹೇಳಿದರೂ ಚಕ್ರವರ್ತಿ ಹಠ ಬಿಡಲಿಲ್ಲ.

ವಿಷ್ಣುವರ್ಧನನು ಯುದ್ಧ ಮಾಡಿ, ವಾಸವಿ ವಿವಾಹವಾಗಲು ಸಿದ್ಧತೆ ನಡೆಸಿದನು. ಆಗ ವಾಸವಿ ತೆಗೆದುಕೊಂಡ ನಿರ್ಧಾರ ಮಾತ್ರ ಅಪ್ರತಿಮ, ಯುದ್ಧಕ್ಕೆ ಅವಕಾಶ ಕೊಡಲಿಲ್ಲ. ಕೇವಲ ತನ್ನೊಬ್ಬಳ ಹಿತಕ್ಕಾಗಿ ಮುಗ್ಧ ಜನರ ಪ್ರಾಣ ಹಾನಿಯಾಗುತ್ತದೆ ಮತ್ತೆ ಯುದ್ಧ ನಡೆದರೆ ಅಪಾರ ಹಾನಿಯಾಗುತ್ತದೆ ಎಂದು ನಿರ್ಧರಿಸಿದಳು.

ಆರ್ಥಿಕವಾಗಿ, ಮಾನಸಿಕವಾಗಿ, ದೈಹಿಕವಾಗಿ ಮುಗ್ಧ ಪ್ರಜೆಗಳಿಗೆ ಅಪಾರ ಹಾನಿಯುಂಟು ಮಾಡುವ ಈ ಯುದ್ಧವನ್ನು ಹೇಗಾದರೂ ಮಾಡಿ ತಪ್ಪಿಸಬೇಕೆಂದು ಚಿಂತಿಸಿದ ವಾಸವಿ ಅಗ್ನಿ ಪ್ರವೇಶ ಮಾಡುವ ನಿರ್ಧಾರ ತೆಗೆದುಕೊಂಡಳು. ಅಸಂಖ್ಯಾತ ಜೀವಗಳಿಗೆ ಒಳಿತಾಗುವುದಾದರೆ ತನ್ನ ಆತ್ಮಾಹುತಿಯಾಕಾಗಬಾರದು ಎಂದು ಆ ಷೋಡಷಿ ಯೋಚಿಸಿದಳು.

ವಾಸವಿಯ ಆತ್ಮಸ್ಥೈರ್ಯ ಅನನ್ಯವಾದುದು. ಆತ್ಮ ಮಹಾತ್ಯಾಗಕ್ಕಾಗಿ ಅಗ್ನಿ ಪ್ರವೇಶ ಮಾಡಿದಳು. ಧರ್ಮವನ್ನು ಬಿಟ್ಟುಕೊಟ್ಟು ಐಹಿಕ ಸುಖಭೋಗಗಳನ್ನು ಅನುಭವಿಸುವುದಕ್ಕಿಂತ ಧರ್ಮ ಸಂರಕ್ಷಣೆಗಾಗಿ ನಸುನಗುತ್ತ ಅಗ್ನಿ ದಿವ್ಯದಲ್ಲಿ ಬಂದಾಗ ಆತ್ಮಜ್ಯೋತಿ ಬೆಳೆಸಿದ ಆದಿಶಕ್ತಿಯ ಆದರ್ಶ ಅವತಾರ ಶ್ರೀವಾಸವಿಕನ್ಯಕಾಪರಮೇಶ್ವರಿಯದು ಯುದ್ಧ ಮತ್ತು ರಕ್ತಪಾತವನ್ನು ತಡೆಗಟ್ಟಿ ಮನುಕುಲಕ್ಕೆ ಶಾಂತಿ ಸಂದೇಶವನ್ನು ನೀಡುವ ಸಲುವಾಗಿ ಅಗ್ನಿ ಪ್ರವೇಶ ಮಾಡಿ ದೇವತಾ ಸ್ಥಾನಮಾನ ಪಡೆದ ಅವತಾರಿಣಿ. ಆಕೆ ಜನಿಸಿದ ವೈಶಾಖ ಶುಕ್ಲ ದಶಮಿ ಈ ವಾಸವಿ ಕನ್ಯಾಕಾ ಪರಮೇಶ್ವರಿ ಜಯಂತಿ.

# ಸಂಸ್ಕೃತ ಕಲಿಯೋಣ...!!

## चतुर्विंश पाठः

## ಪಾಠ-24

ರಚನೆ:- ಮಹಾಮಹೋಪಾಧ್ಯಾಯ ಕಾಶಿ ಕೃಷ್ಣಾಚಾರ್ಯ

पर्वतेषु = ಬೆಟ್ಟಗಳಲ್ಲಿ   शनैः = ಮೆಲ್ಲನೆ   ग्रामः = ಊರು   नीचैः = ಕಡಿಮೆಯಾಗಿ

अङ्गणम् = ಅಂಗಳವು, ಅಂಗಳವನ್ನು   उच्चैः = ಎತ್ತರವಾಗಿ

विध्यर्थकः = ಆದೇಶಾರ್ಥಕ

प्र. खादेत् = खादेयुः   खादेः = खादेत   उ. खादेयम् = खादेम

ಅವನು ತಿನ್ನಲಿ = ಅವರು ತಿನ್ನಲಿ   ನೀನು ತಿನ್ನು = ನೀವುಗಳು ತಿನ್ನಿರಿ   ತಿನ್ನುತ್ತೇನೆ = ತಿನ್ನುತ್ತೇವೆ

### ಪ್ರಶ್ನೆ

1. बालकाः अङ्गणे अन्नं खादन्ति।
2. अहम् इदानीमेव शनैः स्नानं कुर्याम्।
3. हे ब्राह्मणाः शनैः शनैः खादत।
4. शीघ्रं मा खादत।
5. अस्माकं बालकाः दौष्ट्यं कुर्वन्ति।
6. युष्मद्ग्रामतटाके जलं सम्यगस्ति।
7. तत्र सर्वदापि तथैव स्यात्।
8. अस्माकं मञ्चः उच्चैः अस्ति रे।
9. किञ्चित् नीचैः करिष्यसि किम्?
10. तथैव करिष्यामि तव मञ्चः कुत्रास्ति?

### ಉತ್ತರ

1. ಅವರೆಲ್ಲರೂ ಇಂದು ನಮ್ಮ ಮನೆಯಲ್ಲಿ ಊಟವನ್ನು ಮಾಡಲಿ.
2. ನಾಳೆ ನಾವು ಮತ್ತೆ ನಿಮ್ಮ ಮನೆಯಲ್ಲಿ ಊಟವನ್ನು ಮಾಡುತ್ತೇವೆ.
3. ಆವಾಗ ಅವರಾರೂ ಇಲ್ಲಿ ಇರಲಿಲ್ಲ.
4. ಆದ್ದರಿಂದಲೇ ನಮ್ಮ ಅಣ್ಣನು ನಿಮ್ಮ ಮನೆಯಲ್ಲಿ ಸ್ನಾನವನ್ನು ಮಾಡಿದ್ದಾನೆ.
5. ಇವಾಗ ನಿಮ್ಮ ಮನೆಯಲ್ಲಿ ಯಾರಾರು ಇದ್ದಾರೆ?
6. ನಿಮ್ಮ ಊರಿನಲ್ಲಿ ಕೆರೆಯು ಇದೆಯಾ?
7. ಇದೆಯಾಗಲಿ ಇವಾಗ ನೀರಿಲ್ಲ.
8. ನಮ್ಮ ಊರಿನಲ್ಲಿ ಬೆಟ್ಟಗಳು ಕೂಡ ಇವೆ.
9. ನಿಮ್ಮ ಊರಿನಲ್ಲಿ ನಮ್ಮ ತಂದೆಯು ಇಲ್ಲವಾ?
10. ಏಕೆ ಇಲ್ಲ? ಅಲ್ಲಿಯೇ ಇದ್ದಾನಲ್ಲವೇ?

### ಪ್ರಶ್ನೆ

1. ಹುಡುಗರು ಅಂಗಳದಲ್ಲಿ ಊಟ ಮಾಡುತ್ತಿದ್ದಾರೆ.
2. ನಾನು ಇವಾಗಲೇ ಮೆಲ್ಲನೆ ಸ್ನಾನವನ್ನು ಮಾಡಿದ್ದೇನೆ
3. ಎಲೈ ಬ್ರಾಹ್ಮಣರೇ ! ಮೆಲ್ಲಮೆಲ್ಲನೆ ತಿನ್ನಿರಿ.
4. ಬೇಗನೇ ತಿನ್ನಬೇಡಿರಿ.
5. ನಮ್ಮ ಹುಡುಗರು ಕೋಲಾಹಲ ಮಾಡುತ್ತಿದ್ದಾರೆ.
6. ನಿಮ್ಮ ಊರಿನ ಕೆರೆಯಲ್ಲಿ ನೀರು ಚೆನ್ನಾಗಿದೆ.
7. ಅಲ್ಲಿ ಯಾವಾಗಲೂ ಹಾಗೆಯೇ ಇರುವುದು.
8. ಎಲೈ ನಮ್ಮ ಮಂಚವು ಎತ್ತರದಲ್ಲಿ ಇದೆ.
9. ಸ್ವಲ್ಪ ಕೆಳಗೆ ಮಾಡುವಿಯಾ?
10. ಹಾಗೆಯೇ ಮಾಡುತ್ತೇನೆ. ಮಂಚವು ಎಲ್ಲಿ ಇದೆ?

### ಉತ್ತರ

1. ते सर्वे अद्य अस्माकं गृहे भोजनं कुर्युः।
2. श्वः वयं पुनः युष्मद्गृहे भोजनं करिष्यामः।
3. तदानीं ते केऽपि अत्र न आसन्।
4. तदर्थमेव मम भ्राता युष्मद्गृहे स्नानं अकरोत्।
5. इदानीं तव गृहे के के सन्ति भोः?
6. युष्मद् ग्रामे तटाकम् अस्ति वा?
7. अस्ति परम् इदानीं जलं नास्ति।
8. अस्माकं ग्रामे पर्वताः अपि सन्ति।
9. युष्मद् ग्रामे मम पिता नास्ति वा?
10. किमर्थं नास्ति। तत्रैव अस्ति खलु।



ನೀತಿಕಥೆ

# ನಾವು ನಿತ್ಯವೂ ವಿಶಾಲರಾಗೋಣ

ಎ.ಆರ್. ರಘುರಾಮ
99161 38436

ನಮಗೆ ಎದುರಾಗುವ ಎಲ್ಲ ಅಡೆತಡೆಗಳನ್ನೂ ಮೀರಿ ನಾವು ಸಂತೋಷದಿಂದ ಇರಲು ಸಾಧ್ಯವಾಗುತ್ತದೆಯೇ ? ಖಂಡಿತಾ ಹೌದು. ಅಡೆತಡೆ-ತೊಡಕುಗಳಿಗೆ ನಿಜವಾದ ಪರಿಹಾರ ನಮ್ಮಲ್ಲೇ ಅಡಗಿದೆ. ಅದು ಹೇಗೆ ಎಂದು ಕೊಂಚ ಅವಲೋಕಿಸೋಣ.

ಒಬ್ಬ ವಿದ್ಯಾರ್ಥಿ ಯಾವುದೋ ದುಃಖದಿಂದ ತೊಳಲಾಡುತ್ತಿದ್ದ. ಅದಕ್ಕೆ ಉತ್ತರ ಕಂಡುಕೊಳ್ಳಲಾಗದೆ ಕಂಗಾಲಾಗಿದ್ದ. ಕಡೆಗೆ ಆತ ತನ್ನ ಗುರು ವಿದ್ಯಾಸಿಂಹರಲ್ಲಿ ಬಂದು ತನಗೆ ಸಮಸ್ಯೆಯನ್ನು ಹೇಳಿಕೊಂಡ. ಕೊಡಲೇ ಅವರು ಒಂದು ಬಟ್ಟಲಿನಲ್ಲಿ ನೀರು ಇಟ್ಟರು ಅದಕ್ಕೆ ಒಂದು ಹಿಡಿ ಉಪ್ಪು ಹಾಕೆಂದು ವಿದ್ಯಾರ್ಥಿಗೆ ಹೇಳಿದರು. ನಂತರ ಆ ನೀರನ್ನು ಕುಡಿ ಎಂದರು, ರುಚಿ ಹೇಗಿದೆ ಮಗೂ ಎಂದು ಪ್ರಶ್ನಿಸಿದರು. ಬಾಯಿಗೆ ಇಡಲೂ ಆಗಲಿಲ್ಲ, ಅಷ್ಟು ಕ್ಷಾರವಿದೆ ಗುರುಗಳೇ ಎಂದು ಉತ್ತರಿಸಿದ.

ನಂತರ ಗುರುಗಳು ಶಿಷ್ಯನನ್ನು ಒಂದು ಕೊಳದ ಬಳಿ ಕರೆದುಕೊಂಡು ಹೋದರು. ಒಂದು ಹಿಡಿ ಉಪ್ಪನ್ನು ಕೊಳದಲ್ಲಿ ಹಾಕು ಎಂದು ತಿಳಿಸಿದರು. ನಂತರ ಒಂದು ಬೊಗಸೆ ಕೆರೆಯ ನೀರನ್ನು ತೆಗೆದುಕೊಂಡು ಕುಡಿಯಲು ಹೇಳಿದರು. ವಿದ್ಯಾರ್ಥಿಗೆ ಹೇಳಿ ದರು. ನಂತರ ಗುರುಗಳ ಆದೇಶವನ್ನು ಸಂಪೂರ್ಣ ಪಾಲಿಸಿದ ನೀರು ಕುಡಿದು ನಿರುಮ್ಮಳನಾಗಿದ್ದ. ಗುರುಗಳು ಮತ್ತೆ ಪ್ರಶ್ನೆ ಮಾಡಿದರು. ಈಗ ನೀರು,ಅದರ ರುಚಿ ಹೇಗಿತ್ತು ? ಚನ್ನಾಗಿತ್ತು ಎಂದು  ವಿದ್ಯಾರ್ಥಿ ಉತ್ತರಿಸಿದ.

ನಿನಗೆ ಕಾಡುತ್ತಿರುವ ದುಃಖಕ್ಕೆ ಈಗ ಉತ್ತರ ದೊರಕಿತು ನೋಡು ಎಂದರು ಗುರುಗಳು. ಪ್ರಶ್ನಾರ್ಥಕವಾಗಿ ತಮ್ಮನ್ನು ನೋಡಿದ ವಿದ್ಯಾರ್ಥಿಗೆ ಗುರುಗಳು ಸಾವಧಾನವಾಗಿ ಪ್ರಸಂಗವನ್ನು ಬಿಡಿಸಿ ಹೇಳಿದರು. ನೋಡು, ನೀನು ಮೊದಲು ಒಂದು ಬಟ್ಟಲು ನೀರಿಗೆ ಒಂದು ಬೊಗಸೆ ಉಪ್ಪನ್ನು ಹಾಕಿದೆ. ಬಟ್ಟಲು ಚಿಕ್ಕದು,ಉಪ್ಪಿನ ಪ್ರಮಾಣ ಜಾಸ್ತಿ ಇತ್ತು. ಅದನ್ನು ಕುಡಿಯಲು ನಿನಗೆ ಹಿಂಸೆಯಾಯಿತು ನಂತರ ಕೊಳದಲ್ಲಿ ಅಷ್ಟೇ ಪ್ರಮಾಣದ ಉಪ್ಪನ್ನು ಹಾಕಿದ್ದೀಯಾ, ಇಲ್ಲಿ ನೀರಿನ ಪ್ರಮಾಣ ಹೆಚ್ಚಾಗಿದೆ. ಒಂದು ಹಿಡಿ ಉಪ್ಪು ಇಡೀ ಕೊಳದ ನೀರಿನ ರುಚಿಯನ್ನು ಬದಲಿಸಲು ಸಾಧ್ಯವಾಗಲಿಲ್ಲ. ಹಾಗೆಯೇ ಜೀವನದಲ್ಲಿ ನಮ್ಮನ್ನು ಕಾಡುವ ನೋವು,ದುಃಖ, ಬೇಸರ,ದುಗುಡ, ದುಮ್ಮಾನಗಳೆಲ್ಲವೂ ಉಪ್ಪಿನಂತೆ, ಅದರ ಪ್ರಮಾಣ ಎಂದೂ ಏರುಪೇರಾಗುವುದಿಲ್ಲ.ಅದು ನಮ್ಮನ್ನು ಎಷ್ಟು ಕಾಡುತ್ತಿರುತ್ತದೆ ಎಂಬುದು ನಮ್ಮ ಮೇಲೆಯೇ ಅವಲಂಬಿತವಾಗಿರುತ್ತದೆ.

ನಾವು ಸಣ್ಣ ಬಟ್ಟಲಿನಂತೆಯೇ ಇದ್ದರೆ ದುಃಖ ನಮ್ಮನ್ನು ಹೆಚ್ಚಾಗಿ ನೋಯಿಸುತ್ತದೆ. ನಾವು ಕೊಳದಷ್ಟು ಕೆರೆಯಷ್ಟು ದೊಡ್ಡ ಮನೋಸ್ಥಿತಿಯನ್ನು ಹೊಂದಿದಾಗ ನಮ್ಮ ವಿಚಾರ ಧಾರೆಗಳನ್ನೂ, ಅಂತರಂಗದ ಸಾಮರ್ಥ್ಯವನ್ನೂ ಹೆಚ್ಚು ಮಾಡಿಕೊಂಡಾಗ ನಮಗೆ ಕಾಡುವ ದುಃಖದ ಪ್ರಮಾಣ ಕಡಿಮೆಯಾಗುತ್ತದೆ. ‘ನೀನೆಂದೂ ಬದುಕಿನಲ್ಲಿ ಪುಟ್ಟ ಬಟ್ಟಲಾಗಬೇಡ, ಕೊಳದಷ್ಟು ವಿಶಾಲವಾಗು, ಆಗ ಮನಸ್ಸು ನಿರುಮ್ಮಳವಾಗಿರುತ್ತದೆ’. ಬುದ್ಧಿ ವಿಕಸನವಾಗಲು ಹೊಸ ಹೊಸ ದ್ವಾರಗಳು ತೆರೆದುಕೊಳ್ಳುತ್ತವೆ ಎಂದು ಹರಸಿ ಕಳಿಸಿದರು.

ವಿದ್ಯಾರ್ಥಿಗೆ ಹೊಸ ಬೆಳಕು ಕಂಡಿತು. ಆಗ ಕುಣಿದಾಡುತ್ತಾ ಹೊರಟ, ನಾವು ಹಾಗೆಯೇ, ಬಹಳಷ್ಟು ಬಾರಿ ಸಣ್ಣ ಬಟ್ಟಲಾಗಿದ್ದು ಕೊಂಡೇ ನಮ್ಮನ್ನು ಕಾಡುವ ನೋವುಗಳಿಗೆ ಎಲ್ಲರನ್ನೂ ದೂಷಣೆ ಮಾಡುತ್ತಿರುತ್ತೇವೆ. ಅದು ಎಂದಿಗೂ ಸಲ್ಲ, ನಾವೆಲ್ಲರೂ ದೊಡ್ಡ ದೊಡ್ಡ ಕೆರೆಗಳಾಗಲು ನಿತ್ಯವೂ ಯತ್ನಿಸೋಣ. ಈ ಮಾರ್ಗದಲ್ಲಿ ಯಾವುದೇ ಅಡೆತಡೆಗಳು ಬಂದರೂ ಅವು ಕರಗಿ ಹೋಗುವುದು ಖಚಿತ.

**ಬಾಲ ವಿನೋಧಿನಿ**

**ಈ ಗೊಂಬೆಗೆ ಬಣ್ಣವನ್ನು ತುಂಬಿರಿ.......**



**ಪಕ್ಕದಲ್ಲಿರುವ ಗೊಂಬೆಯನ್ನು ಬರಿಯೋಣ...**



**ವೇದಾಂತ ಮಾರ್ಗ ಪರಿಪಂಥಿ ಸುರಾರಿವರ್ಯ**
**ಗರ್ವಾಪಹಾರಿ ಯತಿರೂಪ ಸುರಾಗ್ರಗಣ್ಯ !**
**ಸದ್ಭಾಷ್ಯಕಾರಿ ಸನಕಾದಿ ಯತೀಂದ್ರ ಸೇವ್ಯ ಶ್ರೀ**
**ಭಾರತೀಶ ಮಮ ದೇಹಿ ಕರಾವಲಂಬಮ್ !!**

ವೇದಾಂತ ಮಾರ್ಗದಲ್ಲಿ ಎದುರಾದ ವೈರಿಗಳ (ವಾದಿಗಳ) ಗರ್ವಾಪಹಾರಿಗಳಾದ, ದೇವಾದಿದೇವ ತೆಗಳಿಗೂ ಶ್ರೇಷ್ಠರಾದ ಯತಿ ಸಾರ್ವಭೌಮರಾದ, ಒಳ್ಳೆಯ ಭಾಷ್ಯಗಳನ್ನು ರಚನೆ ಮಾಡಿಕೊಟ್ಟಂಥ, ಸನಕಾದಿಗಳಿಂದಲೂ ಸ್ತುತಿಸಲ್ಪಡುವ ಪಾದಪದ್ಮ ಉಳ್ಳ ಶ್ರೀ ಭಾರತೀಪತಿಯಾದ ವಾಯುದೇವರು ನಮ್ಮನ್ನು ಕಾಪಾಡಲಿ.


**- ರಚನೆ : ವಿದ್ವಾನ್ ಆರಣಿ ವಾಸುದೇವಾಚಾರ್ಯ**

**ಈ ಅಕ್ಷರಗಳಲ್ಲಿ ಒಂದು ಗಾದೆ ಇದೆ ಕಂಡು ಹಿಡಿಯಿರಿ ನೋಡೋಣ....**

ಅ ಸೆ ತಿ ಡು

ಗ ತಿ ಆ ಕೇ

ಉತ್ತರ: ಅತಿ ಆಸೆ ಗತಿ ಕೇಡು



**ದಾರಿ ತೋರಿಸಿ**

ಗಂಗಾ ನದಿ ಎರಡು ಹಾದಿಯಲ್ಲಿ ಹರಿಯುತ್ತಿದೆ. ಆ ಮಹಿಳೆ ಯಾವ ಹಾದಿಯಲ್ಲಿ ಹೋದರೆ ಗಂಗಾ ಮಾತೆಗೆ ಆರತಿಯನ್ನು ನೀಡುವಳು. ಮಕ್ಕಳೇ ಆ ಮಹಿಳೆಗೆ ದಾರಿಯನ್ನು ತೋರಿಸಿ.

ತಿರುಮಲ ತಿರುಪತಿ ದೇವಸ್ಥಾನಗಳು

# ಮಕ್ಕಳೇ ಇದು ನಿಮಗಾಗಿ




## ಸೂಚನೆಗಳು

1. ಈ ಕ್ವಿಜ್ 10-15 ವರ್ಷ ವಯಸ್ಸಿನ ಮಕ್ಕಳು ಹಿಂದೂವಾಗಿರಬೇಕು.
2. ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳುವ ಮಕ್ಕಳ ತಂದೆ ತಾಯಿ ತಪ್ಪದೇ ಸಪ್ತಗಿರಿ ಮಾಸ ಪತ್ರಿಕೆಯ ಚಂದಾ ದಾರರಾಗಿರಬೇಕು.
3. ಕ್ವಿಜ್ ಪ್ರಶ್ನಾಪತ್ರಿಕೆಯಲ್ಲಿ ತಪ್ಪದೇ ತಮ್ಮ ಚಂದಾ ಸಂಖ್ಯೆ, ಹೆಸರು, ವಿಳಾಸ, ಪಿನ್‌ಕೋಡ್,ಫೋನ್ ನಂಬರ್ ಸ್ಪಷ್ಟವಾಗಿ ಬರೆಯಬೇಕು.
4. ಕ್ವಿಜ್ ಉತ್ತರಗಳನ್ನು ಪ್ರಶ್ನೆಯ ಕೆಳಗೆ ನಿರ್ದೇಶಿಸಿದ ಸ್ಥಳದಲ್ಲಿಯೇ ಬರೆದು ಕಳುಹಿಸಬೇಕು.
5. ಕ್ವಿಜ್ ಉತ್ತರದ ಜೆರಾಕ್ಸ್ ಅನ್ನು ತೆಗೆದುಕೊಂಡು ಕಳಿಹಿಸಿದವರು ಖಚಿತವಾಗಿ ಚಂದಾನಂಬರ್‌ನ್ನು ಕಳುಹಿಸಬೇಕು. ಒಬ್ಬ ಚಂದಾದಾರರು ಒಂದು ಉತ್ತರವನ್ನು ಮಾತ್ರವೇ ಕಳುಹಿಸತಕ್ಕದ್ದು.
6. ಉತ್ತರ ಬರೆಯುವಾಗ ಅಳಿಸುವುದು, ತಿದ್ದುವುದು ಮಾಡಬಾರದು.
7. ಉತ್ತರಗಳನ್ನು ನಮಗೆ ಕಳುಹಿಸುವ ಕೊನೆಯ ದಿನಾಂಕ 25.04.2023
8. ಈ ಕ್ವಿಜ್‌ನಲ್ಲಿ ಎಲ್ಲಾ ಉತ್ತರಗಳನ್ನು ಸರಿಯಾಗಿ ಬರೆದ ಮೂರು ಮಕ್ಕಳನ್ನು ಮಾತ್ರವೇ ವಿಜೇತರಾಗಿ ಲಕ್ಕಿ ಡಿಫ್ ಮುಖಾಂತರ ಆಯ್ಕೆ ಮಾಡಲಾಗುತ್ತದೆ.
9. ವಿಜೇತರಾದ ಮಕ್ಕಳ ಹೆಸರನ್ನು ಮುಂದಿನ ತಿಂಗಳ ಸಪ್ತಗಿರಿ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
10. ತಿ.ತಿ.ದೇ. ಪ್ರಧಾನ ಸಂಪಾದಕರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಉದ್ಯೋಗಿಗಳ ಮಕ್ಕಳು ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳಬಾರದು.
11. ಕ್ವಿಜ್‌ಗೆ ಸಂಬಂಧಿಸಿದ ಯಾವ ಸಮಾಚಾರವನ್ನು ಫೋನ್ ಮುಖಾಂತರ ನೀಡಲಾಗುವುದಿಲ್ಲ.

**ನಿಮ್ಮ ಉತ್ತರಗಳನ್ನು ಕಳುಹಿಸಬೇಕಾದ ವಿಳಾಸ**

ಪ್ರಧಾನ ಸಂಪಾದಕರು
ಸಪ್ತಗಿರಿ ಮಾಸಪತ್ರಿಕೆ
**ತಿ.ತಿ.ದೇ. ಪ್ರೆಸ್ ಕಾಂಪೌಂಡ್**
**ಕೆ.ಟಿ. ರಸ್ತೆ, ತಿರುಪತಿ : 517 507**
**ಆಂಧ್ರ ಪ್ರದೇಶ್**



# ರಸಪ್ರಶ್ನೆಗಳು


01. ಪುರಾಣಗಳಲ್ಲಿ ಗಂಗೆಯನ್ನು ಏನೆಂದು ವರ್ಣಿಸಲಾಗಿದೆ?.................................................
02. ರಾಮಾನುಜರು ಯಾವ ವಯಸ್ಸಿನಲ್ಲಿ ಸನ್ಯಾಸ ಸ್ವೀಕರಿಸಿದರು?.................................................
03. ವಿಷ್ಣುವಿನ ಆರನೇ ಅವತಾರ ಯಾವುದು?.................................................
04. ಶ್ರೀಮದ್ರಾಮಾಯಣ ಎಷ್ಟು ದ್ವಿಪದಿಗಳನ್ನೊಳಗೊಂಡಿದೆ?.................................................
05. ಆಚಾರ್ಯ ಶಂಕರರು ಶಾರದಾ ಮಂದಿರದ ಯಾವ ದಿಕ್ಕಿನ ಬಾಗಿಲನ್ನು ತೆಗೆಸಿದರು?.................................................
06. ನವದುರ್ಗೆಯರಲ್ಲಿ ಏಳನೇ ದುರ್ಗೆ ಯಾರು?.................................................
07. ಅರ್ಜುನನು ಯಾವ ಯಂತ್ರ ಭೇದಿಸಿ ದ್ರೌಪದಿಯನ್ನು ಗೆದ್ದನು?.................................................
08. ಮಹಾಮುನಿಗಳು ಯಾವ ಕ್ಷೇತ್ರದ ಮಹಿಮೆಯನ್ನು ತಿಳಿಸಿದರು?.................................................
09. ರಾಜನಿಗೆ ರೈಕ್ವರ ಉಪದೇಶದಿಂದ ಯಾವ ಕಣ್ಣು ತೆರೆಯಿತು?.................................................
10. ಬೇಸಿಗೆಯಲ್ಲಿ ಯಾವ ಪಾನೀಯವನ್ನು ಹೆಚ್ಚಾಗಿ ಸೇವಿಸಬೇಕು?.................................................
11. ದಾಸರು ಯಾವ ಅವತಾರದ ವರ್ಣನೆಯನ್ನು ಮಾಡಿದರು?.................................................
12. ಉತ್ಸವ ಮೂರ್ತಿಯ ಹೆಸರು?.................................................
13. ಪರಂಪರೆಯ ಏಳನೇ ಪೀಠಾಧಿಪತಿ ಯಾರು?.................................................
14. ಬೆಂಗಳೂರಿನ ಯಾವ ಕರಗ ಬಹಳ ಪ್ರಸಿದ್ಧವಾದುದು?.................................................
15. ಶೇಷದಾಸರು ಎಂದು ದೇಹತ್ಯಾಗ ಮಾಡಿದರು?.................................................

**ಹೆಸರು :**
**ಚಂದಾ ಸಂಖ್ಯೆ :**
**ತಂದೆಯ ಹೆಸರು :**
**ತಾಯಿಯ ಹೆಸರು:**

**ವಿಳಾಸ :**

**ದೂರವಾಣಿ ಸಂಖ್ಯೆ :**

ಇದರಲ್ಲಿ ಹೋಲಿಕೆ ಇಲ್ಲದ ಚಿತ್ರ ಯಾವುದು



........................................

........................................

........................................

........................................

ಸೀತಾರಾಮ ಕಲ್ಯಾಣ, ಗಂಗೆ ದಡದಲ್ಲಿರುವ ದೇವಾಲಯ, ಅಕ್ಷಯತೃತಿಯ, ಬೇಸಿಗೆ ಕಾಲದ ಹಣ್ಣುಗಳು ಇವುಗಳಿಗೆ ಸಂಬಂಧವಿಲ್ಲದ ಚಿತ್ರವನ್ನು ಕಂಡು ಹಿಡಿಯಿರಿ.



ಈ ಚಿತ್ರದಲ್ಲಿ ಒಟ್ಟು 7 ವ್ಯತ್ಯಾಸಗಳಿವೆ. ಮಕ್ಕಳೇ ಇದನ್ನು ಕಂಡು ಹಿಡಿಯಿರಿ ನೋಡೋಣ.





ಮೇಘ, ಬೆಟ್ಟ,ಋಷಿಯ ಅಂಗವಸ್ತ್ರ, ಚಿಕ್ಕಬೆಟ್ಟಗಳು,ತಾವರೆಹೂ, ಹುಲ್ಲು, ನೀರು ಹರಿಯುವ ದಾರಿ

**ಚಿತ್ರ ಕಥೆ**

# ಭಗೀರಥ ಪ್ರಯತ್ನ

ಕಥೆ : ತೆಲುಗು ಮೂಲ : ಡಾ॥ ಕೆ. ರವಿಚಂದ್ರನ್
ಅನುವಾದ : ಆರ್.ಕೆ.
ಚಿತ್ರಗಳು : ಟಿ. ಶಿವಾಜಿ




ಭಗೀರಥನು ಕಾಲ್ಬೆರಳುಗಳ ಮೇಲೆ ನಿಂತು ಒಂದು ವರ್ಷ ವಾಯುವನ್ನು ಆಹಾರವನ್ನಾಗಿ ತೆಗೆದುಕೊಂಡು ತಪಸ್ಸು ಮಾಡಿದನು.
ಭಗೀರಥ! ನಿನ್ನ ಆಸೆಯನ್ನು ಈಡೇರಿಸುತ್ತೇನೆ. ನಾನು ಗಂಗೆಯನ್ನು ತಲೆಯ ಮೇಲೆ ಧರಿಸುತ್ತೇನೆ.
ಶಂಕರನು ಹಿಮಾಲಯದಲ್ಲಿ ಬಿಂದು ಸರೋವರದ ಬಳಿ ಗಂಗೆಯನ್ನು ನಿಲ್ಲಿಸಿದನು. ಗಂಗಾ ಅಲ್ಲಿಂದ ಏಳು ಕೊಲ್ಲಿಗಳಾಗಿ ವಿಭಜಿಸುತ್ತದೆ. ಅದರಲ್ಲಿ ಒಂದು ಕೊಲ್ಲಿ ಭಗೀರಥನನ್ನು ಹಿಂಬಾಲಿಸಿದರು.
ಗಂಗೆಯು ಜಹ್ನು ಮಹರ್ಷಿಯ ಆಶ್ರಮದ ಮೂಲಕ ಹರಿದು ಆಶ್ರಮವನ್ನು ಮುಹರ್ಷಿ ನಾನು ನನ್ನ ಪಿತೃಗಳಿಗೆ
ವಿಮುಕ್ತಿಗೊಳಿಸಲು ಬಂದಿದ್ದೇನೆ ಇಷ್ಟು ದೂರ ಕರೆದು ಕೊಂಡು ಬಂದ ಗಂಗೆಯನ್ನು ನೀವು ತೆಗೆದು ಕೊಂಡಿದ್ದೀರಿ. ನನ್ನನ್ನು ಅನುಗ್ರಹಿಸಿ ಗಂಗೆಯನ್ನು ಬಿಟ್ಟು ಬಿಡಿ.
ಜಹ್ನು ಮಹರ್ಷಿಯು ಗಂಗೆಯನ್ನು ತೊರೆದನು. ಗಂಗೆಯು ಭಗೀರಥನನ್ನು ಅನುಸರಿಸಿ ಪಾತಾಳಲೋಕಕ್ಕೆ ಬಂದು ಅರವತ್ತು ಸಾವಿರ ಸಗರರ ಭಸ್ಮರಾಶಿಯ ಮೇಲೆ ಹರಿಯಿತು.
ಸಕಲಪಾಪಹಾರಿಣಿ ಗಂಗೆಯ ಅಲೆಗಳಲ್ಲಿ ತೂಗಾಡುತ್ತಾ ಶಾಪ ವಿಮೋಚನೆ ಪಡೆದು ಅರವತ್ತು ಸಗರರರು ದ್ವೀಪವನ್ನು ಸೇರಿದರು
ಶುಭಂ

ತಿರುಮಲೆ ತಿರುಪತಿ ದೇವಸ್ಥಾನಗಳು. ತಿರುಪತಿ

# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)

## ಚಂದಾ ನಮೂನೆ ಪತ್ರ

ಹೆಸರು ಮತ್ತು ವಿಳಾಸ :
(ಬಿಡಿಬಿಡಿ ಅಕ್ಷರಗಳಲ್ಲಿ ಅರ್ಥವಾಗುವಂತೆ ಇಂಗ್ಲೀಷಿನಲ್ಲಿ ಬರಿಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ) ☐☐☐☐☐☐

ಬೇಕಾಗುವ ಭಾಷೆ : ☐ ಕನ್ನಡ ☐ ತೆಲುಗು ☐ ಹಿಂದೀ ☐ ತಮಿಳು ☐ ಇಂಗ್ಲೀಷು ☐ ಸಂಸ್ಕೃತ

ವಾರ್ಷಿಕ /ಆಜೀವಚಂದಾ : ☐ ರೂ.240/- ☐ ರೂ.2,400/-( 12 ವರ್ಷ),

ವಿದೇಶಿ ವಾರ್ಷಿಕ ಚಂದಾ ☐ ರೂ. 1030/-

ಚಂದಾ ನವೀಕರಣ :

(ಅ) ಚಂದಾ ನಂಬರು :

(ಆ) ಭಾಷೆ :

ಸಲ್ಲಿಸಿದ ಹಣ :

ಡಿ. ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅಟ್‌ಪರ್ ಚೆಕ್ಕು ಮಾತ್ರವೇ :

ಸ್ಥಳ :

ದಿನಾಂಕ: ಚಂದಾದಾರರ ಸಹಿ

ಸಪ್ತಗಿರಿ ವಾರ್ಷಿಕ ಚಂದಾ ರೂ.240/-, ಆಜೀವ ಚಂದಾ (12 ವರ್ಷ) ರೂ.2,400/- ಗಳು ಡಿ. ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅಟ್‌ಪರ್ ಚೆಕ್ಕು ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ, ತಿ.ತಿ.ದೇ. ತಿರುಪತಿ. ಅವರ ಹೆಸರಿನಲ್ಲಿ ತೆಗೆಯ ಬೇಕು. ಸಪ್ತಗಿರಿ ಚಂದಾದಾರರಾಗಿ ಸೇರ ಬಯುಸುವವರು / ತಮ್ಮ ಚಂದಾ ನವೀಕರಿಸುವವರು ಈ ಕೂಪನ್‌ನಲ್ಲಿ ಅಥವಾ ಬಿಳಿಹಾಳಿಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು. ಎಂ.ಓ. ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳಿಸಿ.

ನಮ್ಮ ವಿಳಾಸ -"ಪ್ರಧಾನ ಸಂಪಾಕರು, ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ ಪ್ರೆಸ್ ಕಾಂಪೌಂಡ್, ಕೆ. ಟಿ. ರೋಡ್ಡು, ತಿರುಪತಿ - 517 507".

ಸಪ್ತಗಿರಿ ಚಂದಾ ವಿವರಣೆಗಾಗಿ ಫೋನ್‌ನಂಬರ್:0877- 2264359,0877-2264543

ತಿರುಮಲೆ ತಿರುಪತಿ ದೇವಸ್ಥಾನಗಳು

## ಟೋಲ್ ಫ್ರಿ ನಂಬರ್

ಸ್ವಾಮಿಯ ದರ್ಶನಾರ್ಥ ತಿರುಮಲೆಗೆ ಬರುವ ಭಕ್ತರ ಸೌಕರ್ಯಾರ್ಥಕ್ಕಾಗಿ ತಿರುಮಲೆ ತಿರುಪತಿ ದೇವಸ್ಥಾನದವರು **ಟೋಲ್ ಫ್ರಿ ನಂಬರ್** ಅನ್ನು ಏರ್ಪಡಿಸಿದ್ದಾರೆ.

ಯಾತ್ರಿಕರು, ಭಕ್ತರು ದೇವಸ್ಥಾನಕ್ಕೆ ಸಂಬಂಧಿಸಿದ ಸೂಚನೆ /ದೂರುಗಳನ್ನು ಮತ್ತು ಇತರ ಸಮಾಚಾರಕ್ಕಾಗಿ ಈ ನಂಬರನ್ನು ಸಂಪರ್ಕಿಸಬಹುದು.

**ತಿರುಮಲೆ ತಿರುಪತಿ ದೇವಸ್ಥಾನವು ಯಾತ್ರಿಕರಿಗೆ ಮತ್ತಷ್ಟು ಸೇವೆಯನ್ನು ನೀಡಲು ನಿಮ್ಮ ಸೂಚನೆಗಳನ್ನು ನೀಡಿರಿ.**

**ಟೋಲ್ ಫ್ರಿ ನಂಬರ್**

**18004254141**

0877-2233333,
0877-2277777

Printed by Sri P. Ramaraju, M.A., and Published by Dr. K. Radha Ramana, M.A., M.Phil., Ph.D., on behalf of Tirumala Tirupati Devasthanams and Printed and Published at Tirumala Tirupati Devasthanams Press, K.T.Road, Tirupati - 517 507.
Editor : Dr. V. G. Chokkalingam, M.A., Ph.D.

ತಿ.ತಿ.ದೇ, ಶಿಲ್ಪಕಳಾ ಶಾಲೆಯಲ್ಲಿ 2023 ಫೆಬ್ರವರಿ 13 ರಿಂದ 16 ರ ವರೆಗೆ ಶಿಲ್ಪಕಳಾ ಪ್ರದರ್ಶನ ನಡೆಯಿತು.
ಈ ಕಾರ್ಯಕ್ರಮದಲ್ಲಿ ತಿ.ತಿ.ದೇ, ಆಡಳಿತಮಂಡಳಿ ಅಧ್ಯಕ್ಷರು ಶ್ರೀ ವೈ.ವಿ. ಸುಬ್ಬಾರೆಡ್ಡಿ,
ತಿ.ತಿ.ದೇ, ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಎಸ್. ಭಾರ್ಗವಿ ಐ.ಏ.ಎಸ್,
ತಿ.ತಿ.ದೇ, ವಿದ್ಯಾಶಾಖಾಧಿಕಾರಿ ಶ್ರೀ ಭಾಸ್ಕರ್ ರೆಡ್ಡಿ, ತಿ.ತಿ.ದೇ, ಶಿಲ್ಪಕಳಾಶಾಲೆಯ ಪ್ರಾಂಶುಪಾಲರು
ಶ್ರೀ ವೆಂಕಟರೆಡ್ಡಿ ಇತರರು ಪಾಲ್ಗೊಂಡರು.









ತಿರುಪತಿಯಲ್ಲಿರುವ ಮಹತಿ ಕಳಾಕ್ಷೇತ್ರದಲ್ಲಿ ತಿ.ತಿ.ದೇ, ಪುರುಷ ಉದ್ಯೋಗಿಗಳಿಗೆ ಜೀವನಶೈಲಿ, ಮತ್ತು ಅಸ್ವಸ್ಥತೆಗಳ ಕುರಿತು ಜಾಗೃತಿ ಕಾರ್ಯಕ್ರಮದಲ್ಲಿ (11-02-2023 ರಿಂದ 13-02-2023 ರ ವರೆಗೆ ) ತಿ.ತಿ.ದೇ ಕಾರ್ಯನಿರ್ವಹಣಾಧಿಕಾರಿ ಶ್ರೀ ಏ.ವಿ. ಧರ್ಮಾರೆಡ್ಡಿ ಐ.ಡಿ.ಈ.ಎಸ್., ತಿ.ತಿ.ದೇ ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಎಸ್.ಭಾರ್ಗವಿ ಐ.ಏ.ಎಸ್., ಸ್ವಿಮ್ಸ್ ನಿರ್ದೇಶಕರು ಡಾ॥ ಬಿ.ವೆಂಗಮ್ಮ, ಶ್ರೀ ಪದ್ಮಾವತಿ ಚಿಕ್ಕಮಕ್ಕಳ ಹೃದಯಾಲಯ ಆಸ್ಪತ್ರೆಯ ನಿರ್ದೇಶಕರು ಡಾ॥ ಶ್ರೀನಾಥ್ ರೆಡ್ಡಿ ಇತರರು ಪಾಲ್ಗೊಂಡರು. ತಿ.ತಿ.ದೇ., ಸಂಯುಕ್ತ










SAPTHAGIRI (KANNADA) SPIRITUAL ILLUSTRATED MONTHLY Published by Tirumala Tirupati Devasthanams Printing on 25-03-2023 and Posting at Tirupati RMS.Regd. with the Registrar of Newspapers for India under RNI. No. APKAN/2021/80589. Postal Regd.No.TRP/156/2021-2023 "Licenced toPost Without Prepayment No. PMGK/RNP/WPP-04(6)/2021-2023" Posting on 20th of Every Month

